ಪುಸ್ತಕ ಪ್ರಪಂಚ

ಸಂಪುಟ ೨೯ ೧೯೭೩ ನವಂಬರ್ ಸಂಚಿಕೆ ೩



ವಿಷಯ ಸೂಚಿ

ಮುಖಚಿತ್ರ : ಭುವನೇಶ್ವರಿ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೯ | ನವಂಬರ್ ೧೯೮೪ | ಸಂಚಿಕೆ ೪

ಚಿಂತನಶೀಲ ಗಣ್ಯಸಾಹಿತಿ
ಡಾ|| ರಾ. ಯ. ಧಾರವಾಡಕರ

ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪ್ರಖ್ಯಾತಿ ಪಡೆದ ಹಳೆಯ ತಲೆಮಾರಿನ ಗಣ್ಯ ಸಾಹಿತಿಗಳ ಸಾಲಿನಲ್ಲಿ ವಿರಾಜಮಾನರಾಗಿರುವವರಲ್ಲಿ ಡಾ|| ರಾ. ಯ. ಧಾರವಾಡಕರರೂ ಒಬ್ಬರು. ತಮ್ಮ ಚಿಂತನಶೀಲ ವಿಚಾರಶೀಲ ದಾರ್ಶನಿಕ ಪ್ರತಿಭಾನ್ವಿತ ಲೇಖನಗಳಿಂದ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ. ಕಳೆದ ಐದು ದಶಕಗಳಿಂದಲೂ ಕರ್ನಾಟಕದ ಶೈಕ್ಷಣಿಕ; ಸಾಮಾಜಿಕ; ಸಾಹಿತ್ಯಕ ರಂಗಗಳಲ್ಲಿ ಅವ್ಯಾಹತವಾಗಿ ಅವಿರತವಾಗಿ ಅವಿಶ್ರಾಂತವಾಗಿ ಅಮೋಘ ಅಮೂಲ್ಯ ಸೇವೆ ಸಲ್ಲಿಸುತ್ತ ಬಂದಿದ್ದಾರೆ. ಅವರು ಕರ್ನಾಟಕಾಂಬೆಯ ವರಪುತ್ರರು. ಸರಸ್ವತಿಯ ನಿರಂತರ ಆರಾಧಕರು. ಈ ದಿಸೆಯಲ್ಲಿ ಅವರ ಸಮಗ್ರ ಜೀವನದ ಸ್ಥೂಲ ಪರಿಚಯ ಇಲ್ಲಿಮಾಡಿಕೊಡಲಾಗಿದೆ.

ಜನನ: ಶಿಕ್ಷಣ:

ಡಾ|| ರಾ. ಯ. ಧಾರವಾಡಕರರು ದಿನಾಂಕ: ೧೫-೭-೧೯೧೯ ರಂದು ಬಾಗಲುಕೋಟೆಯಲ್ಲಿ ಜನ್ಮವೆತ್ತಿದರು. ತಂದೆ ಯಲಗುರ್ದರಾವ; ತಾಯಿ; ಗಂಗಾಬಾಯಿ. ತಂದೆ–ತಾಯಿಗಳು ಇವರನ್ನು ರಾಜೇಂದ್ರನೆಂದು ಅತ್ಯಂತ ಮಮತೆಯಿಂದ ಕರೆದರು. ಹಾಗೆಯೇ ಇವರ ಪ್ರಾಥಮಿಕ, ಮಾಧ್ಯಮಿಕ ಅಭ್ಯಾಸವು ಬಾಗಲುಕೋಟೆಯಲ್ಲಿಯೇ ಜರುಗಿತು. ಪ್ರತಿಭಾನ್ವಿತ ಆದರ್ಶ ವಿದ್ಯಾರ್ಥಿಯಾಗಿ; ಚತುರ ಮಾತುಗಾರನಾಗಿ ಎಳೆವಯದಲ್ಲಿಯೇ ಶಿಕ್ಷಕರ ಆದರಾಭಿಮಾನಗಳಿಗೆ ಪಾತ್ರರಾದರು. ಇಂಗ್ಲೀಷ್ ನಾಲ್ಕನೆಯ ವರ್ಗದಲ್ಲಿರುವಾಗಲೇ 'ಸತ್ಯವಾನ್ ಸಾವಿತ್ರಿ' ಸಂಭಾಷಣೆಯನ್ನು ಸರಳರಗಳೆಯಲ್ಲಿ

ಸರಸವಾಗಿ ಹೆಣೆದು ೧೦೦ಕ್ಕೆ ೮೪ ರಷ್ಟು ಗುಣ ಪಡೆದರಂತೆ. ಈ ಭಾಗವನ್ನ ಅಧ್ಯಾಪಕ ವರ್ಗದಲ್ಲಿ ಓದಿ ತೋರಿಸಲಾಯಿತಂತೆ. ಬೆಳೆವ ಸಿರಿಯನ್ನು ಮೊಳ ಯಲ್ಲಿಯೇ ನೋಡು ಎಂಬಂತೆ ಇವರ ವಿದ್ಯಾರ್ಥಿ ಜೀವನವು ಜಯದಿಂ ಜಯದ ಕಡೆಗೆ ಸಾಗಿತು. ೧೯೩೬ ರಲ್ಲಿ ಆಗಿನ ಮ್ಯಾಟ್ರಿಕ್ ಪರೀಕ್ಷೆಯ ಉತ್ತಮ ತರಗತಿಯಲ್ಲಿ ತೇರ್ಗಡೆ ಹೊಂದಿ ಕಲಿತ ಶಾಲೆಗೆ ಕೀರ್ತಿತಂದರ ಆ ಸಂದರ್ಭದಲ್ಲಿ ಬಸವೇಶ್ವರ ಹಾಯ್‌ಸ್ಕೂಲಿನ ಪ್ರಿನ್ಸಿಪಾಲರಾಗಿದ್ದ ಎಸ ಎಫ್. ಕಟ್ಟಿಮನಿಯವರು ಇವರ ಯಶಸ್ಸಿಗೆ ಶ್ರೇಯಸ್ಸು ಕೋರಿ 'Quenti Darward' ಅಂಗ್ಲ ಕಾದಂಬರಿಯೊಂದನ್ನು ಕಾಣಿಕೆಯಾಗಿ ಅರ್ಪಿಸಿದ್ದನ (೩೦-೧೦-೧೯೩೬) ಇಂದಿಗೂ ಜೋಪಾನವಾಗಿ ಕಾಯ್ದಿಟ್ಟಿದ್ದಾರೆ. ಆ ಮ್ಯಾಟ್ರಿಕ್ ಪರೀಕ್ಷೆಯ ಪರಿಣಾಮ ೧೦೦ಕ್ಕೆ ೧೨ ರಂತೆ ಆಗಿತ್ತೆಂಬುದನ್ನು ಇಲ್ಲಿ ಗಮನಿಸಬೇಕು. ಅನಂತರ ಸಾಂಗ್ಲಿಯನ್ನೇ ತಮ್ಮ ಮುಂದಿನ ಅಭ್ಯಾಸ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡರು. ಅಲ್ಲಿಯ ಪ್ರಸಿದ್ಧ ವಿಲಿಂಗ್ಡನ ಕಾಲೇಜಿನಲ್ಲಿ ಅವರ ಉಚ್ಚ ತರಗತಿಯ ಅಭ್ಯಾಸ ಸರಾಗವಾಗಿಯೇ ಸಾಗಿತು ಕನ್ನಡವನ್ನೇ ಪ್ರಮುಖ ಭಾಷೆಯನ್ನಾಗಿ ತೆಗೆದುಕೊಂಡು ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಪಾಸಾಗಿ ಕಾಲೇಜಿನ 'Fellow' ಆದರು. ೧೯೪೨ರಲ್ಲಿ ಎಂ.ಎ. ಪರೀಕ್ಷೆಯಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಇಂಟರ ಮಿಡಿಯಟ್ ಅಭ್ಯಾಸ ಮಾಡುವಾಗ 'Indian Administration' ಎಂಬ ವಿಷಯದ ಮೇಲೆ ಉತ್ತಮ ಪ್ರಬಂಧ ಬರೆದು ಸುಪ್ರಸಿದ್ಧ ಇತಿಹಾಸ ತಜ್ಞ ಪ್ರೊ|| ಎನ್. ಆರ್ ಶರ್ಮರ ಮೆಚ್ಚುಗೆಗೆ ಪಾತ್ರರಾದರು. ಸಂಸ್ಕೃತ ವಿಷಯದಲ್ಲಿ ಹೆಚ್ಚು ಗುಣಪಡೆದು ಶಂಕರಶೇಟ್ ಬಹುಮಾನಕ್ಕೆ ಅರ್ಹರಾಗಿದ್ದರು, ಎಂ.ಎ. ಅಭ್ಯಾಸ ಮಾಡುತ್ತಿರುವಾಗ ಇವರು ಒಳ್ಳೆಯ ಮಾತುಗಾರರೆಂದು ಹೆಸರಾಗಿದ್ದರು. ಆಗಿನ ಪ್ರಾಚಾರ್ಯರಾಗಿದ್ದ ಕರ್ವೆಯ ವರು ಆವಾಗಲೇ ಡಾ|| ಧಾರವಾಡಕರರನ್ನು ಕೆಳಗಿನ ವರ್ಗಗಳಿಗೆ ಬೋಧನೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದರು. ಬಯಕೆ ಬರುವುದರ ಕಣ್ಸನ್ನೆಯ ಸಂಕೇತವಾಗಿತ್ತು. ಆಗ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನ ಹುದ್ದೆಯೊಂದಕ್ಕಾಗಿ ಪ್ರಯತ್ನಿಸಿದ್ದೂ ಆಯಿತು. ಆಯ್ಕೆಯಾಗದ್ದ ಕ್ಕಾಗಿ ಮುಂಬಯಿ ಸೆಕ್ರೆಟರಿಯೇಟ್ ಸೇರಿ ಎರಡು ವರುಷ ಕೆಲಸ ಮಾಡಿದರು. ಆಗ ಧಾರವಾಡದಲ್ಲಿ ಕೆ. ಇ. ಬೋರ್ಡ್ ಕಾಲೇಜ್ ಪ್ರಾರಂಭವಾಗಿತ್ತು. ಬಿ. ಎಂ. ಶ್ರೀ. ಪ್ರಾಚಾರ್ಯರಾಗಿದ್ದರು. ದಿ|| ಜಹಗೀರದಾರರ ಸಲಹೆಯಂತೆ

...ರವಾಡ ಕೆ. ಇ. ಬೋರ್ಡ್ ಕಾಲೇಜು ಸೇರಿದರು.

...ಿ.ಎಸ್.ಎಸ್. ಕಾಲೇಜು ಪ್ರಾಚಾರ್ಯರಾಗಿ:

ಡಾ॥ ರಾ. ಯ. ಧಾರವಾಡಕರ ಪ್ರಧಾನ ಭಾಷೆ ಕನ್ನಡವಾಗಿದ್ದರೂ ...ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿಯೂ ಪಾರಂಗತರು. ಕೆ. ಇ. ಬೋರ್ಡ್ ...ಾಲೇಜಿನಲ್ಲಿ ಕನ್ನಡದೊಂದಿಗೆ ಇಂಗ್ಲೀಷ್ ಭಾಷೆಯನ್ನು ಬೋಧಿಸುತ್ತಿದ್ದರು. ...ಧ್ಯಯನ, ಅಧ್ಯಾಪನಗಳಲ್ಲಿ ವಿಶೇಷ ಆಸಕ್ತಿ ವಹಿಸಿದರು. ದಿ. ೫-೧-೧೯೪೬ ...ಂದು ಕನ್ನಡದ ಕಣ್ವರೆಂದು ಹೆಸರಾದ ಬಿ. ಎಂ. ಶ್ರೀ ಯವರು ದಿವಂಗತ ...ಾದರು. ಆಗ ಡಾ॥ ಧಾರವಾಡಕರರೇ ಪ್ರಾಚಾರ್ಯರಾದರು. ಆಗ ಅವರ ವಯಸ್ಸು ಕೇವಲ ೨೭. 'Youngest Principal' ಎಂಬ ಬಿರುದು ಲಭಿಸಿತು. ಆ ನಂತರ ಕೆಲವು ಕಾಲ (೧೯೪೮ ರಿಂದ ೧೯೫೨) ಜಠಾರರು ಪ್ರಿನ್ಸಿಪಾಲರಾಗಿದ್ದರು. ಅಧ್ಯಾಪನದಲ್ಲಿಯೇ ಅಭಿರುಚಿಯಿದ್ದ ಡಾ॥ ಧಾರವಾಡ ಕರರಿಗೆ ಮತ್ತೆ ಪ್ರಾಚಾರ್ಯ ಹುದ್ದೆ ಹುಡುಕಿಕೊಂಡು ಬಂತು. ಆಗ ಬಿದ್ದ ಬ್ರಹ್ಮಗಂಟು ಅವರು ನಿವೃತ್ತಿಯಾಗುವವರೆಗೂ ಬಿಚ್ಚಲಿಲ್ಲ (೧೯೭೫). ಅದರೊಂದಿಗೆ ಆಡಳಿತಮಂಡಳಿಯ ಕಾರ್ಯದರ್ಶಿಯಾಗಿಯೂ ಕಾರ್ಯಭಾರ ನಿರ್ವಹಿಸಿದರು. ಸತತ ಇಪ್ಪತ್ತೊಂಬತ್ತು ವರುಷಗಳ ಕಾಲ ಪ್ರಾಚಾರ್ಯ ರಾಗಿದ್ದರು. ಅಂತೆಯೇ ಇವರ ಶಿಷ್ಯಸಂಪತ್ತು ಇತರರು ಕರಬುವಷ್ಟು ದೊಡ್ಡದು. ಜಗತ್ತಿನಾದ್ಯಂತವಾಗಿ ಇವರ ಕೈಯಲ್ಲಿ ಕಲಿತ ವಿದ್ಯಾರ್ಥಿಗಳು ಹರಡಿಕೊಂಡಿದ್ದಾರೆ.

ರಾಜಭಾಷಾ ಆಯೋಗದ ಸದಸ್ಯರಾಗಿ:

ಇವರ ಬಹುಮುಖ ಪರಿಣತಿಯ ಉಪಯೋಗವನ್ನು ಸರಕಾರವು ಪಡೆದು ಕೊಂಡಿತು. ರಾಜಭಾಷಾ ಆಯೋಗದ ಪೂರ್ಣಾವಧಿ ಸದಸ್ಯರಾಗಿ ನೇಮಕ ಗೊಂಡರು. ಕನ್ನಡದಲ್ಲಿ ಕಾನೂನು ಪುಸ್ತಕಗಳ ಅನುವಾದ ಕಾರ್ಯವನ್ನು ಸಮರ್ಥ ರೀತಿಯಿಂದ ಯಶಸ್ವಿಯಾಗಿ ಪೂರ್ತಿಗೊಳಿಸಿ ಕೇಂದ್ರ ಸರಕಾರದ ಮೆಚ್ಚುಗೆಗೆ ಪಾತ್ರರಾದರು.

ಸೆನೇಟ್; ಸಿಂಡಿಕೇಟ್; ಅಕ್ಯಾಡಮಿಕ್ ಕೌನ್ಸಿಲ್ ಸದಸ್ಯರಾಗಿ:

ಡಾ॥ ರಾ. ಯ. ಧಾರವಾಡಕರರು ಕರ್ನಾಟಕ ವಿಶ್ವವಿದ್ಯಾಲಯದ ಸೆನೇಟ್; ಸಿಂಡಿಕೇಟ್ ಸದಸ್ಯರಾಗಿ ಸಮರ್ಥ ಸೇವೆ ಸಲ್ಲಿಸಿದರು. ವಿಶ್ವವಿದ್ಯಾ

ಲಯದ ಬೆಳವಣಿಗೆಯಲ್ಲಿ ತಮ್ಮ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿದರು. ಅಂತೆಯೇ ಎರಡು ಅವಧಿ ಇವರು ಆಯ್ಕೆಗೊಂಡರು (೧೯೬೫ ರಿಂದ ೧೯೭೫). ಹಾಗೆಯೇ ವಿಶ್ವವಿದ್ಯಾಲಯದ ಲಾಯಬ್ರರಿ ಕಮಿಟಿ ಸದಸ್ಯರಾಗಿ, ಕಲಾ ವಿಭಾಗದ ಡೀನರಾಗಿಯೂ ಕೆಲಸ ಮಾಡಿದರು. ಇದರೊಂದಿಗೆ ಮುಂಬೈ, ಬೆಂಗಳೂರು ಶಿವಾಜಿ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗದ ಅಭ್ಯಾಸ ಮಂಡಳಿ ಗಳ ಸದಸ್ಯರಾಗಿ ಸೂಕ್ತ ಮಾರ್ಗದರ್ಶನ ಮಾಡಿದ ಹಿರಿಮೆ ಇವರದಾಗಿದೆ.

ಚತುರ ವಾಗ್ಮಿಗಳಾಗಿ:

ಡಾ|| ರಾ. ಯ. ಧಾರವಾಡಕರ ವ್ಯಕ್ತಿತ್ವದ ಅತ್ಯಂತ ಮಹತ್ವದ ಮುಖ ವೆಂದರೆ ಅವರ ಸರಸವಾದ ವಿಚಾರ ಪರಿಪೂರ್ಣವಾದ ತರ್ಕಬದ್ಧವಾದ ಮಾತು ಗಾರಿಕೆ. ಈ ಕಲೆ ಇವರಿಗೆ ಸಹಜವಾಗಿ ಒಲಿದುಬಂದಿದೆ; ರಸಿಕನಾಡಿದ ಮಾತು ಶಶಿ ಉದಿಸಿ ಬಂದಂತೆ' ಎಂಬ ಸರ್ವಜ್ಞವಾಣಿಗೆ ಇವರು ಉತ್ಕೃಷ್ಟ ಉದಾಹರಣೆ. 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ಬಸವಣ್ಣ ನವರ ವಾಣಿಯಂತೆ, ಶೃತಿಮಾಡಿಟ್ಟ ವೀಣೆಯಂತೆ, ಇವರು ಮಾತನಾಡಲು ಪ್ರಾರಂಭಿಸಿದರೆ—ಗಂಭೀರವಾಗಿ ಹರಿಯುವ ಗಂಗೆಯಂತೆ ಕೇಳುಗರ ಮನದ ಮೇಲೆ ಮೋಡಿ ಹಾಕುತ್ತಾರೆ. ಭಾಷಣ ಮುಗಿಯುವವರೆಗೆ ಮಂತ್ರಮುಗ್ಧ ರಾಗಿ ಕೇಳುವಂತೆ ಮಾಡುವ ಶಕ್ತಿ ಇವರಿಗಿದೆ. ಮಧ್ಯೆ ಮಧ್ಯೆ ನಗೆಗಡಲಿನ ಉಲ್ಲೇಖಗಳು ಕೇಳುಗರಲ್ಲಿ ಕುತೂಹಲ ಕೆರಳಿಸುತ್ತವೆ; ಆಸಕ್ತಿ ಹೆಚ್ಚಿಸುತ್ತವೆ. ವಿಶಾಲವಾದ ಓದು; ಅಪಾರವಾದ ಅನುಭವ; ಜೀವನಾನುಭವಗಳಿಂದ—ಈ ಮಹಾಕಲೆ ಇವರಿಗೆ ಸಾಧಿಸಿದೆ. ಇನ್ನೂ ವಿದ್ಯಾರ್ಥಿಯಾಗಿರುವಾಗಲೇ ಮಾತ ನಾಡುವ ಅಭ್ಯಾಸ ಮಾಡಿದ್ದರಿಂದಲೇ ಈ ಯಶಸ್ಸು ಪ್ರಾಪ್ತಿಯಾಗಿದೆ ಯೆಂದರೂ ತಪ್ಪಲ್ಲ. ಆದುದರಿಂದ ನಾಡಿನಾದ್ಯಂತವಾಗಿ ವಿದ್ವತ್‌ಸಭೆಗಳ ಅಧ್ಯಕ್ಷರಾಗಿ, ಅತಿಥಿಗಳಾಗಿ ಸಂಚರಿಸಿದ್ದಾರೆ. ತಮ್ಮ ಅಪಾರ ಅನುಭವದ ಅಮೃತವನ್ನು ಉಣಬಡಿಸಿದ್ದಾರೆ. ನಮ್ಮ ನಾಡಿನ ಚತುರ ವಾಗ್ಮಿಗಳ ವಿರಳ ಸಾಲಿನಲ್ಲಿ ಇವರೊಬ್ಬರು. ಇಂದಿಗೂ ಸಹ ಮಹಾ ವಿದ್ಯಾಲಯಗಳ ವಾರ್ಷಿಕೋತ್ಸವದ ಮುಖ್ಯ ಅತಿಥಿಗಳಾಗಿ ಯುವಪೀಳಿಗೆಯಲ್ಲಿ ಜ್ಞಾನಜ್ಯೋತಿ ಯನ್ನು ಹೊತ್ತಿಸುತ್ತಿದ್ದಾರೆ.

ಸಾರ್ವಜನಿಕ ಸೇವಾಪ್ರಶಸ್ತಿ ವಿಜೇತರು:

ಡಾ|| ಧಾರವಾಡಕರರು ಸದಾ ಸಾಮಾಜಿಕಪ್ರಜ್ಞೆ ಒಳಗೊಂಡ ಶಿಕ್ಷಣಕ್ಕೆ

ಹೆಚ್ಚಿನ ಒತ್ತು ಕೊಡುತ್ತಿದ್ದರು ; ನೆರೆಹಾವಳಿಗಾಗಿ ಧನಸಂಗ್ರಹ, ಅಪಘಾತಕ್ಕೆ ಒಳಗಾದವರಿಗೆ ಸಕಾಲಿಕ ಸಹಾಯ ಈ ಬಗೆಯ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳ ಹೃದಯದಲ್ಲಿ ಅಚ್ಚೊತ್ತಿ ಮೂಡುವಂತೆ ಪ್ರತಿಬಿಂಬಿಸುತ್ತಿದ್ದರು. ಈ ಬಗೆಯ ಸಾರ್ವಜನಿಕ ಸೇವಾಮನೋಭಾವನೆಯನ್ನು ಮನಗಂಡು ಶಿಕ್ಷಣ-ಸಾಹಿತ್ಯ-ಸಂಸ್ಕೃತಿ-ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಆಗಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ೧೯೬೧ರಲ್ಲಿ ಸಾರ್ವಜನಿಕ ಸೇವಾ ಪ್ರಶಸ್ತಿಯನ್ನು ನೀಡಿದರು. ಹಾಗೆಯೇ ೧೯೬೨ರಲ್ಲಿ ಸಿದ್ಧಗಂಗೆಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜರುಗಿದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿದ್ದರು. ೧೯೮೨ರಲ್ಲಿ ಸಿರ್ಸಿಯ ಸಮ್ಮೇಳನದಲ್ಲಿ ಭಾಷಾ ಬಾಂಧವ್ಯ ಗೋಷ್ಠಿಯ ಉದ್ಘಾಟಿತರಾಗಿದ್ದರು. ೧೯೬೪ರಲ್ಲಿ ಅಮೇರಿಕಾ ಸರಕಾರದ ವಿಶೇಷ ಆಮಂತ್ರಣದ ಮೇರೆಗೆ ಆ ದೇಶವನ್ನು ಸಂದರ್ಶಿಸಿ ಅಲ್ಲಿಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ವಿಚಾರಪ್ರಚೋದಕ ಉಪನ್ಯಾಸವಿತ್ತರು. ೧೯೭೦ರಲ್ಲಿ ಪಾಂಡಿಚೆರಿಯಲ್ಲಿ ಜರುಗಿದ ಅಖಿಲ ಭಾರತ ವಯಸ್ಕರ ಶಿಕ್ಷಣ ಸಮಿತಿಯ ಸಭೆಯಲ್ಲಿ ಅದರ ಉಪಾಧ್ಯಕ್ಷರಾಗಿ ಆಯ್ಕೆಗೊಂಡದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಇಂದಿನ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕಾಗಿದೆ. ಸ್ಕೂಟರ್ ರಿಪೇರಿ, ಇಲೆಕ್ಟ್ರಿಕ್ ಉಪಕರಣಗಳ ತಯಾರಿ ಈ ಬಗೆಯ ಶಿಕ್ಷಣವನ್ನು ನಮ್ಮ ವಿದ್ಯಾರ್ಥಿಗಳಿಗೆ ಕಲಿಸಿದರೆ, ಇದರಿಂದ ಅವರ ಜೀವನ ಉಜ್ವಲವಾಗಬಹುದು ಎಂಬ ಅನೇಕ ಪ್ರಗತಿಪರ ವಿಚಾರಗಳನ್ನು ಮುಂದಿಡುವ ಅವರ ವಿಚಾರಗಳು ಗಮನಾರ್ಹವಾಗಿವೆ. ಇಂದಿನ ಸಾಹಿತ್ಯ ಲೋಕದಲ್ಲಿಯೂ ಅನೇಕ ಬದಲಾವಣೆಗಳು ಮೂಡಿಬರಬೇಕಾಗಿದೆಯೆಂದೂ ಅಭಿಪ್ರಾಯಪಡುತ್ತಾರೆ. ನಮ್ಮ ಸಾಹಿತ್ಯ ಪ್ರೇರಣೆಗಳು ಕುತೂಹಲಕಾರಿಯಾಗಿರಬೇಕು, ಹೆಚ್ಚಿನ ಲವಲವಿಕೆಯಿಂದ ಕೂಡಿರಬೇಕು. ಈ ದಿಶೆಯಲ್ಲಿ ಮರಾಠಿ ಸಾಹಿತ್ಯ ದಿಟ್ಟ ಹೆಜ್ಜೆಯನ್ನು ಇಟ್ಟಿದೆ ಎನ್ನುತ್ತಾರೆ ; ಡಾ|| ಧಾರವಾಡಕರರು. ೧೯೭೩ ರಿಂದ ಸರಕಾರವು ಇವರಿಗೆ ೫೦೦ ರೂ. ಗೌರವ ವೇತನ ನೀಡಿ ಪ್ರೋತ್ಸಾಹಿಸಿದೆ. ಅನೇಕ ಗ್ರಂಥಗಳನ್ನು ಪ್ರಕಟಿಸುವ ಯೋಜನೆ ಹಾಕಿಕೊಂಡಿದ್ದಾರೆ. ಅವರು ಇದುವರೆಗೆ ಬರೆದ ಕೃತಿಗಳ ವಿವರವಿದು.

ಕೃತಿರತ್ನಗಳು :

೧೯೭೩ರಲ್ಲಿ 'ಹೊಸಗನ್ನಡ ಸಾಹಿತ್ಯದ ಉದಯದ ಕಾಲ' ಎಂಬ ವಿಷಯದ

ಮೇಲೆ ಮಹಾಪ್ರಬಂಧ ರಚಿಸಿ ಪಿ.ಎಚ್.ಡಿ. ಪದವಿ ಪಡೆದರು. ಸದಾ ಜಿಜ್ಞಾಸುಗಳಾದ ಡಾ|| ರಾ.ಯ. ಧಾರವಾಡಕರರ ಪಳಗಿದ ಹಸ್ತದಿಂದ ಅನೇಕ ಕೃತಿರತ್ನಗಳು ಹೊರಬಂದಿವೆ; ಕನ್ನಡ ಸಾಹಿತ್ಯ ಸರಸ್ವತಿಯ ಭಂಡಾರದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಈಗಲೂ ಕೂಡ ನಮ್ಮ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗುತ್ತಲಿವೆ. ಪುಸ್ತಕರೂಪದಿಂದ ಹೊರಬಂದ ಕೃತಿಗಳಿವು: (೧) ಪತ್ರಿಕಾ ವ್ಯವಸಾಯ (೧೯೪೮), (೨) ಕರ್ನಾಟಕದಲ್ಲಿ ವೃತ್ತಪತ್ರಿಕೆಗಳು (೧೯೪೯), (೩) ಸಾಹಿತ್ಯ ಸಮೀಕ್ಷೆ (೧೯೪೯), (೪) ನಮ್ಮ ದೇಶದ ಯೋಜನೆಗಳು (೧೯೫೩), (೫) ಲೋಕಮಾನ್ಯ ಟಿಳಕರು (೧೯೫೬), (೬) ಬಾಪು ಕಾವ್ಯಾಂಜಲಿ (೧೯೫೮), (೭) ವಿದ್ಯಾರ್ಥಿಗಳು (೧೯೫೯), (೮) ದೇವರು-ಧರ್ಮ (೧೯೬೦), (೯) ಆರು ಪ್ರಬಂಧಗಳು (೧೯೬೨), (೧೦) ಕನ್ನಡ ಭಾಷಾಶಾಸ್ತ್ರ, (೧೧) ವಿಜಯದುಂದುಭಿ (೧೯೬೩), (೧೨) ಧೂಮ್ರ ವಲಯಗಳು (೧೯೬೫), (೧೩) ಭೀಷ್ಮ ಪರ್ವಸಂಗ್ರಹ (೧೯೭೩), (೧೪) ಹೊಸಗನ್ನಡ ಸಾಹಿತ್ಯದ ಉದಯಕಾಲ (೧೯೭೫), (೧೫) ಕನ್ನಡದಲ್ಲಿ ಕಾನೂನು ಸಾಹಿತ್ಯ (೧೯೭೬), (೧೬) ವೆಂಕಟ ರಂಗೋ ಕಟ್ಟಿ (೧೯೭೮), (೧೭) ತೂರಿದ ಚಿಂತನಗಳು (೧೯೮೨), (೧೮) ಶಾಂತ ಕವಿಗಳ ಮೂರು ಕೀರ್ತನೆಗಳು (೧೯೮೩), (೧೯) ನವಿಲುಗರಿ (ಅಚ್ಚಿನಲ್ಲಿ). ಸಮರ್ಥ ಸಂಪಾದಕರಾಗಿಯೂ ಹಲವಾರು ಕೃತಿಗಳನ್ನು ಹೊರತಂದಿದ್ದಾರೆ. ಕನ್ನಡದಲ್ಲಿ ಗಾಂಧಿ ಸಾಹಿತ್ಯವನ್ನು ಜನಪ್ರಿಯ ಮಾಡಬೇಕೆಂಬ ಉನ್ನತ ಉದ್ದೇಶದಿಂದ ಗಾಂಧಿ ಸಾಹಿತ್ಯ ಮಾಲೆಯ ಪ್ರಧಾನ ಸಂಪಾದಕರಾಗಿ ಇಪ್ಪತ್ತಕ್ಕೂ ಮಿಕ್ಕ ಕೃತಿಗಳು ಪ್ರಟಕವಾಗಿವೆ. ಅವು ವಿದ್ಯಾರ್ಥಿಗಳಿಗೆ ಬಹು ಪ್ರಯೋಜನಕಾರಿಯಾಗಿವೆ. ಅನೇಕ ಕೃತಿಗಳು ಹಲವಾರು ಅವೃತ್ತಿಗಳನ್ನು ಪಡೆದಿವೆ, ಜನಪ್ರಿಯವಾಗಿವೆ, ಪಠ್ಯಪುಸ್ತಕಗಳಾಗಿವೆ. ಆಧಾರಕೃತಿಗಳಾಗಿವೆ.

ವಿಚಕ್ಷಕ ವಿಮರ್ಶಕರ ಅಭಿಪ್ರಾಯಗಳು :

ವರಕವಿ ದಿ|| ಡಾ|| ದ. ರಾ. ಬೇಂದ್ರೆಯವರು ಇವರ 'ಪತ್ರಿಕಾ ವ್ಯವಸಾಯ' ಕುರಿತು ಹೀಗೆ ಬರೆದಿದ್ದಾರೆ: 'ಬಹಳ ಒಳ್ಳೇ ಪ್ರಬಂಧವನ್ನು' ಬರೆದಿದ್ದೀರಿ. ವಿಷಯ ಸಂಗ್ರಹವನ್ನು ಬಹು ಜಾಣ್ಮೆಯಿಂದ ಮಾಡಿದ್ದೀರಿ. ನಿಮ್ಮ ಕೊನೆಯ ಅಧ್ಯಾಯ ನಿಮ್ಮ ಜೋಕೆ ತೂಕದ ವಿಚಾರವನ್ನು ತೋರಿಸುತ್ತದೆ. (ಸಾಹಿತ್ಯ ಪತ್ರಿಕಾ ವ್ಯವಸಾಯ) ಗಂಡಭೇರುಂಡ ಸರಿ; ಆದರೆ, ಈ ಎರಡೂ ರುಂಡಗಳು

ತಮ್ಮ ತಮ್ಮಲ್ಲಿಯೇ ಕಡಿದಾಡದಂತೆ ನೋಡಿಕೊಳ್ಳುವುದು ನಿಮ್ಮಂತಹ ವಿವೇಕಿಗಳು ಮಾಡಬೇಕಾದ ಕೆಲಸವೆಂದಿದ್ದರೆ, ಅವರ ಸಾಹಿತ್ಯ ಸಮೀಕ್ಷೆ ಕುರಿತು ಡಾ|| ವಿ. ಕೃ. ಗೋಕಾಕ ಅವರು ಹೀಗೆ ನುಡಿದಿದ್ದಾರೆ: "ಶ್ರೀ ಧಾರವಾಡಕರರು ಉಭಯ ಭಾಷಾವಿಶಾರದರು. ಆಂಗ್ಲ ಸಾಹಿತ್ಯದಲ್ಲಿಯೂ ಅವರಿಗೆ ಕನ್ನಡ ಸಾಹಿತ್ಯದಷ್ಟೇ ಅಭಿರುಚಿಯಿದೆ....ವ್ಯುತ್ಪತ್ತಿ, ಪ್ರತಿಭೆ, ಇಲ್ಲವೆ ಒಂದು ಕೃತಿಯ ತಿರುಳನ್ನೇ ಕಂಡುಹಿಡಿಯುವ ತೀಕ್ಷ್ಣಬುದ್ಧಿ, ಹೆಚ್ಚಿನದನ್ನು ತಿಳಿದುಕೊಳ್ಳಬೇಕೆಂಬ ಪ್ರಜ್ಞೆ—ಇವಿಲ್ಲದೆ ಸಾಹಿತ್ಯವಾಗಲಿ, ವಿಮರ್ಶೆಯಾಗಲಿ ಉನ್ನತಿ ಹೊಂದಲಾರದು. ಇಲ್ಲಿಯ ವಿಮರ್ಶೆಗಳ ಕೆಚ್ಚು ಮೇಲೆ ತೋರಿಸಿದ ಗಣಿಯಿಂದಲೇ ತಂದುದಾಗಿದೆ." "ಭಾಷೆಯ ಇತಿಹಾಸದಲ್ಲಿ ಈ ನಿಮ್ಮ ಗ್ರಂಥ ವಿಶಿಷ್ಟವಾದ ಸ್ಥಾನವನ್ನು ಪಡೆಯುವದರಲ್ಲಿ ಸಂದೇಹವಿಲ್ಲ. ಮುಂದಿನ ವ್ಯಾಸಂಗ—ಸಂಶೋಧನೆಗಳಿಗೆ ಇದು ತಳಹದಿಯಾಗಿರುತ್ತದೆ. ಈ ಗ್ರಂಥ ರಚನಾಕಾರ್ಯದಲ್ಲಿ ನೀವು ಪಟ್ಟಿರುವ ಶ್ರಮ ಎಷ್ಟೆಂಬುದನ್ನು ಓದಿದವರೇ ಗ್ರಹಿಸಬಲ್ಲರು. ನಿಮ್ಮ ದುಡಿಮೆ, ಸಹನೆ ಮತ್ತು ಸಾಹಸಗಳು ವಾಸ್ತವವಾಗಿಯೂ ಸ್ತುತ್ಯಾರ್ಹವಾಗಿವೆ" ಎಂದು 'ಕನ್ನಡ ಭಾಷಾಶಾಸ್ತ್ರ' ಕುರಿತು ರಾಷ್ಟ್ರಕವಿ ಕುವೆಂಪು ಉದ್ಗಾರವೆತ್ತಿದ್ದರೆ, ಇನ್ನೊಬ್ಬ ರಾಷ್ಟ್ರಕವಿ ಗೋವಿಂದ ಪೈ ಹೀಗೆ ತಮ್ಮ ಅಭಿಪ್ರಾಯ ಪಟ್ಟಿದ್ದಾರೆ: "ತಮ್ಮ ಗ್ರಂಥ ಅತ್ಯುಚ್ಚ ತರಗತಿಯದು. ಇಂಥಾ ಗ್ರಂಥವೆಂದರೆ, ಆಂಗ್ಲವೇ ಇತ್ಯಾದಿ ಈಗಣ ಜಗತ್ತಿನಲ್ಲಿ 'ಅ–ಗ'ನೆಯದೆಂದು ಪರಿಗಣಿಸಲ್ಪಡುತ್ತಿರುವ ಭಾಷೆಗಳಲ್ಲಿ ರಚಿಸಲ್ಪಡುವ ಗ್ರಂಥವಲ್ಲದೆ, ಕನ್ನಡದಂಥಾ 'ಹಿಂದಣ' ಭಾಷೆಯಲ್ಲಿ ಅಲ್ಲ. ಅತಏವ ಇದು ಕನ್ನಡದಲ್ಲಿ ಬರೆಯಲ್ಪಟ್ಟ ಕಾರಣ, ಕನ್ನಡದ ಗೌರವ ಒಂದೇಸಮನೆ ಕೆಲವು ಮಾರು ಮುಂದುವರಿಯಿತು. ಇದನ್ನು ಬಗೆಯಲಿಕ್ಕೂ, ಬರೆಯಲಿಕ್ಕೂ, ಪಟ್ಟ ಪರಿಶ್ರಮವನ್ನು ಮನವರಿಸುವಲ್ಲಿ, ಜ್ಞಾನಾರ್ಜನೆಯಲ್ಲಿ ಉಳ್ಳ ಆ ಪಿಪಾಸೆ, ಆ ಭುಭುಕ್ಷೆ, ಆ ಒಲ್ಮೆ, ಆ ತಾಳ್ಮೆ—ಇವುಗಳ ಮುಂದೆ ಕಣ್ಣು ತುಂಬುತ್ತದೆ....". ಇನ್ನೊಂದು ಕೃತಿ 'ಧೂಮ್ರ ವಲಯಗಳು' ಬಗೆಗೆ ಪ್ರೊ|| ಸದಾಶಿವ ಒಡೆಯರ್ ಹೀಗೆ ನುಡಿದಿದ್ದಾರೆ; 'ಈ ಹರಟೆಗಳು ಹದವಾದ ಮನಸ್ಸಿನಿಂದ ನಿರರ್ಗಳವಾಗಿ, ನಿರಾಯಾಸವಾಗಿ ಹರಿಯುವ ಸರಸಸಲ್ಲಾಪಗಳು. ಇಲ್ಲಿ ಪಾಂಡಿತ್ಯದ ಜಡತೆಯಿಲ್ಲ. ಇವುಗಳನ್ನು ಓದುವುದೆಂದರೆ, ಬೆಳದಿಂಗಳಿನಲ್ಲಿ ವಿಹರಿಸಿದಂತೆ". 'ತೂರಿದ ಚಿಂತನೆಗಳು' ಬಗೆಗೆ ಡಾ|| ಗೊರೂರರ ಅಭಿಪ್ರಾಯವಿದು: "....ತುಂಬ ಸೊಗಸಾದ ಬರವಣಿಗೆ. ಹಾಸ್ಯ, ವಿವೇಕ, ಕಿರು ವಿಡಂಬನೆ ಎಲ್ಲ

ಇವೆ....ಇವುಗಳನ್ನು ಓದುವುದು ತಂಗಾಳಿಗೆ ಮೈ ಒಡ್ಡಿದಂತೆ."

ಸುಖ ಸಂಸಾರ; ಸಂತೃಪ್ತ ವಿಶ್ರಾಂತ ಜೀವನ:

ಡಾ|| ಧಾರವಾಡಕರರದು ಸಂತೃಪ್ತ ಸುಖಿ ಜೀವನವೆಂದೇ ಹೇಳಬೇಕು. ಧಾರವಾಡದ ಪ್ರಶಾಂತ ಪರಿಸರವಾದ ಸರಸ್ವತಿಪುರದಲ್ಲಿ ತಮ್ಮದೇ ಆದ 'ಸತ್ಯ ದೀಪ' ಮನೆಯನ್ನು ಹೊಂದಿದ್ದಾರೆ. ಭಾರತಕ್ಕೆ ಸ್ವತಂತ್ರ ದೊರೆತ ವರುಷವೇ ಶ್ರೀಮತಿ ಭಾನುಮತಿಯವರೊಂದಿಗೆ ಮದುವೆಯಾದರು. ಭಾರತಕ್ಕೆ ಸ್ವತಂತ್ರ ದೊರಕಿದರೆ; ನನಗೆ ಮದುವೆ ಬಂಧನವಾಯಿತೆಂದು ಬಹು ವಿನೋದದಿಂದ ಹೇಳುವ ಡಾ|| ಧಾರವಾಡಕರರಿಗೆ ಪಂಚಪಾಂಡವರಂತೆ ಐದು ಜನ ಮಕ್ಕಳು. ಎಲ್ಲರೂ ಉಚ್ಚ ಶಿಕ್ಷಣ ಪಡೆದಿದ್ದಾರೆ. ಹಿರಿಯ ಮಗ ಡಾ|| ಆನಂದ ಡಾ|| ಆಶಾಳೊಂದಿಗೆ ಬಾಗಿಲುಕೋಟೆಯಲ್ಲಿ ವೈದ್ಯಕೀಯ ಸೇವೆಯಲ್ಲಿ ನಿರತ ರಾಗಿದ್ದಾರೆ. ಉಭಯಂತರು ವೈದ್ಯಕೀಯ ಶಾಸ್ತ್ರದಲ್ಲಿ ಲೇಖನಗಳನ್ನು ಬರೆಯು ವುದರಲ್ಲಿ ಪಳಗಿದ್ದಾರೆ. ಇನ್ನೊಬ್ಬ ಚಿ|| ಅಜಿತ ಅಮೇರಿಕಾದಲ್ಲಿದ್ದಾನೆ. ಆತನ ಪತ್ನಿ ಪ್ರತಿಭಾ ಕೂಡ ಎಂ.ಬಿ.ಬಿ.ಎಸ್. ಪದವಿ ಪಡೆದು ವೈದ್ಯಳಾಗಿದ್ದಾಳೆ. ಮೂರನೆಯ ಮಗ ಚಿ|| ಅನಿಲ ಜೆ.ಎಸ್.ಎಸ್. ಮಹಾ ವಿದ್ಯಾಲಯದ ಗ್ರಂಥ ಭಂಡಾರಿ. ಇತ್ತೀಚೆಗೆ 'ಜಯಂತಿ ಮಾಸಿಕದ ಲೇಖಕರ ಸೂಚಿ' ಹೊರತಂದಿ ದ್ದಾನೆ. ನಾಲ್ಕನೆಯ ಪುತ್ರ ಚಿ|| ಅಶೋಕ ಚಾರ್ಟೆರ್ಡ್ ಅಕೌಂಟೆಂಟ್. ಕೊನೆಯ ಪುತ್ರ ಚಿ|| ಶ್ರೀರಾಮ ಅಮೇರಿಕಾದಲ್ಲಿದ್ದಾನೆ. ಡಾ|| ಧಾರವಾಡ ಕರರು ತಮ್ಮ ಈ ಯಶಸ್ಸಿನಲ್ಲಿ ತಮ್ಮ ಧರ್ಮಪತ್ನಿ ಶ್ರೀಮತಿ ಭಾನುಮತಿಯ ಸಹಕಾರವನ್ನು ಸದಾ ಸ್ಮರಿಸುತ್ತಾರೆ. ಅರವತ್ನಾಲ್ಕನೆಯ ವರುಷಗಳಾದರೂ ಡಾ|| ಧಾರವಾಡಕರರು ಚೈತನ್ಯಶೀಲರು; ಇಂದಿನ ಸಮಸ್ಯೆಗಳ ಬಗೆಗೆ ತಮಗೆ ಹೊಳೆದ ಅನೇಕ ವಿಚಾರಗಳನ್ನು ತಮ್ಮದೇ ಆದ ವಿಧಾನದಲ್ಲಿ ತಿಳಿಸುವ ಅವರ ಶೈಲಿ ಆಕರ್ಷಕ. ಡಾ|| ಧಾರವಾಡಕರರು ತುಂಬಿದ ಕೊಡ. ನಯ ವಿನಯಗಳ ಸಾಕಾರಮೂರ್ತಿ. ಅವರೊಂದಿಗೆ ಮಾತನಾಡುವುದೇ ಒಂದು ಸೊಗಸು. ಕರ್ನಾಟಕದ ಈ ರಸಿಕ ಪುತ್ರನಿಗೆ ಕರ್ನಾಟಕದ ಸರ್ಕಾರವು ೫೦೦ ರೂ. ಮಾಸಾಶನ ನೀಡಿದೆ. ಇನ್ನೂ ಹಲವಾರು ಮೌಲಿಕ ಗ್ರಂಥಗಳು ಇವರಿಂದ ಹೊರಬರಲೆಂದು ಹಾರೈಸುತ್ತೇವೆ.

ಪ್ರೊ|| ಎಸ್. ಎಸ್. ಭೂಸರೆಡ್ಡಿ

ಹಾವುಗಳಿಂದ ಪಾರಾಗುವುದು ಹೇಗೆ?

ಭಾರತದಲ್ಲಿ ಭಯಾನಕ ಪ್ರಾಣಿಗಳಾದ ಸಿಂಹ, ಚಿರತೆ ಮತ್ತು ತೋಳಗಳಲ್ಲದೆ ವಿಷಪೂರಿತ ಸರ್ಪಗಳೂ ಹೆಚ್ಚಾಗಿವೆ. ಈ ರಾಷ್ಟ್ರದಲ್ಲಿ ಪ್ರತಿವರ್ಷ ಹಾವು ಕಡಿದ ಘಟನೆಗಳು ೨,೦೦,೦೦೦ಕ್ಕಿಂತಲೂ ಹೆಚ್ಚು.

ಹಾವುಗಳಿಂದ ಕಡಿಸಿಕೊಂಡು ಮರಣವನ್ನಪ್ಪುವ ಪ್ರಮಾಣ ಸಾಕಷ್ಟು ಹೆಚ್ಚಾಗಿರುವುದು ದುರದೃಷ್ಟದ ಸಂಗತಿಯಾಗಿದೆ. ಇದಕ್ಕೆ ಕಾರಣ—ಹಾವು ಮತ್ತು ಹಾವುಗಳ ಕಡಿತದ ಬಗ್ಗೆ ನಮ್ಮ ಅಜ್ಞಾನ. ಅಲ್ಲದೆ, ವೈದ್ಯಕೀಯ ಚಿಕಿತ್ಸೆಯಲ್ಲುಂಟಾಗುವ ವಿಳಂಬ. ವಿಶ್ವ ಆರೋಗ್ಯ ಸಂಘಟನೆಯು ನಡೆಸಿದ ಒಂದು ಸರ್ವೇಕ್ಷಣೆಯ ಪ್ರಕಾರ ಭಾರತದಲ್ಲಿ ಹಾವು ಕಡಿತದಿಂದ ಪ್ರತಿ ವರ್ಷ ಸುಮಾರು ೧೫,೦೦೦ ಸಾವುಗಳು ಸಂಭವಿಸುತ್ತವೆ—ಒಂದು ವೇಳೆ ಈ ಕಡಿತದಿಂದ ಪಾರಾದರೂ ಇದರ ಭಯದಿಂದ ಕಡಿಸಿಕೊಂಡ ವ್ಯಕ್ತಿ ಅನೇಕ ದಿನಗಳವರೆಗೆ ಯಾತನೆಯನ್ನನುಭವಿಸುತ್ತಾನೆ.

ತೆಂಗಲ್ ಕಮಾಲನ ಉದಾಹರಣೆಯನ್ನೇ ತೆಗೆದುಕೊಳ್ಳಿ. ಬೊಂಬಾಯಿಯ ಒಂದು ಉಪನಗರ ಗೋರೆಗಾಂವ್‌ನ ಬಳಿಯಿರುವ ೨೫ ವರ್ಷದ ರೈತ ಕಮಾಲ್ ಆಗಸ್ಟ್ ೧೯೮೧ರ ಒಂದು ಸಂಜೆ, ಮಳೆ ಬರುತ್ತಿದ್ದಾಗ ಹೊಲದಲ್ಲಿ ಬಾಗಾಲುಗಳಲ್ಲಿ ಕೆಲಸ ಮಾಡುತ್ತಿದ್ದ. ಒಮ್ಮೆಲೆ ಬಲಗಾಲಲ್ಲಿ ತೀಕ್ಷ್ಣವಾಗಿ ಚುಚ್ಚಿದ ಅನುಭವ ಅವನಿಗಾಯಿತು. ಕಮಾಲ ಗಮನವಿಟ್ಟು ನೋಡಿದ—ಪಾದದ ಬಳಿ ಎರಡು ಸಣ್ಣ-ಸಣ್ಣ ಗುರುತುಗಳು ಮೂಡಿದ್ದವು. ಹಾವು ಕಚ್ಚಿದೆಯೆಂದು ತಿಳಿದುಕೊಂಡ ಅವನು ತಕ್ಷಣ ಮೊಣಕಾಲ ಮೇಲ್ಭಾಗಕ್ಕೆ ಹಗ್ಗವೊಂದನ್ನು ಬಿಗಿಯಾಗಿ ಕಟ್ಟಿಕೊಂಡು ಪಕ್ಕದಲ್ಲೇ ಕೆಲಸ ಮಾಡುತ್ತಿದ್ದ ಇನ್ನೊಬ್ಬನಿಗೆ ಕೂಗಿಕರೆದು ವಿಷಯ ತಿಳಿಸಿದ. ಅವನು ತಕ್ಷಣ ಟ್ಯಾಕ್ಸಿ ಮಾಡಿಕೊಂಡು ಬಂದು ಕಮಾಲನನ್ನು ಒಬ್ಬ ಸ್ಥಳೀಯ ವೈದರ ಬಳಿಗೆ ಕರೆತಂದ. ದುರದೃಷ್ಟವಶಾತ್ ಆ ವೈದ್ಯರು ಪೂರ್ಣ ಯೋಗ್ಯತೆಯನ್ನು ಪಡೆದ ಎಲೋಪಥಿಕ್ ಪ್ರಾಕ್ಟೀಶನರ್ ಆಗಿರಲಿಲ್ಲ. ಅವರಿಗೆ ಎಂಟೀವೆನಿಮ್ (ಸರ್ಪವಿಷ ವಿರೋಧಿ) ಕೊಡುವ ವಿಧಾನ ತಿಳಿದಿರಲಿಲ್ಲ. ಅವರು ಕಮಾಲನಿಗೆ ನೋವು ನಿವಾರಕ

೧೯೮೩ರ ಜುಲೈ ತಿಂಗಳ ಹಿಂದಿ 'ಸರ್ವೋತ್ತಮ್' ರೀಡರ್ಸ್ ಡೈಜೆಸ್ಟ್ ಮಾಸಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಶಿವಾನಂದ್ ಕಾರ್ಕಲ್ ಅವರ "ಸಾಂಪೋಂಸೆ ಕೈಸೆ ಬಚೆ" ಎಂಬ ಲೇಖನದ ಅನುವಾದ.

ಇಂಜೆಕ್ಷನ್ ಕೊಟ್ಟು, ಕೆಲವು ಎಂಟಿಬಯೋಟಿಕ್ ಗುಳಿಗೆಗಳನ್ನು ನುಂಗಲು ಹೇಳಿ, ಮನೆಗೆ ಹೋಗಿ ಮಲಗಿಕೊಳ್ಳಲು ಸೂಚಿಸಿದರು.

ಮುಂದಿನ ಕೆಲವು ಗಂಟೆಗಳಲ್ಲಿ ಕಮಾಲನಿಗೆ ತಲೆಸುತ್ತು ಬಂದು ಜೋರಲಾಗಿ ಬಿದ್ದು ನರಳಲಾರಂಭಿಸಿದ. ಬಲಗಾಲು—ಕಾಲಿನ ಕೆಳಭಾಗ ಉಬ್ಬುತ್ತಾ ಅಸಹ್ಯ ವೇದನೆಯುನ್ನುಂಟು ಮಾಡಲಾರಂಭಿಸಿತು. ಗಾಬರಿಗೊಂಡ ಕಮಾಲನ ಮಿತ್ರ ಅವನನ್ನು ತಕ್ಷಣ ಸೆಂಟ್ರಲ್ ಬೊಂಬಾಯಿಯ ಒಂದು ದೊಡ್ಡ ಆಸ್ಪತ್ರೆಗೆ ಕರೆತಂದ.

ಅಷ್ಟುಹೊತ್ತಿಗೆ ಕಮಾಲನಿಗೆ ಹಾವು ಕಚ್ಚಿ ಐದು ಗಂಟೆಗೂ ಹೆಚ್ಚು ಕಾಲ ಮೀರಿತ್ತು. ಕಡಿದ 'ಗುರುತು'ಗಳಿಂದ ರಕ್ತ ಒಸರಲಾರಂಭಿಸಿತ್ತು. ಅವನ ಒಸಡುಗಳಿಂದಲೂ ರಕ್ತ ಒಸರುತ್ತಿತ್ತು. ಮೂಗಿನಿಂದ ಒಂದು ತೆಳು–ಮೃದು ಟ್ಯೂಬನ್ನು ಅವನ ಹೊಟ್ಟೆಗೆ ಹಾಕಲಾಯಿತು. ಆ ಟ್ಯೂಬಿನಿಂದಲೂ ಸಾಕಷ್ಟು ರಕ್ತ ಹೊರಬಂತು. ವೈದ್ಯರು ಕಮಾಲನಿಗೆ ತಕ್ಷಣ ಎಂಟೀವೆನಿಮ್ ಇಂಜೆಕ್ಷನ್ ಕೊಟ್ಟರು, ಜೊತೆಗೆ ರಕ್ತ ಕೊಡಲೂ ಪ್ರಾರಂಭಿಸಿದರು.

ಮುಂದಿನ ಮೂರು ದಿನಗಳಲ್ಲಿ ಕಮಾಲನಿಗೆ ೧೫ ಬಾರಿ ರಕ್ತ ಕೊಡಲಾಯಿತು, ಜೊತೆಗೆ ಎಂಟೀವೆನಿಮ್ ಇಂಜೆಕ್ಷನನ್ನೂ ಕೊಡಲಾಯಿತು. ಐದು ದಿನಗಳ ನಂತರವೇ, ಕಮಾಲ ಅಪಾಯದಿಂದ ಪಾರಾಗಿದ್ದಾನೆಂದು ಘೋಷಿಸಲಾಯಿತು; ಎರಡು ವಾರಗಳ ನಂತರವೇ ಅವನನ್ನು ಆಸ್ಪತ್ರೆಯಿಂದ ಮನೆಗೆ ಕಳಿಸಲಾಯಿತು.

ವಿಷಪೂರಿತ ಹಾವುಗಳು ಕಡಿತ

ಭಾರತದಲ್ಲಿ ೨೦೦ಕ್ಕಿಂತಲೂ ಹೆಚ್ಚು ಜಾತಿಯ ಹಾವುಗಳಿವೆ. ಅವುಗಳಲ್ಲಿ ಕೇವಲ ೫೦ ಜಾತಿಯ ಹಾವುಗಳು ಮಾತ್ರ ವಿಷಪೂರಿತವಾಗಿವೆ. ಇವುಗಳಲ್ಲೂ ಕೇವಲ ನಾಲ್ಕು—ರಸೆಲ್ಸ್ ವೈಪರ್, ಸಾ-ಸ್ಕೆಲ್ಡ್ ವೈಪರ್, ಭಾರತೀಯ ಕೋಬ್ರಾ ಅಥವಾ ನಾಗ ಮತ್ತು ಸಾಮಾನ್ಯ ಕರಿನಾಗರ—ಹಾವುಗಳು ವಾಸ್ತವವಾಗಿಯೂ ಅಪಾಯಕಾರಿಯಾಗಿವೆ. ಈ ಹಾವುಗಳು ಮರುಭೂಮಿಯಿಂದ ಹಿಡಿದು ಫಲವತ್ತಾದ ಪ್ರದೇಶಗಳು ಮತ್ತು ಕಾಡುಗಳಲ್ಲೂ ಕಾಣಬರುತ್ತವೆ. ಹಳ್ಳಿಗಳಲ್ಲಿಯೂ ಈ ನಾಲ್ಕೂ ಹಾವುಗಳನ್ನೂ ಕಾಣಬಹುದು. ಬೊಂಬಾಯಿ, ಕಲ್ಕತ್ತಾ ಮತ್ತು ಹೊಸ ದೆಹಲಿಗಳಂತಹ ದೊಡ್ಡ ಉಪನಗರಗಳಲ್ಲೂ ಇವುಗಳ ಅಪಾಯವಿರುತ್ತದೆ.

ರಸೆಲ್ಸ್ ವೈಪರ್ ಉತ್ತರ ಭಾರತದ ಗದ್ದೆಗಳು ಮತ್ತು ನದಿ ಘಟ್ಟಗಳಿಂದ ಹಿಡಿದು ದಕ್ಷಿಣದ ತಮಿಳುನಾಡು, ಕೇರಳ ಮತ್ತು ಕರ್ನಾಟಕದ ದಟ್ಟ ಜನಸಂಖ್ಯೆಯುಳ್ಳ ಬೆಟ್ಟಗಳಲ್ಲೂ ಕಂಡುಬರುತ್ತದೆ. ಕಂದು ಅಥವಾ ಬ್ರೌನ್ ಬಣ್ಣದ ದಪ್ಪ ಗಾತ್ರದ ಮತ್ತು ಒಂದುಮೀಟರ್‌ವರೆಗೆ ಉದ್ದವಿರುವ ಈ ಹಾವಿನ ವಿಷದಂತಗಳು ಉದ್ದವಾಗಿದ್ದು ಸಾಕಷ್ಟು ಪ್ರಮಾಣದಲ್ಲಿ ವಿಷವನ್ನು ಬಿಡುತ್ತವೆ. ಇವು ಭಾರತೀಯ ನಾಗರಕ್ಕಿಂತಲೂ ಹೆಚ್ಚು ಅಪಾಯಕಾರಿಯಾಗಿರುತ್ತದೆ.

ರಸೆಲ್ಸ್ ವೈಪರಿಗೆ ರೇಗಿಸಿದರೆ ಅಥವಾ ಬೆದರಿಸಿದರೆ ಅದು ತುಂಬಾ ಅಪಾಯಕಾರಿಯಾಗುತ್ತದೆ. ಇದು ತೀವ್ರ ಫೂತ್ಕಾರದೊಂದಿಗೆ ಆಕ್ರಮಣ ಮಾಡುತ್ತದೆ. ಈ ಫೂತ್ಕಾರವನ್ನು ಐದು ಮೀಟರ್ ದೂರದಿಂದಲೂ ಕೇಳಬಹುದು. ಸಮಸ್ಯೆಯೆನೆಂದರೆ, ಇದರ ಆಕಾರ ಅಪಾಯಕಾರಿಯಲ್ಲದ ಸ್ಯಾಂಡ್ ಬೋಅ ಮತ್ತು ಭಾರತೀಯ ಹೆಬ್ಬಾವನ್ನು (ದಾಸರಹಾವು) ಹೋಲುತ್ತದೆ. ರಸೆಲ್ಸ್ ವೈಪರ್ ಹಾವಿನ ಶರೀರದ ಮೇಲೆ ನಿಯಮಿತ ಅಂತರದಲ್ಲಿ ವೃತ್ತಗಳ ಶೃಂಖಲೆಯ ಪ್ಯಾಟರ್ನ್ ಗುರುತಿರುತ್ತದೆ.

ರಸೆಲ್ಸ್ ವೈಪರ್‌ಗಿಂತಲೂ ಹೆಚ್ಚು ತೀಕ್ಷ್ಣ ವಿಷಪೂರಿತವಾದ ಸಾ-ಸ್ಕೆಲ್ಡ್ ವೈಪರ್ ಸಾಮಾನ್ಯವಾಗಿ ಮಹಾರಾಷ್ಟ್ರ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಪಂಜಾಬಿನ ಕಲ್ಲು-ಗುಡ್ಡಗಳ ಪ್ರದೇಶಗಳಲ್ಲಿ ಕಂಡುಬರುತ್ತದೆ. ಭಾರತದ ನಾಲ್ಕು ಅತಿ ಹೆಚ್ಚು ವಿಷಪೂರಿತ ಹಾವುಗಳಿಗಿಂತ ಇದು ಅತಿ ಚಿಕ್ಕದಾಗಿದ್ದು ಇದರ ಸರಾಸರಿ ಉದ್ದ ಕೇವಲ ೫೦ ಸೆಂಟಿಮೀಟರ್ ಇರುತ್ತದೆ. ಮಣ್ಣಿನ ಬಣ್ಣವನ್ನು ಹೋಲುವ ಕಂದು ಅಥವಾ ಕಂದು ಮಣ್ಣಿನ ಬಣ್ಣದೊಂದಾಗಿ ಭೂಮಿಯ ಮೇಲೆ ಹೊರಳಾಡುವ ರಸೆಲ್ಸ್ ವೈಪರನ್ನು ಗಮನಿಸುವುದು ಕಷ್ಟವಾಗುತ್ತದೆ.

ಮೂರು ಪಟ್ಟು ಘಾತಕ

ಭಾರತೀಯ ನಾಗ (ಕೋಬ್ರಾ)—ಇದು ಕೋರಲ್ ಸರ್ಪ ಮತ್ತು ಏಶಿಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾದ ಕೆಲವು ವಿಷಪೂರಿತ ಹಾವುಗಳ ಸಂಬಂಧಿ—ತನ್ನ ಸಣ್ಣ ಮೊರಬಾಕಾರದ ದೊಡ್ಡ ಹೆಡೆಯಿಂದ ಸಹಜವಾಗಿಯೇ ಗುರುತಿಗೆ ಸಿಗುತ್ತದೆ. ಕನ್ನಡಿ ಮತ್ತು ಏಕಾಕ್ಷಿ (ಮೋನೋಕಲ್), ನಾಗರ—ಇದರ ಹೆಸರಿನಂತೆಯೇ—ಬೆನ್ನ ಮೇಲೆ ಇರುವ 'ಕನ್ನಡಕ' ಮತ್ತು 'ಉಪ

ನೇತ್ರ'ಗಳ ಚಿನ್ಹೆಗಳಿಂದ ಗುರುತಿಗೆ ಸಿಗುತ್ತವೆ. ಆದರೆ ಕಪ್ಪು ನಾಗಗಳನ್ನು ಗುರುತಿಸಲು ಇಂತಹ ಯಾವುದೇ ಚಿನ್ಹೆಗಳಿಲ್ಲ. ಸುಮಾರು ಒಂದೂವರೆ ಮೀಟರ್ ಉದ್ದನೆಯ ನಾಗ ತನ್ನ ಹೆಚ್ಚು ವೇಳೆಯನ್ನು ಭೂಮಿ ಅಥವಾ ಕೊಳೆತ ಮರದ ಕೊರಡುಗಳ ಅಥವಾ ಕಲ್ಲುಗಳ ಕೆಳಗೆ ಕಳೆಯುತ್ತಾ ಮುಖ್ಯವಾಗಿ ಕಪ್ಪೆಗಳು ಮತ್ತು ಇಲಿಗಳನ್ನು ತಮ್ಮ ಆಹಾರವನ್ನಾಗಿ ಮಾಡಿಕೊಳ್ಳುತ್ತದೆ.

ಪೂರ್ಣವಾಗಿ ವಿಕಸಿತಗೊಂಡ ನಾಗರ ವಿಷದಂತ ಚಿಕ್ಕದಾಗಿದ್ದು ಸ್ಥಿರವಾಗಿ ಇರುತ್ತವೆ. ಅದೇ, ದೊಡ್ಡ ರಸೆಲ್ಸ್ ವೈಪರ್‌ನ ಹಲ್ಲುಗಳು ಉದ್ದವಾಗಿದ್ದು ಅಡಿಕೆ ಕತ್ತರಿಯಂತೆ ತೆರೆದುಕೊಳ್ಳುತ್ತವೆ. ಈ ಕಾರಣದಿಂದ ನಾಗರ ಕಡಿತ ಲಘುವಾಗಿದ್ದು ವಿಷದ ಪ್ರಮಾಣ ಕಡಿಮೆಯಿರುತ್ತದೆ. ಆದರೆ ಅದರ ವಿಷ ರಸೆಲ್ಸ್ ವೈಪರ್‌ನ ವಿಷದ ಮೂರುಪಟ್ಟು ಹೆಚ್ಚು ಘಾತಕವಾಗಿರುತ್ತದೆ. ರಸೆಲ್ಸ್ ವೈಪರ್‌ನ ೪೦ ಕಿಲೋ ಗ್ರಾಂ ವಿಷ ಮನುಷ್ಯನಿಗೆ ಘಾತಕವಾದರೆ ನಾಗರ ಹಾವಿನ ೧೫ ಕಿಲೋ ಗ್ರಾಂ ವಿಷ ಮನುಷ್ಯನಿಗೆ ಮರಣವನ್ನು ತರುತ್ತದೆ.

ಬಚ್ಚಿಟ್ಟುಕೊಂಡಿರುವ, ಪುಕ್ಕಲು ಮತ್ತು ಸಾಧಾರಣ ಕರಿನಾಗರ ಹಾವಿನ ವಿಷ ಮತ್ತೂ ಮಾರಕ. ಒಂದರಿಂದ ಒಂದೂವರೆ ಮೀಟರ್ ಉದ್ದದ ಈ ಹಾವು ಇಡೀ ಭಾರತದಲ್ಲಿ ಕಂಡುಬರುತ್ತದೆ. ಸಾಧಾರಣ ಕರಿನಾಗರವು ಸಾಮಾನ್ಯವಾಗಿ ಹೊಳೆಯುವ ನೀಲಿಯುಕ್ತ ಕಪ್ಪು ಬಣ್ಣದಿಂದ ಕೂಡಿದ್ದು ಇದರ ಶರೀರದ ಮೇಲೆ ಅಸ್ಪಷ್ಟ ಬಿಳಿ ಚೌಕಳಿಯಾಕಾರವಿರುತ್ತದೆ. ಇವುಗಳ ಕೆಲವು ಜಾತಿಗಳು ಕಪ್ಪು ಬಣ್ಣದಿಂದಿದ್ದು, ಇವುಗಳ ಶರೀರದ ಮೇಲೆ ಯಾವ ಗುರುತುಗಳೂ ಇರುವುದಿಲ್ಲ.

ಎಚ್ಚರಿಕೆ ವಹಿಸಿ

ಪ್ರಚಲಿತ ನಂಬಿಕೆಗಳಿಗೆ ವಿರುದ್ಧವಾಗಿ ಹೆಚ್ಚು ಹಾವುಗಳು ಪುಕ್ಕಲು ಸ್ವಭಾವದಿಂದ ಕೂಡಿದ್ದು ನಿಶಾಚರಿಗಳಾಗಿರುತ್ತವೆ. ಇವು ಸಾಮಾನ್ಯವಾಗಿ ಇಲಿಗಳು, ಕಪ್ಪೆಗಳು, ಹಲ್ಲಿಗಳು ಅಥವಾ ಪಕ್ಷಿಗಳನ್ನು ತಿಂದು ಬದುಕುತ್ತವೆ. ಅವುಗಳ ಮೇಲೆ ಮನುಷ್ಯನ ಕಾಲು ಬಿದ್ದಾಗಲೇ ಅಥವಾ ಅವನ್ನು ಬೆದರಿಸಿದಾಗಲೇ ಹಾವುಗಳು ಆಕ್ರಮಣ ಮಾಡುತ್ತವೆ. ಎತ್ತರವಾಗಿ ಬೆಳೆದ ಹುಲ್ಲು ಅಥವಾ ಪೊದೆಗಳ ಮಧ್ಯೆ ನಡೆಯುವಾಗ ಸರಿಯಾದ ಪಾದರಕ್ಷೆ ಮತ್ತು

ಉದ್ದನೆಯ ಪಾಯಿಜಾಮ ಧರಿಸಿ ಸಂಚರಿಸಿದರೆ ಹಾವುಗಳ ಕಡಿತದಿಂದ ಪಾರಾಗಬಹುದು. ಪಾದಕ್ಕೆ ಸರಿಯಾದ ರಕ್ಷಣೆಯಿಲ್ಲದೆ ಗದ್ದೆ ಅಥವಾ ಕಾಡುಗಳಲ್ಲಿ ಜನರು ಕೆಲಸ ಮಾಡುವುದರಿಂದ ಭಾರತದಲ್ಲಿ ಹೆಚ್ಚು ಜನರು ಹಾವಿನ ಕಡಿತಕ್ಕೆ ಬಲಿಯಾಗುತ್ತಾರೆ. ಕಲ್ಲುಗಳು ಮತ್ತು ಮರದ ದಿಮ್ಮಿಗಳ ಮೇಲೆ ಚಲಿಸಬಾರದು, ಯಾಕೆಂದರೆ ಇನ್ನೊಂದು ಬದಿಯಲ್ಲಿ ಹಾವು ಮರೆಯಾಗಿರಬಹುದು. ರಾತ್ರಿಹೊತ್ತು ಲಾಟೀನು ಅಥವಾ ಟಾರ್ಚ್ ಹಿಡಿದು ಸಂಚರಿಸಬೇಕು. ಸಂಚರಿಸುವಾಗ ಉದ್ದ ಕೋಲಿನಿಂದ ಮುಂದಿನ ನೆಲವನ್ನು ಬಡಿಯುತ್ತ ಹೋಗುವುದರಿಂದ, ಹಾವು ದಾರಿ ಬಿಟ್ಟು ಪಕ್ಕಕ್ಕೆ ಸರಿದು ಹೋಗುವುದು. ಮನೆಯಲ್ಲಿ ಮತ್ತು ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಇಲಿಗಳು ಇರದಂತೆ ನೋಡಿಕೊಳ್ಳಬೇಕು. ಮುಂಗಾರು ದಿನಗಳಲ್ಲಿ ವಿಶೇಷವಾಗಿ ಎಚ್ಚರಿಕೆಯನ್ನು ವಹಿಸಬೇಕು. ಈ ದಿನಗಳಲ್ಲೇ ಹಾವುಗಳು ಸಕ್ರಿಯವಾಗಿರುತ್ತವೆ.

ಜನರು ಸಾಮಾನ್ಯವಾಗಿ ಮನೆಯ ಸಮೀಪದಲ್ಲೇ—ಅಂಗಳದಲ್ಲಿ ಜಾನುವಾರುಗಳ ಕೊಟ್ಟಿಗೆಯಲ್ಲಿ, ಕಟ್ಟಿಗೆ ರಾಶಿಯಲ್ಲಿ, ಕಲ್ಲು–ಕಸದ ರಾಶಿಗಳಲ್ಲಿ ಹಾವಿನ ಕಡಿತಕ್ಕೆ ಬಲಿಯಾಗುತ್ತಾರೆಂಬ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮಂಗಳೂರಿನ ಬಳಿಯ ಒಂದು ಹಳ್ಳಿ ಕಾರ್ಕಳದಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ರ ಎರಡು ವರ್ಷದ ಮಗು ಸೌಭಾಗ್ಯವತಿ ಮನೆ ಎದುರು ಆಡಿಕೊಳ್ಳುತ್ತಿದ್ದಳು. ಒಮ್ಮೆಲೆ, ಮಗು ಚೀರಾಟ ಕೇಳಿ ಅವಳ ತಾಯಿ ಓಡಿ ಬಂದಳು. ಮಗು ಆಗಲೇ ಪ್ರಜ್ಞೆ ತಪ್ಪಿದ್ದಳು. ಆಸ್ಪತ್ರೆಯನ್ನು ತಲುಪುವುದಕ್ಕೂ ಮುಂಚೆಯೇ ಮಗು ಮರಣವನ್ನಪ್ಪಿತ್ತು. ಕಡೆಗೆ ಹುಡುಕಿದಾಗ ಅಂಗಳದ ಕಲ್ಲಿನ ಸಂದಿಯಲ್ಲಿ ಒಂದೂವರೆ ಮೀಟರ್ ಉದ್ದದ ನಾಗರಹಾವು ಕಂಡುಬಂದಿತು.

ಸಾಮಾನ್ಯವಾಗಿ ವಿಷಪೂರಿತ ಹಾವುಗಳು ಕಡಿದರೆ ಎರಡು ಗುರುತುಗಳನ್ನು ಮಾಡುತ್ತವೆ; ಆದರೆ ಒಂದೊಂದು ವೇಳೆ ಅವುಗಳ ಒಂದೇ ಹಲ್ಲಿನ ಗುರುತು ಮಾತ್ರ ಮೂಡಿರುತ್ತದೆ. ವಿಷವಲ್ಲದ ಹಾವುಗಳ ಕಡಿತದ ಆಕಾರ ಇಂಗ್ಲೀಷಿನ 'U' ಅಕ್ಷರವನ್ನು ಅಥವಾ ಕುದುರೆ ಗೊರಸಿನ ಆಕೃತಿಯನ್ನು ಹೋಲುತ್ತದೆ.

ನಿಮಗೆ ವಿಷಪೂರಿತ ಹಾವುಗಳ ಕಡಿತದ ಲಕ್ಷಣಗಳ ಜ್ಞಾನವೂ ಇರಬೇಕಾಗುತ್ತದೆ. ನಾಗಾ ಅಥವಾ ಕರಿನಾಗರ ಕಡಿದ ಜಾಗದಲ್ಲಿ ಪ್ರಾರಂಭದಲ್ಲಿ ಮೆಲ್ಲನೆ ಉರಿ ಶುರುವಾಗಿ ಮುಂದಿನ ೧೫ ನಿಮಿಷದಿಂದ ಹಿಡಿದು ಎರಡು ಗಂಟೆಗಳ ನಡುವೆ ಮನುಷ್ಯನ ನಾಲಗೆ ಮತ್ತು ಕಂಠ ಜಡವಾಗುತ್ತದೆ. ನುಂಗಲು ಕಷ್ಟ

ವಾಗುತ್ತದೆ. ಸ್ಪಷ್ಟವಾಗಿ ಮಾತಾಡಲು ಸಾಧ್ಯವಾಗುವುದಿಲ್ಲ, ಸ್ಪಷ್ಟವಾ ನೋಡಲು ಸಾಧ್ಯವಾಗುವುದಿಲ್ಲ—ಕಣ್ಣು ಮಂದವಾಗುತ್ತವೆ. ಉಸಿರಾ ವಿಷವೇರುತ್ತಿರುವಂತೆಯೇ ದುರ್ಬಲವಾಗುತ್ತದೆ.

ರಸೆಲ್ಸ್ ಮತ್ತು ಸಾ-ಸ್ಕೆಲ್ಡ್ ವೈಪರ್ ಕಡಿದರೆ ತೀವ್ರ ನೋವುಂಟಾ ಕಡಿದ ಜಾಗ ಉಬ್ಬಿಕೊಳ್ಳುತ್ತದೆ. ಆಮೇಲೆ ತಲೆಶೂಲೆ ಪ್ರಾರಂಭವಾಗಿ ವಾಂ ಯಾಗಲು ಪ್ರಾರಂಭವಾಗುತ್ತದೆ. ಕ್ರಮೇಣ ಕಡಿದ ಜಾಗದಿಂದ ರಕ್ತಸ್ರಾ ಪ್ರಾರಂಭವಾಗುತ್ತದೆ. ಶರೀರದ ಒಳಭಾಗದಲ್ಲೂ ರಕ್ತಸ್ರಾವ ಪ್ರಾರಂಭವಾ ತ್ತದೆ.

ಅಗತ್ಯ ಸಲಹೆಗಳು

ಒಂದು ವೇಳೆ ನಿಮಗೆ ಎಂದಾದರೂ ಯಾವುದೇ ವಿಷಪೂರಿತ ಹಾವು ಕಡಿದ ಒಂದು ಗಂಟೆಯೊಳಗೆ ವೈದ್ಯರು ಸಿಗದಿದ್ದರೆ ಭಾರತೀಯ ವಿಶೇಷಜ್ಞರ ಸಲ ಯಂತೆ ನೆಡೆದುಕೊಳ್ಳಿ.

(೧) ಶಾಂತವಾಗಿರಿ. ಎಲ್ಲಾ ಹಾವುಗಳು ವಿಷವಲ್ಲ. ಅಲ್ಲದೆ, ವಿಷಪೂ ಹಾವುಗಳ ಕಡಿತವೂ ಸದಾ ಘಾತಕವಲ್ಲವೆಂಬುದು ನಿಮಗೆ ನೆನಪಿರಲಿ. ಅಲ್ಲ ಶ್ರಮದಿಂದಲೂ ರಕ್ತದ ಒತ್ತಡ ಹೆಚ್ಚಾಗಿ, ಶರೀರದಲ್ಲಿ ವಿಷ ವೇಗವಾ ಹಬ್ಬುತ್ತದೆ. ಗಾಬರಿಯಿಂದಾಗಿ ಸಾವೂ ಸಂಭವಿಸಬಹುದು (ವಿಷವಿಲ್ಲ ಹಾವುಗಳ ಕಡಿತದಿಂದ, ಗಾಬರಿ ಮಾತ್ರದಿಂದಲೇ ಸತ್ತವರ ಸಂಖ್ಯೆ ಭಾ ದಲ್ಲಿದೆ).

(೨) ಕಚ್ಚಿದ ಭಾಗವನ್ನು ಕುಲಕಬೇಡಿ, ಅಲುಗಾಡಿಸಬೇಡಿ. ಇದರಿಂದಾ ವಿಷ ಹಬ್ಬುವ ಗತಿ ಮಂದವಾಗುವುದು. ಒಂದು ವೇಳೆ ಕಡಿತ ಕಾಲು ಅಥವ ಪಾದಗಳಿಗಾದರೆ ಮಲಗಿಕೊಂಡುಬಿಡಬೇಕು. ಒಂದು ವೇಳೆ ಹಾವು ಕೈ ಅಥವ ಭುಜಗಳಿಗೆ ಕಚ್ಚಿದ್ದರೆ ಅದಕ್ಕೆ ಪಟ್ಟಿ ಕಟ್ಟಿ ನೇತುಹಾಕಿದಂತೆ ಹಿಡಿದುಕೊ ಬೇಕು. ಗಾಯಗೊಂಡ ಭಾಗದ ಮೇಲೆ ಮಂಜನ್ನು ಇಡಬಾರದು—ಇ ರಿಂದಾಗಿ ಅನೇಕ ರೋಗಿಗಳಲ್ಲಿ ನೋವು ಮತ್ತೂ ಹೆಚ್ಚಾಗುವುದು. ಅಲ್ಲ ಕಡಿದ ಭಾಗದಲ್ಲಿದ್ದ 'ಟಿಶ್ಯೂ'ಗಳು ಮೃತವಾಗುತ್ತವೆ.

(೩) ಕಚ್ಚಿದ ಭಾಗದ ಮೇಲೆ ರಕ್ತ ತಡೆಗಟ್ಟಲು ರುಮಾಲು, ಪಂಚೆ, ಹ ಅಥವಾ ಹುಲ್ಲಿನ ಪಟ್ಟಿ—ಆಗ ತಕ್ಷಣ ಕೈಗೆ ಸಿಕ್ಕುವ ವಸ್ತುಗಳಿಂದ ಕಟ್ಟಿಕೊ ಬೇಕು. ಅತಿ ಬಿಗಿಯಾಗಿ—ಒಂದು ಬೆರಳೂ ಹೋಗದಷ್ಟು ಬಿಗಿಯಾಗಿ ಮಾ

ಕಟ್ಟಿಕೊಳ್ಳಬೇಡಿ. ಕೈ ಅಥವಾ ಕಾಲು ಜೋಮು ಹಿಡಿಯಲಾರಂಭಿಸಿದರೆ, ಗಂಟು ತೀವ್ರವಾಗಿದೆಯೆಂದು ತಿಳಿಯಿರಿ. ಪ್ರತಿ ಅರ್ಧಗಂಟೆಗೊಮ್ಮೆ ಒಂದು ನಿಮಿಷ ಗಂಟನ್ನು ಸಡಿಲಿಸಿ. ಒಂದುವೇಳೆ ಹಾವು ಕಚ್ಚಿ ಎರಡು ಗಂಟೆಗೂ ಮೀರಿದ್ದರೆ ಪಟ್ಟಿಯನ್ನು ಕಟ್ಟಿಕೊಳ್ಳಲೇಬೇಡಿ. ಹಾವು ಕಡಿತಕ್ಕೆ ಯೋಗ್ಯ ಚಿಕಿತ್ಸೆ ಪ್ರಾರಂಭವಾದ ಮೇಲೆ ರಕ್ತ ನಿಲ್ಲಲು ಕಟ್ಟಿದ ಪಟ್ಟಿಯನ್ನು ತಕ್ಷಣ ಬಿಚ್ಚಿಬಿಡಿ.

(೪) ಯಾವುದಾದರೂ ಎಂಟಿಸೆಪ್ಟಿಕ್ ದ್ರಾವಣ ಅಥವಾ ಶುದ್ಧ ನೀರಿನಿಂದ ಗಾಯವನ್ನು ಚೆನ್ನಾಗಿ ಸ್ವಚ್ಛಗೊಳಿಸಿ ತೊಳೆಯಿರಿ.

(೫) ಹಾವು ಕಚ್ಚಿದ ಗುರುತುಗಳನ್ನು ಕತ್ತರಿಸಿ ಹೆಚ್ಚಿಸಬೇಡಿ. ಇದರಿಂದ ರೋಗದ ಸೋಂಕು ಉಂಟಾಗಿ, ರಕ್ತಸ್ರಾವ ಹೆಚ್ಚಬಹುದು.

(೬) ಅತಿ ಕಡಿಮೆ ಓಡಾಟ ಮತ್ತು ಚಿಂತೆ ಹೊತ್ತು ವೈದ್ಯರ ಬಳಿಗೋ ಅಥವಾ ಆಸ್ಪತ್ರೆಗೋ ಹಾವು ಕಚ್ಚಿದವರನ್ನು ಶೀಘ್ರವಾಗಿ ಸಾಗಿಸಲು ಪ್ರಯತ್ನಿಸಿ. ಒಬ್ಬರೇ ಇದ್ದರೆ, ಸಾಧ್ಯವಾದ ಪ್ರಾಥಮಿಕ ಚಿಕಿತ್ಸೆ ಮಾಡಿ, ಆಮೇಲೆ ಸಹಾಯ ಪಡೆಯಲು ಪ್ರಯತ್ನಿಸಿ. ಆದರೆ ಇದನ್ನು ಸಹಜವಾಗಿ ಮಾಡಿ. ಗಾಬರಿ ಬೇಡ.

(೭) ಮದ್ಯ ಸೇವಿಸಬೇಡಿ. ಗಾಯವನ್ನು ಸುಡಲು ಪ್ರಯತ್ನಿಸಬೇಡಿ.

(೮) ಹಾವಿನ ಕಡಿತಕ್ಕೆ 'ಮನೆ ಔಷಧಿ' ಅಥವಾ ಮಂತ್ರ-ಮಾಟಕ್ಕೆ ಶರಣಾಗಿ ಸಮಯವನ್ನು ಹಾಳು ಮಾಡಬೇಡಿ.

ಹಾವಿನ ಕಡಿತಕ್ಕೆ ಸರಿಯಾದ ಚಿಕಿತ್ಸೆಯೇನೆಂದರೆ, ಹಾವಿನ ಕಡಿತದಿಂದ ಪಾರಾಗಲು ಪ್ರಯತ್ನಿಸುವುದೇ ಆಗಿದೆ.

ಡಿ. ಎನ್. ಶ್ರೀನಾಥ್

ಸುಳ್ಳು ಎಲ್ಲಿ ಕಂಡರೂ ಅದನ್ನು ತಿಳಿಯಬೇಕು, ಅಳಿಯಬೇಕು. ಸುಳ್ಳು, ರೋಗಾಣುಗಳಂತೆ ನನ್ನ ಸುತ್ತ ಹಬ್ಬಿದರೆ ನಾನು ಮನೆಯಲ್ಲೆಲ್ಲ ಧೂಪ ಹಾಕಲೇಬೇಕು.

—ಕಾರ್ಲೈಲ್

"ನೀವು ತಿನ್ನುವ ತಿನಿಸು ನಿಮ್ಮ ಮಿದುಳಿನ ಮೇಲೆ ಪ್ರಭಾವ ಬೀರಬಲ್ಲುದು"

ಮಾನಸಿಕ ಖಿನ್ನತೆಯನ್ನು ನೀಗಿಸುವುದಕ್ಕಾಗಿ ವಿಶಿಷ್ಟ ಪೋಷಕಾಂಶ ಗಳೊಡನೆ ಮಿಶ್ರಿತವಾದ ಚಾಕಲೇಟ್, ಜ್ಞಾಪಕಶಕ್ತಿ ಹೆಚ್ಚಿಸಲು ವಿಶೇಷ ಪೋಷಕಾಂಶಗಳುಳ್ಳ ಶ್ಯಾವಿಗೆ, ನಿದ್ದೆ ಬರಲು ಉಪ್ಪು ರುಚಿಯ ಬಿಸ್ಕತ್ತುಗಳು– ವಿವಿಧ ಆಹಾರ ಪದಾರ್ಥಗಳು ಮಿದುಳಿನ ಕಾರ್ಯಕಲಾಪಗಳ ಮೇಲೆ ಪ್ರಭಾವ ಬೀರಬಲ್ಲವು ಎಂದು ತಿಳಿದಂದಿನಿಂದ ಸಂಶೋಧಕರು ಪರೀಕ್ಷಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಕೆಲವು ಇವು.

ಬಹುದಿನಗಳಿಂದಲೂ ಆಹಾರದ ಪರಿಣಾಮಗಳ ಬಗ್ಗೆ ಅನೇಕ ನಂಬಿಕೆಗಳು ಜನರಲ್ಲಿ ಇವೆ. ಉದಾಹರಣೆಗೆ ಬಿಸಿ ಹಾಲು ಕುಡಿದು ಮಲಗಿದರೆ ನಿದ್ದೆ ಬರುತ್ತದೆ ಎನ್ನುವ ನಂಬಿಕೆ. ಆದರೆ ಈ ಬಗ್ಗೆ ವಿಜ್ಞಾನಿಗಳು ವಿಚಾರ ಮಾಡಿರಲೇ ಇಲ್ಲ.

ಪೋಷಕಾಂಶಗಳಿಗೆ ಮಿದುಳು ಹೇಗೆ ಪ್ರತಿಕ್ರಿಯೆ ತೋರುತ್ತದೆ ಎಂಬುದನ್ನು ಕುರಿತು ಈಗ ಸಂಶೋಧಕರು ಹೆಚ್ಚುಹೆಚ್ಚಾಗಿ ಅಧ್ಯಯನ ನಡೆಸುತ್ತಿದ್ದಾರೆ. ನಮ್ಮ ಮನಃಸ್ಥಿತಿ, ಲವಲವಿಕೆ, ಸ್ಮರಣಶಕ್ತಿಗಳ ಮೇಲಷ್ಟೇ ಅಲ್ಲದೆ ನೋವಿಗೆ ನಾವು ತೋರುವ ಪ್ರತಿಕ್ರಿಯೆಗಳ ಮೇಲೂ ನಾವೇನು ತಿನ್ನುತ್ತೇವೆ ಎನ್ನುವುದು ಪರಿಣಾಮ ತೋರುತ್ತದೆಯೆಂದು ಕಂಡುಹಿಡಿದಿದ್ದಾರೆ. ಈ ಸಂಶೋಧನೆಗಳಿಂದ ಏನು ಪ್ರಯೋಜನ? ನಮ್ಮ ಮನಸ್ಸಿನ ಸ್ಥಿತಿಯ ಮೇಲೆ ಪ್ರಭಾವ ಬೀರಲು ಈಗ ಇರುವುದಕ್ಕಿಂತ ಕ್ಷೇಮಕರ ವಿಧಾನಗಳು ತಿಳಿದುಬರಬಹುದು.

ನಮ್ಮ ಮಿದುಳುಗಳಲ್ಲಿರುವ ನರಕೋಶಗಳು–ನ್ಯೂರಾನುಗಳು- ಒಂದರೊಡ ನೊಂದು ಮಿಂಚಿನ ವೇಗದಲ್ಲಿ ಸಂಪರ್ಕ ಬೆಳೆಸುತ್ತವೆ. ಈ ಸಂಪರ್ಕಗಳಿಗೆ ಸಾಧನಗಳಾದ ರಾಸಾಯನಿಕಗಳಿಗೆ (ನ್ಯೂರೋಟ್ರಾನ್ಸ್‌ಮಿಟರ್ಸ್) ನರ ಸಂದೇಶವಾಹಕಗಳು ಎನ್ನುತ್ತಾರೆ. ಮಿದುಳಿನ ವಿಷಯವಾಗಿ ನಡೆಯುತ್ತಿರುವ ಸಂಶೋಧನೆಗಳಲ್ಲಿಯ ಬಹುಭಾಗ ಇಂಥ ರಾಸಾಯನಿಕಗಳನ್ನು ಕುರಿತದ್ದಾಗಿದೆ. ಕಣ್ಣು ಮಿಟುಕಿಸಿದರೂ ಸರಿ, ಯಾವುದಾದರೂ ವಿಷಯ ನೆನಪಿಸಿಕೊಂಡರೂ ಸರಿ ಮಿದುಳಿನಲ್ಲಿಯ ವಿಶಿಷ್ಟ ನರಕೋಶಗಳು ಇಂಥ ರಾಸಾಯನಿಕಗಳನ್ನು

೧೯೮೪ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ "What you eat can effect your brain" ಎಂಬ ಲೇಖನದ ಅನುವಾದ.

ಬಿಡುಗಡೆ ಮಾಡುತ್ತವೆ. ಇವು ಇತರ ನರಕೋಶಗಳಿಗೆ ಸಂಜ್ಞೆಗಳನ್ನು ಕಳುಹಿಸುತ್ತವೆ.

ಕನಿಷ್ಠ ಪಕ್ಷ ಮೂವತ್ತು ವಿಧದ ನರಸಂದೇಶ ವಾಹಕಗಳಿವೆ. ಇವುಗಳಲ್ಲಿ ಯಾವುದೇ ಆಗಲಿ ನಾವು ತಿನ್ನುವ ಆಹಾರ ಪದಾರ್ಥಗಳಂಥ ಅನಿರ್ದಿಷ್ಟ ಸಾಮಗ್ರಿಗಳಿಂದ ಪ್ರಭಾವಿತವಾಗುವುದು ಅಸಂಭವವೆಂದು ಮೊದಲ ನೋಟಕ್ಕೆ ಎನ್ನಿಸಿತು. ಅಲ್ಲದೆ ದೇಹದ ರಕ್ತಪ್ರವಾಹದಲ್ಲಿರುವ ಅನೇಕ ಪದಾರ್ಥಗಳು ಅವು ಹಾನಿಕರ ರಾಸಾಯನಿಕಗಳೇ ಆಗಿರಲಿ, ಉಪಯುಕ್ತ ಔಷಧಿಗಳೇ ಆಗಿರಲಿ–ಮಿದುಳನ್ನು ತಲುಪಿ ಹಾನಿಯಾಗದಂತೆ ಒಂದು ರಕ್ಷಣಾ ವ್ಯವಸ್ಥೆಯೂ ಇದೆ. ಇದನ್ನು ರಕ್ತ ಮತ್ತು ಮಿದುಳುಗಳ ನಡುವಿನ ಬೇಲಿಯೆನ್ನಬಹುದು. ಅಲ್ಕೊಹಾಲಿನಂಥ ಕೇವಲ ಕೆಲವೇ ರಾಸಾಯನಿಕಗಳು ಈ ಬೇಲಿಯ ಮೂಲಕ ಸುಲಭವಾಗಿ ನುಸುಳುತ್ತವೆ.

ಅಮೆರಿಕದ ಮಸಾಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿರುವ, ನರ ಮತ್ತು ಹಾರ್ಮೋನುಗಳ ತಜ್ಞರಾದ ರಿಚರ್ಡ್ ವುರ್ಟ್‌ಮನ್ ಹೀಗೆ ಹೇಳುತ್ತಾರೆ. "ಕೆಲವು ನರಸಂದೇಶವಾಹಕಗಳನ್ನು ತಯಾರಿಸುವ ಶಕ್ತಿ ರಕ್ತ ಪ್ರವಾಹದಲ್ಲಿ ಸಂಚರಿಸುತ್ತಿರುವ ಕೆಲವು ಪೋಷಕ ದ್ರವ್ಯಗಳಿಂದ ಮಿದುಳಿಗೆ ಬರುತ್ತದೆಯೆಂದು ಹತ್ತು ವರ್ಷಗಳ ಹಿಂದೆ ನಮ್ಮ ಪ್ರಯೋಗ ಶಾಲೆಯಲ್ಲಿ ತಿಳಿದುಬಂದಿತು." ನಾವು ಉಂಡ ಆಹಾರ ಜೀರ್ಣಾಂಗಗಳಲ್ಲಿ ಬಿಡಿ ಘಟಕಗಳಾಗಿ ಒಡೆಯುತ್ತದೆ. ಬಳಿಕ ಈ ಘಟಕಗಳು ರಕ್ತವನ್ನು ಪ್ರವೇಶಿಸಿ ಅನಂತರ ಮಿದುಳಿಗೂ ಹೋಗುತ್ತವೆ. ಮಿದುಳಿನಲ್ಲಿ ರಕ್ತ ಚಲಿಸುತ್ತಿರುವಾಗ ಇವುಗಳಲ್ಲಿ ಕೆಲವು ಘಟಕಗಳು ಮಿದುಳಿನ ನರ ಕೋಶಗಳ ಒಳಹೊಕ್ಕು ಅಲ್ಲಿಯ ನರ ಸಂದೇಶವಾಹಕಗಳ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತವೆ. ಡಾ। ವುರ್ಟ್‌ಮನ್ ಹೇಳುವುದು "ಅಂದರೆ ಎಷ್ಟೋ ಸಂಶೋಧಕರು ಇದು ವರೆಗೂ ಮಿದುಳು ಆಹಾರದಿಂದ ಪ್ರಭಾವಿತವಾಗುವುದಿಲ್ಲ ಎಂದು ತಿಳಿದಿದ್ದರು. ಇದು ನಿಜವಲ್ಲ. ನಾವೇನು ತಿನ್ನುತ್ತೇವೆಯೋ ಅದಕ್ಕೂ ಮಿದುಳಿಗೂ ನಿಕಟ ಸಂಬಂಧವಿದೆ."

ರಕ್ತ ಮತ್ತು ಮಿದುಳಿನ ಮಧ್ಯದ "ಬೇಲಿ"ಯನ್ನು ದಾಟಬಲ್ಲ ಪೋಷಕ ದ್ರವ್ಯಗಳು ಯಾವುವು, ಅವುಗಳಿಗೆ ಈ ಸಾಮರ್ಥ್ಯ ಹೇಗೆ ಬರುತ್ತದೆ ಎಂಬುದು ಸಂಶೋಧನಕಾರರಿಗೆ ತಿಳಿದು ಬರುತ್ತದೆ. ಇದರ ಫಲಿತಾಂಶವೆಂದರೆ ಆಹಾರದ ಪರಿಣಾಮಗಳನ್ನು ಕುರಿತು ಇರುವ ನಂಬಿಕೆಗಳಲ್ಲಿ ನಿಜವಾದುವು ಯಾವುವು,

ಸುಳ್ಳುಯಾವುವು ಎಂದು ಅವರು ಈಗ ತಿಳಿಸಬಲ್ಲರು. ಉದಾಹರಣೆಗೆ ನಿದ್ದೆ ಬರಬೇಕಾದಲ್ಲಿ ರಾತ್ರಿಮಲಗುವ ಸಮಯದಲ್ಲಿ ಎಂಥ ಆಹಾರ ಸೇವಿಸಬೇಕು ಎಂದು ಅವರು ಸಲಹೆ ಕೊಡಬಲ್ಲರು.

ನಮಗೆ ನಿದ್ದೆ ಬರಿಸುವುದು ಸೆರೊಟೊನಿನ್ (Serotonin) ಎಂಬ ಸಂಯುಕ್ತದಿಂದ. ಇದನ್ನು ತಯಾರಿಸಲು ನ್ಯೂರಾನ್‌ಗಳಿಗೆ ಪ್ರೋಟೀನುಗಳಲ್ಲಿರುವ ಅಮೀನೋ ಆಮ್ಲಗಳಲ್ಲೊಂದಾದ ಟ್ರಿಪ್ಟೊಫೇನ್ ಬೇಕು. ಇಲಿಗಳಿಗೆ ಪರಿಶುದ್ಧವಾದ ಟ್ರಿಪ್ಟೊಫೇನನ್ನು ತಿನ್ನಿಸಿದಾಗ ಅವುಗಳ ಮಿದುಳುಗಳಲ್ಲಿ ಸೆರೊಟೋನಿನ್ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆಯೆಂದು ೧೯೭೦ರ ದಶಕದ ಮೊದಲಭಾಗದಲ್ಲಿ ಮಸಾಚುಸೆಟ್ಸ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವುರ್ಟ್‌ಮನ್ ಮತ್ತು ಜಾನ್ ಫೆರ್ನ್‌ಸ್ಟ್ರೋಮ್‌ರವರು ಕಂಡುಹಿಡಿದರು. ನಿದ್ದೆಮಾಡಲು ಇಚ್ಛಿಸುವ ವ್ಯಕ್ತಿಗಳ ಮಿದುಳುಗಳಲ್ಲಿ ಹೆಚ್ಚಾಗಿ ಟ್ರಿಪ್ಟೊಫೇನ್ ಸೇರಲು ಏನು ಮಾಡಬೇಕೆಂಬುದು ಮುಂದಿನ ಪ್ರಶ್ನೆಯಾಗಿತ್ತು. ಮಾಂಸವನ್ನೊ ಹಾಲನ್ನೊ ಹೆಚ್ಚಾಗಿ ಸೇವಿಸಿದರೆ ಈ ಕೆಲಸ ಆಗುವುದಿಲ್ಲ. ಏಕೆಂದರೆ ಟ್ರಿಪ್ಟೊಫೇನ್ ಅನೇಕ ಪ್ರೋಟೀನ್‌ಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದ್ದರಿಂದ ರಕ್ತ ಮಿದುಳುಗಳ ನಡುವಿನ 'ಬೇಲಿ'ಯನ್ನು ದಾಟುವ ಇತರ ರಾಸಾಯನಿಕಗಳೊಡನೆ ಇದು ಸ್ಪರ್ಧಿಸುವುದು ಕಷ್ಟ.

ಒಂದು ರಾಜಮಾರ್ಗವನ್ನು ಸೇರಲು ಅನೇಕ ಕಾರುಗಳು ಪಕ್ಕದ ಒಂದೇ ಒಂದು ಕಿರುರಸ್ತೆಯಲ್ಲಿ ಪ್ರಯಾಣ ಮಾಡುತ್ತಿದ್ದಂತೆ ಇದು ಎಂದು ಜೂಡಿತ್ ವುರ್ಟ್‌ಮನ್ ವಿವರಿಸುತ್ತಾರೆ. ಇವರು ಡಾ॥ ರಿಚರ್ಡ್ ವುರ್ಟ್‌ಮನ್ನರ ಹೆಂಡತಿ ಮತ್ತು ಎಂ.ಐ.ಟಿ.ಯ ಆಹಾರ ಮತ್ತು ಪೋಷಣಾವಿಭಾಗದಲ್ಲಿ ಕೆಲಸಮಾಡುತ್ತಿರುವ ಸಂಶೋಧಕಿ. ಇದೇ ಉಪಮಾನವನ್ನು ಮುಂದುವರಿಸುತ್ತಾ ಅವರು ಹೇಳುವುದು "ಆ ಕಿರು ರಸ್ತೆಯಲ್ಲಿ ಪಯಣಿಸುತ್ತಿರುವ ದೊಡ್ಡ ಹೊಸ ಕಾರುಗಳ ನಡುವೆ ಇರುವ ಹಳೆ ಕಾರಿನಂತಿರುತ್ತದೆ ಟ್ರಿಪ್ಟೊಫೇನ್. ಈ ಹಳೆಕಾರು ಇತರ ಹೊಸ ಕಾರುಗಳನ್ನು ದಾಟಿ ಮುಂದುವರೆಯಲಾರದು. ಇತರ ಕಾರುಗಳು ಅಲ್ಲಿಲ್ಲದೆ ಹೋದರೆ ಈ ಹಳೆಕಾರಿಗೆ ಈ ಕಾರ್ಯ ಸಾಧ್ಯ."

ಈ ಅಮೀನೋ ಆಮ್ಲದೊಡನೆ ಸ್ಪರ್ಧಿಸುವ ಇತರ ಅಮಿನೋ ಆಮ್ಲಗಳು ರಕ್ತದಲ್ಲಿಲ್ಲದಂತೆ ಮಾಡಲು ಕಾರ್ಬೋಹೈಡ್ರೇಟು (ಶರ್ಕರಪಿಷ್ಟ)ಗಳನ್ನು ತಿನ್ನುವುದು ಸರಿಯಾದ ಕ್ರಮ ಎಂದು ತಿಳಿಯಿತು. ಕಾರ್ಬೋಹೈಡ್ರೇಟುಗಳನ್ನು ತಿಂದರೆ ದೇಹದಲ್ಲಿ ಇನ್ಸುಲಿನ್ (Insulin) ಹೆಚ್ಚಾಗಿ ಸ್ರವಿಸುತ್ತದೆ. ಇದು

ರಕ್ತದಲ್ಲಿರುವ ಇತರ ಅಮೀನೋ ಆಮ್ಲಗಳು ಸ್ನಾಯುಗಳಿಗೆ ಹೋಗುವಂತೆ ಮಾಡುತ್ತದೆ. ಹಾಗೆ ಆಗುತ್ತಲೂ ಟ್ರಿಪ್ಟೊಫೇನ್ ಮಿದುಳನ್ನು ಪ್ರವೇಶಿಸ ಬಹುದು. ನಿದ್ರಿಸಬಯಸುವವರಿಗೆ ಹಾಲು ಒಂದನ್ನೇ ತೆಗೆದುಕೊಳ್ಳುವುದು ಸರಿಯಲ್ಲ, ಅದರಲ್ಲಿರುವ ಪ್ರೋಟೀನಿನ ಅಂಶ ಕಾರ್ಬೋಹೈಡ್ರೇಟಿನ ಪ್ರಮಾಣಕ್ಕೆ ಹೆಚ್ಚು.

ಅತಿ ಸ್ವಲ್ಪ ಕಾರ್ಬೋಹೈಡ್ರೇಟ್ ಸಹ ಒಬ್ಬ ವ್ಯಕ್ತಿಗೆ ನಿದ್ರೆ ಬರಿಸುವುದರಲ್ಲಿ ಸಫಲವಾಗುತ್ತದೆ. ಆದರೆ ಅದರೊಟ್ಟಿಗೆ ಪ್ರೋಟೀನುಗಳನ್ನು ಸೇವಿಸಬಾರದು. ಹಸಿದ ಹೊಟ್ಟೆಯಲ್ಲಿ ಕೆಲವಷ್ಟು ಉಪ್ಪು ಬಿಸ್ಕತ್ತುಗಳನ್ನು ತಿಂದರೆ ಸಾಕು ಎಂದು ಡಾ|| ರಿಚರ್ಡ್ ವುರ್ಟ್‌ಮನ್ ಹೇಳುತ್ತಾರೆ. ಬೆಳಗಿನಿಂದ ತಿಂದ ಆಹಾರದಲ್ಲಿದ್ದ ಅನೇಕ ಅಮೀನೋ ಆಮ್ಲಗಳು ರಾತ್ರಿ ಇನ್ನೂ ರಕ್ತದಲ್ಲಿರು ತ್ತವೆ. ಆಗ ನಿದ್ರೆ ಬರಿಸಲು ಮತ್ತಷ್ಟು ಕಾರ್ಬೋಹೈಡ್ರೇಟ್‌ಗಳು ಬೇಕಾಗು ತ್ತವೆ.

ನಿಮಗೆ ನಿದ್ರೆ ಸುಲಭವಾಗಿ ಬರದೆ ಇದ್ದು ರಾತ್ರಿ ಏನನ್ನಾದರೂ ತಿನ್ನ ಬೇಕೆನ್ನಿಸಿದರೆ, ಸಿಹಿ ಪದಾರ್ಥವನ್ನೋ ಹಿಟ್ಟಿನ ಪದಾರ್ಥವನ್ನೋ ತಿನ್ನಿ. ಎಚ್ಚರವಾಗಬೇಕೆಂದೆನಿಸಿದರೆ ಪ್ರೋಟೀನ್ ಪದಾರ್ಥಗಳನ್ನು ತಿನ್ನಿ.

ಸಾಧಾರಣವಾದ ನೋವನ್ನು ಪರಿಹರಿಸಲೂ ಪ್ರೋಟೀನಿಗಿಂತ ಹೆಚ್ಚು ಪ್ರಮಾಣದಲ್ಲಿ ಪಿಷ್ಟ ಪದಾರ್ಥ ತಿನ್ನಬೇಕು. ನೋವು ನಿವಾರಣೆಗಾಗಿ ಪರಿಶುದ್ಧ ಟ್ರಿಪ್ಟೊಫೇನನ್ನು ವ್ಯಕ್ತಿಗಳಿಗೆ ಕೊಟ್ಟು ಸಂಶೋಧಕರು ನೋಡಿದ್ದಾರೆ. M.I.T. ಯಲ್ಲಿ ಈ ಪರೀಕ್ಷೆಗಾಗಿ ತಾವಾಗಿ ಮುಂದೆ ಬಂದ ಎಂಟು ಗಂಡಸ ರೊಡನೆ ಮನೋವಿಜ್ಞಾನಿ ಹ್ಯಾರಿಸ್ ಲೀಬರ್‌ಮನ್ "ಡೊಲೋರಿಮೀಟರ್" ಎಂಬ ಉಪಕರಣವನ್ನು ಉಪಯೋಗಿಸಿ ಪ್ರಯೋಗ ನಡೆಸಿದರು. ಈ ಉಪಕರಣ ೧೦೦೦ ವಾಟ್ ಬಲ್ಬಿನ ಶಾಖವನ್ನು ೧೮ ಮಿಲಿಮೀಟರ್ ಅಳತೆಯ ಸ್ಥಳದ ಮೇಲೆ ವಿವಿಧ ಪ್ರಮಾಣ (intensity) ಗಳಲ್ಲಿ ಕೇಂದ್ರೀಕರಿಸಬಲ್ಲದು. ಪ್ರಯೋಗಕ್ಕೊಳಪಡಲು ಮುಂದೆ ಬಂದ ವ್ಯಕ್ತಿಗಳು ತಮ್ಮ ಮುಂದೋಳುಗಳ ಮೇಲೆ ಒಂದಾಂದಾವೃತ್ತಿಗೆ ಮೂರು ಸೆಕೆಂಡುಗಳ ಕಾಲದಂತೆ ಈ ಶಾಖವನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಬಿಟ್ಟುಕೊಂಡು ಅದರಿಂದಾದ ನೋವಿನ ಪ್ರಮಾಣವನ್ನು ಲೆಕ್ಕಹಾಕಿದರು. ಹೀಗೆ ೧೪೪ ಸಲ ಮಾಡಲಾಯಿತು. ಒಂದೇ ಒಂದು ಡೋಸ್ (dose) ಟ್ರಿಪ್ಟೊಫೇನ್ ಕೊಟ್ಟ ಮಾತ್ರಕ್ಕೇ ಈ ವ್ಯಕ್ತಿಗಳಲ್ಲಿ ಶಾಖಕ್ಕೆ ಪ್ರತಿಕ್ರಿಯೆ ಕಡಿಮೆಯಾಯಿತೆಂದು ಲೀಬರ್‌ಮನ್ ಗಮನಿಸಿದರು.

ಫಿಲಡೆಲ್ಫಿಯದ ಟೆಂಪಲ್ ವಿಶ್ವವಿದ್ಯಾನಿಲಯದಲ್ಲಿ ದವಡೆಗಳ ಸುತ್ತ ದೀರ್ಘ ಕಾಲಿಕ (chronic) ನೋವು ಇರುವ ೩೦ ರೋಗಿಗಳನ್ನು ಅಧ್ಯಯಿಸ ಲಾಯಿತು. ಪ್ರೋಟೀನ್ ಮತ್ತು ಕೊಬ್ಬು ಕಡಿಮೆ ಇದ್ದು ಕಾರ್ಬೋಹೈಡ್ರೇಟ್ ಹೆಚ್ಚಾಗಿರುವ ಆಹಾರವನ್ನು ಅವರೆಲ್ಲರಿಗೂ ಕೊಡಲಾಯಿತು. ಇದರೊಡನೆ ಟ್ರಿಪ್ಟೊಫೇನ್ ಅಥವಾ ನಕಲಿ ವಸ್ತು (placebo) ವನ್ನು ಸೇರಿಸಲಾಗಿತ್ತು. ಟ್ರಿಪ್ಟೊಫೇನ್ ದೊರಕಿದ ರೋಗಿಗಳು ತಮ್ಮ ನೋವು ಚೆನ್ನಾಗಿ ಕಡಿಮೆಯಾಯಿ ತೆಂದು ಹೇಳಿದರು. ಉಳಿದ ರೋಗಿಗಳಲ್ಲೂ ಸಹ ಬರಿಯ ಆಹಾರವೇ ಸ್ವಲ್ಪ ಗುಣತೋರಿಸಿತು.

ಮತ್ತೊಂದು ಅಮೀನೋಆಮ್ಲ ಟೈರೊಸೀನ್‌ನಿಂದ ಆಳವಾದ ಖಿನ್ನತೆ (depression) ಯಲ್ಲಿ ಮಾನಸಿಕ ಕಾರಣಗಳಿಂದ ಬರುವ ನೋವು ಪರಿಹಾರ ವಾಗಬಹುದು. ಪರಿಶುದ್ಧವಾದ ಟೈರೊಸೀನ್ ಗುಳಿಗೆಗಳನ್ನು ಕೊಟ್ಟು ನಡೆ ಸಿರುವ ಪ್ರಯೋಗಗಳು ಆಶಾದಾಯಕವಾಗಿವೆಯೆಂದು ಬಾಸ್ಟನ್ನಿನ ಮಸಾಚುಸೆಟ್ಸ್ ಜನರಲ್ ಆಸ್ಪತ್ರೆಯ ವಿಶೇಷ ಅಧ್ಯಯನಗಳ ವಿಭಾಗದ ಮುಖ್ಯಸ್ಥ ಆಲನ್ ಗೆಲೆನ್‌ಬರ್ಗ್ ಹೇಳುತ್ತಾರೆ. ಈ ಪ್ರಯೋಗಗಳಲ್ಲಿ ಟೈರೋಸೀನನ್ನು ಬಳಸಲು ಕಾರಣ ಹೀಗಿದೆ. ಮಿದುಳಿನ ನರಕೋಶಗಳು ಈ ಅಮೀನೋ ಆಮ್ಲವನ್ನು ನಾರ್‌ಎಪಿನೆಫ್ರೀನ್ (norepinephrine) ಎಂಬ ನರಸಂದೇಶವಾಹಕವಾಗಿ ಪರಿವರ್ತಿಸುತ್ತದೆ. ಈ ಸಂಯುಕ್ತ ಗಂಭೀರ ರೂಪದ ಖಿನ್ನತೆ ಇರುವವರ ಮಿದುಳಿನಲ್ಲಿ ಅಷ್ಟಾಗಿ ಕಾರ್ಯಪ್ರವರ್ತವಾಗಿರು ವುದಿಲ್ಲ. ಇಂಥ ಒಂದು ಪ್ರಯೋಗದಲ್ಲಿ ಬಾರಿಬಾರಿಗೂ ಅಳುತ್ತಾ ಇದ್ದು ಸುತ್ತಲಿನ ಆಗು ಹೋಗುಗಳಲ್ಲಿ ಆಸಕ್ತಿತೋರದೆ ಇದ್ದ ಒಬ್ಬ ಯುವತಿಯ ಪ್ರಕೃತಿ ಟೈರೊಸೀನ್ ಮಾತ್ರೆಗಳನ್ನು ಕೊಟ್ಟಾಗ ಕೇವಲ ಎರಡೇ ವಾರಗಳಲ್ಲಿ ತುಂಬಾ ಉತ್ತಮವಾಯಿತು. ಈ ಮಾತ್ರೆಗಳ ಬದಲು ನಕಲಿ ಮಾತ್ರೆಗಳನ್ನು ಕೊಟ್ಟಾಗ ತಿರುಗಿ ಆಕೆಯ ಖಿನ್ನತೆ ಹೆಚ್ಚಿತು. ನಕಲಿ ಮಾತ್ರೆಗಳ ಬದಲು ನಿಜವಾದ ಮಾತ್ರೆಗಳನ್ನು ಕೊಡುತ್ತಲೂ ಮತ್ತೆ ಆಕೆ ಗುಣಮುಖಳಾದಳು.

ಖಿನ್ನತೆಯ ವಿರುದ್ಧ ಟೈರೊಸೀನ್ ಯಶಸ್ವಿಯಾದಲ್ಲಿ ಇತರ ಎಲ್ಲಾ ಔಷಧಿ ಗಳಿಗಿಂತ ಇದು ಕ್ಷೇಮಕರವಾಗಿರಬಹುದು. ಏಕೆಂದರೆ ಇತರ ಔಷಧಿಗಳು ಖಾಯಿಲೆ ಗುಣಪಡಿಸುವುದರೊಂದಿಗೆ ಅನಿಚ್ಛಾಕಾರ ಪರಿಣಾಮಗಳನ್ನು ಉಂಟುಮಾಡುತ್ತವೆ. ಆದರೂ ಯಥೇಚ್ಛವಾಗಿ ಟೈರೊಸೀನ್ ಇರುವಂಥ ಆಹಾರ ವ್ಯವಸ್ಥೆಯನ್ನು ನಿರೂಪಿಸಲು ಈಗಂತೂ ಸಾಧ್ಯವಿಲ್ಲವೆನ್ನುತ್ತಾರೆ.

ಡಾ|| ಗೆಲೆನ್‌ಬರ್ಗ್. ಟೈರೊಸೀನ್ ಇರುವಂಥ ಪ್ರೋಟೀನ್‌ಗಳಲ್ಲಿ ಉಳಿದ ಅಮೀನೋಆಮ್ಲಗಳೂ ಇರುವುದರಿಂದ ಮಿದುಳು ರಕ್ತಮಧ್ಯದ ಬೇಲಿ ದಾಟುವಲ್ಲಿ ಇವುಗಳ ಸ್ಪರ್ಧೆ ಬಲವಾಗಿರುತ್ತದೆ. ಕಾರ್ಬೋಹೈಡ್ರೇಟುಗಳನ್ನು ಸೇವಿಸಿದಾಗ ಟ್ರಿಪ್ಟೊಫೇನಿಗೆ ಹಾದಿ ಸುಗಮವಾಗುತ್ತದೆಯಷ್ಟೇ. ಆರೀತಿ ವಿವಿಧ ಆಹಾರ ಸೇವಿಸಿ ಟೈರೊಸೀನಿಗೆ ಹಾದಿ ಸುಗಮಗೊಳಿಸಲು ಸಾಧ್ಯವಿಲ್ಲ. ಹೀಗಾಗಿ ಪರಿಶುದ್ಧ ರೂಪದಲ್ಲಿ ಮಾತ್ರೆಗಳನ್ನು ತೆಗೆದುಕೊಳ್ಳಬೇಕು. ಇಲ್ಲವೇ ಈ ಪರಿಶುದ್ಧ ಟೈರೊಸೀನನ್ನು ಪ್ರೋಟೀನ್ ಇಲ್ಲದ ಆಹಾರದೊಂದಿಗೆ ಬೆರಸಬೇಕು. ಟೈರೊಸೀನ್ ಬೆರಸಿದ ಚಾಕೊಲೇಟ್‌ಗಳನ್ನು ಆಗಲೇ ಒಂದು ವ್ಯಾಪಾರಿ ಕಂಪನಿ ತಯಾರಿಸಿ ಡಾ|| ಗೆಲೆನ್‌ಬರ್ಗ್‌ಗೆ ಸರಬರಾಜುಮಾಡುತ್ತಿದೆ.

ಲಿಪ್ಟನ್ ಟೀ ಕಂಪೆನಿಯವರು ಸೂಪ್ (Soup-ಸಾರು) ಗಳಿಗೆ ಹಾಕುವ ಶಾವಿಗೆಗಳಲ್ಲಿ, ಜ್ಞಾಪಕಶಕ್ತಿ ಹೋಗದಂತೆ ತಡೆಗಟ್ಟುವ ಒಂದು ಪೋಷಕ ದ್ರವ್ಯವನ್ನು ಸೇರಿಸುವುದಕ್ಕಾಗಿ ಅಧ್ಯಯನಗಳನ್ನು ನಡೆಸಿದ್ದಾರೆ. ಕೋಲೀನ್ (choline) ಎಂಬ ಆಹಾರ ಪದಾರ್ಥವನ್ನು ತಿಂದರೆ ಮಿದುಳಿನಲ್ಲಿ ಅಸೆಟಿಲ್ ಕೋಲೀನ್ ಎಂಬ ನರಸಂದೇಶವಾಹಕದ ಪ್ರಮಾಣ ಹೆಚ್ಚುತ್ತದೆಯೆಂದು ಡಾ|| ರಿಚರ್ಡ್‌ವುರ್ಟ್‌ಮನ್ ಮತ್ತು ಅವರ ವಿದ್ಯಾರ್ಥಿನಿ ಎಡಿತ್‌ಕೋಹೆನ್ ತೋರಿಸಿಕೊಟ್ಟರು. ನಿರೋಗಿಗಳಾದವರಲ್ಲಿ ಅಸೆಟಿಲ್ ಕೋಲೀನನ್ನು ತಡೆ ತಡೆಗಟ್ಟುವ ಔಷಧಿಗಳಿಂದ ಜ್ಞಾಪಕಶಕ್ತಿ ಕುಂದುತ್ತದೆ ಮತ್ತು ಅಸೆಟಿಲ್ ಕೋಲೀನಿನಂತೆಯೇ ಪ್ರತಿಕ್ರಿಯೆ ನಡೆಸುವ ಮದ್ದುಗಳಿಂದ ಕುಂದಿದ ಜ್ಞಾಪಕಶಕ್ತಿ ಸರಿಹೋಗುತ್ತದೆ.

ಇದಾಗಿ ಕೆಲವೇ ಸಮಯದ ಬಳಿಕ ಡಾ|| ವುರ್ಟ್‌ಮನ್ ಮತ್ತು ಅವರ ಸಹೋದ್ಯೋಗಿಗಳು ಲೆಸಿಥಿನ್ (Lecithin) ನಿಂದ ಮಿದುಳಿನಲ್ಲಿ ಅಸೆಟಿಲ್ ಕೋಲೀನ್ ಮತ್ತೂ ಹೆಚ್ಚಾಗಿ ಉತ್ಪಾದನೆಯಾಗುತ್ತದೆಯೆಂದು ಕಂಡುಹಿಡಿದರು. ಲೆಸಿಥಿನ್ನು ಮಾನವರಲ್ಲಿ ಮತ್ತು ಪ್ರಾಣಿಗಳಲ್ಲಿ ಕೋಲೀನಿನ ಸಹಜ ಮೂಲವಸ್ತು. ಹಾಗಿದ್ದಲ್ಲಿ ಹೆಚ್ಚುಹೆಚ್ಚಾಗಿ ಲೆಸಿಥಿನ್ ಸೇವಿಸಿದರೆ ನೆನಪಿನ ಶಕ್ತಿ ಹೆಚ್ಚುವುದೇ? ಮುಪ್ಪಿನಿಂದಾಗಿ ಜ್ಞಾಪಕಶಕ್ತಿ ಸರಿಯಾಗಿಲ್ಲದವರಿಗೆ ಇದು ಬಹು ಮುಖ್ಯ ವಿಷಯ.

ಇತ್ತೀಚೆಗೆ ಬ್ರಿಟನ್ನಿನಲ್ಲಿ ಒಂದು ಪ್ರಯೋಗ ಆರುತಿಂಗಳ ಕಾಲ ನಡೆಯಿತು. ಜ್ಞಾಪಕಶಕ್ತಿಯನ್ನು ಕುಂಠಿತಗೊಳಿಸುವ ಅಲ್‌ಝೈಮರ್ ಖಾಯಿಲೆಯಿಂದ ನರಳುತ್ತಿರುವವರಿಗೆ ಆರು ತಿಂಗಳ ಕಾಲ ಪ್ರತಿದಿನ ೨೫ ಗ್ರಾಂ ಪರಿಶುದ್ಧ

ಲೆಸಿಥಿನ್ ಕೊಡಲಾಯಿತು. ಅವರ ಜ್ಞಾಪಕಶಕ್ತಿ ಸ್ವಲ್ಪಮಟ್ಟಿಗೆ ಉತ್ತಮಗೊಂಡಿತು ಅಥವಾ ಇದೇ ಪ್ರಯೋಗದಲ್ಲಿ ಭಾಗವಹಿಸಿದ್ದ ಲೆಸಿಥಿನ್ ಸೇವಿಸದೆ ಇದ್ದ ರೋಗಿಗಳಿಗಿಂತ ಜ್ಞಾಪಕಶಕ್ತಿ ಕಡಿಮೆ ಪ್ರಮಾಣದಲ್ಲಿ ಕುಂದಿತು.

ಲೆಸಿಥಿನನ್ನು ಸೂಪ್‌ಗೆ ಹಾಕುವ ದಪ್ಪಶ್ಯಾವಿಗೆ ಬೆರಸಿ ಪರೀಕ್ಷಿಸಲಾಗುತ್ತಿದೆ. ಸದ್ಯದಲ್ಲೇ ವೈದ್ಯರು ತಮ್ಮ ರೋಗಿಗಳಿಗೆ ವಿವಿಧ ಪರಿಮಳಗಳಲ್ಲಿ ತಯಾರಾಗುತ್ತಿರುವ ಈ ಪದಾರ್ಥವನ್ನು ಶಿಫಾರಸ್ಸು ಮಾಡಬಹುದು.

"ಮಿದುಳಿನ ಮೇಲೆ ಪೋಷಕ ದ್ರವ್ಯಗಳ ಪ್ರಭಾವ" ಈ ಕ್ಷೇತ್ರದ ಸಂಶೋಧನೆಯಲ್ಲಿ ವಯಸ್ಸು ಬಹು ಮುಖ್ಯವಾದ ಪಾತ್ರ ವಹಿಸುತ್ತದೆ. ಗರ್ಭಾವಸ್ಥೆಯ ಕಡೆಯ ಮೂರು ತಿಂಗಳುಗಳಲ್ಲಿ ಮಿದುಳಿನ ನ್ಯೂರಾನುಗಳು ಬಹು ಬೇಗ ಬೇಗ ವಿಭಜಿಸಿ ಬೆಳೆಯುತ್ತವೆ. ಮಗು ಹುಟ್ಟಿದ ನಂತರ ೧೮ ತಿಂಗಳು ನ್ಯೂರಾನುಗಳಿಗೆ ಕೊಂಬೆಗಳಂಥ ಕವಲುಗಳು ಹುಟ್ಟಿಕೊಳ್ಳುತ್ತವೆ. ಈ ಕವಲುಗಳ ಸಹಾಯದಿಂದಲೇ ಒಂದು ನ್ಯೂರಾನ್ ಇನ್ನೊಂದು ನ್ಯೂರಾನ್‌ಗೆ ಸಂದೇಶ ಕಳುಹಿಸುವುದು ಮತ್ತು ಸಂದೇಶಗಳನ್ನು ತೆಗೆದುಕೊಳ್ಳುವುದು ಸಾಧ್ಯ. ತಾಯಿ ಮತ್ತು ಎಳೆ ಮಗು ಇಬ್ಬರಿಗೂ ಸಾಕಷ್ಟು ಪ್ರೋಟೀನ್ ಇರುವ ಸಮತೂಕದ (balanced) ಪೋಷಕ ಆಹಾರ ಈ ಸಮಯದಲ್ಲಿ ಅತ್ಯಗತ್ಯ. ಇದು ದೊರಕದಿದ್ದಲ್ಲಿ ಮಗುವಿನ ಮಿದುಳಿನ ಬೆಳವಣಿಗೆಗೆ ಧಕ್ಕೆಯಾಗಬಹುದು ಮತ್ತು ಇದನ್ನು ಮುಂದೆ ಸರಿಪಡಿಸಲು ಅಸಾಧ್ಯವಾಗಬಹುದು.

ಎಳೆ ವಯಸ್ಸಿನಲ್ಲಿ ಸರಿಯಾದ ಆಹಾರ ದೊರಕದ ಮಕ್ಕಳ ಮತ್ತು ಬಸುರಿತನದ ಕಡೆ ತಿಂಗಳುಗಳಲ್ಲಿ ಸರಿಯಾದ ಆಹಾರ ಸಿಕ್ಕಿಲ್ಲದ ತಾಯಂದಿರ ಮಕ್ಕಳ ಬುದ್ಧಿಮಟ್ಟ ಕಡಿಮೆಯಾಗಿದ್ದು, ಯಾವುದೇ ವಿಷಯದ ಕಡೆಗೆ ಮನಸ್ಸನ್ನು ಕೇಂದ್ರೀಕರಿಸುವ ಸಮಯಕೂಡ ಇಂಥ ಮಕ್ಕಳಲ್ಲಿ ಕಡಿಮೆಯಾಗಿರುತ್ತದೆ ಎನ್ನುವುದಕ್ಕೆ ಪುರಾವೆಗಳಿವೆ. ಈ ಕಾಲಾವಧಿಯ ನಂತರ ಒಳ್ಳೆಯ ಆಹಾರ ಸಿಕ್ಕರೂ ಇವರ ಸ್ಥಿತಿ ಉತ್ತಮಗೊಳ್ಳುವುದಿಲ್ಲ. ಅದೇ ಒಂದೂವರೆ ವರ್ಷಗಳು ತುಂಬುವವರೆಗೆ ಸಾಕಷ್ಟು ಪ್ರೋಟೀನು ಸಿಕ್ಕಿದ್ದು ನಂತರ ನ್ಯೂನಪೋಷಣೆಗೊಳಗಾದ ಮಕ್ಕಳು ತಿರುಗಿ ಒಳ್ಳೆ ಆಹಾರ ದೊರಕಿದ ನಂತರ ಸರಿಹೋದರು.

ಸಾಕಷ್ಟು ಪ್ರೋಟೀನ್ ಇರುವ ಸಮತೂಕದ ಆಹಾರವಷ್ಟೇ ಮುಪ್ಪಿನಲ್ಲಿ ಸಾಕಾಗಲಾರದು. ವಯಸ್ಸಾಗುತ್ತಾ ಹೋದಂತೆ ಮಿದುಳಿನ ನ್ಯೂರಾನ್‌ಗಳಲ್ಲಿ ಅನೇಕವು ಸತ್ತುಹೋಗುತ್ತವೆ. ಇವುಗಳ ಸ್ಥಳದಲ್ಲಿ ಹೊಸ ನ್ಯೂರಾನ್‌ಗಳು ಬರುವುದಿಲ್ಲ. ವೃದ್ಧರಲ್ಲಿ ಕಾಣಬರುವ ಮರೆಗುಳಿತನ ಹಾಗೂ ಜಡತ್ವಗಳಿಗೆ ಇದೇ

ಕಾರಣವಿರಬಹುದು. ಡಾ| ವುರ್ಟ್‌ಮನ್‌ರ ಪ್ರಕಾರ "ಮುದುಕರಿಗೆಂದೇ ವಿಶೇಷ ರೀತಿಯ ಟಾನಿಕ್‌ಅನ್ನು ನಿಯೋಜಿಸಿ ಈ ರೀತಿಯ ವಿನಾಶಕ ಕ್ರಿಯೆಯನ್ನು ತಡೆಗಟ್ಟಲು ಸಾಧ್ಯವಾಗಬೇಕು. ಅಲ್ಲದೆ ಉಳಿದುಕೊಂಡಿರುವ ನ್ಯೂರಾನ್‌ಗಳ ಕೈಲಿ ಚೆನ್ನಾಗಿ ದುಡಿಸಿಕೊಳ್ಳಲೂಬಹುದು. ನ್ಯೂರಾನ್‌ಗಳ ಸಂಖ್ಯೆ ಕಡಿಮೆಯಿದ್ದಲ್ಲಿ ಅವುಗಳ ಕಾರ್ಯಶೀಲತೆಯನ್ನು ಹೆಚ್ಚಿಸುವುದರಿಂದ ಪ್ರಯೋಜನವಾಗಬಹುದು.

ನರಸಂದೇಶವಾಹಕಗಳ ಮೇಲೆ ಪ್ರಭಾವ ಬೀರುವ ಪೋಷಕ ಪದಾರ್ಥಗಳನ್ನು ಬೆರಸಿದ ಆಹಾರ ಪದಾರ್ಥಗಳನ್ನುಪಯೋಗಿಸುವುದು. ಈ ಹಾದಿಯಲ್ಲಿ ಅತ್ಯಂತ ಪ್ರಯೋಜನಕಾರಿಯಾಗಬಹುದು. ಔಷಧಿಗಳಿಂದ ಅನಪೇಕ್ಷಿತ ಪರಿಣಾಮಗಳಾಗಬಹುದು. ಅದೇ ಆಹಾರ ಪದಾರ್ಥಗಳಿಂದ ಅಂಥ ಪರಿಣಾಮಗಳಾಗುವುದಿಲ್ಲವಾದ್ದರಿಂದ ಔಷಧಿಗಳಿಗಿಂತ ಕ್ಷೇಮಕರವಾಗಿರುತ್ತವೆ. ಡಾ|| ವುರ್ಟ್‌ಮನ್ ಹೇಳಿಕೆಯ ಪ್ರಕಾರ ಇವೆಲ್ಲ ಹೊಸ ಸಂಯುಕ್ತಗಳಲ್ಲ. ಜೀವವಿಕಾಸ ಕ್ರಿಯೆಯಲ್ಲಿ ಅತಿಮುಂಚೆಯೇ ಮಾನವ ಶರೀರ ಈ ಸಂಯುಕ್ತಗಳೊಡನೆ ಹೊಂದಾಣಿಕೆ ಮಾಡಿಕೊಂಡಿದೆ.

ಈ ಸಂಶೋಧನೆಗಳಿಲ್ಲದರ ಪರಿಣಾಮವೇನು? ನಿದ್ದೆ ಬರದಿರುವಾಗ, ಮನಸ್ಸು ಖಿನ್ನವಾಗಿರುವಾಗ, ಜ್ಞಾಪಕಶಕ್ತಿ ಕುಂದಿದಾಗ, ನೋವುಗಳು ಕಂಗೆಡಿಸಿದಾಗ ಆಯಾ ತೊಂದರೆಗಳಿಗೇ ವಿಶಿಷ್ಟವಾದ ಬೇರೆಬೇರೆ ಪೋಷಕ ಪದಾರ್ಥಗಳನ್ನು ಔಷಧಿಗಳಂತೆ ಸೇವಿಸುವಂತಾಗಬಹುದು. ಮಿದುಳಿಗೂ ಆಹಾರಪದಾರ್ಥಗಳಿಗೂ ಇರುವ ಇನ್ನೂ ಅನೇಕ ಸಂಬಂಧಗಳನ್ನು ಕಂಡು ಹಿಡಿದ ನಂತರ, ಅವುಗಳಿಂದ ನಮಗೆ ಅನೇಕ ಇನ್ನಿತರ ವಿಷಯಗಳಲ್ಲಿ ಉಪಯೋಗ ಮತ್ತು ಸಹಾಯವಾಗಬಹುದು.

ಯಮುನಾಬಾಯಿ ಆರ್. ರಾವ್

ವಂಚಕರು ಸಮಾಜದಲ್ಲಿ ಅತೀವ ಘಾತುಕ ವ್ಯಕ್ತಿಗಳು, ಅಂತಃಕರಣವನ್ನೇ ಮಂಥನ ಮಾಡಿ ನಮ್ಮ ಪವಿತ್ರ ಕರ್ತವ್ಯಗಳಿಂದಲೇ ನಮ್ಮನ್ನು ಜಾರಿಸುತ್ತಾರೆ.

—ಕ್ರ್ಯಾಬ್

ಗರ್ಭಿಣಿಯರ ಬಗ್ಗೆ ವಹಿಸಬೇಕಾದ ಜಾಗರೂಕತೆ

ದೇಶದ ಮುಂದಿನ ಪೀಳಿಗೆಯನ್ನು ಧರಣಿಗೆ ತರುವ ದುರ್ಬಲ ವರ್ಗದವರಾದ ತಾಯಂದಿರ ಗರ್ಭಕಾಲದಲ್ಲಿರಬೇಕಾದ ಎಚ್ಚರಿಕೆಯ ಪ್ರಾಮುಖ್ಯವನ್ನು ಬಹು ವರ್ಷಗಳ ಹಿಂದೆ ತಿಳಿದ ಸರಕಾರ ಪ್ರತ್ಯೇಕ ಹೆರಿಗೆ ಆಸ್ಪತ್ರೆಗಳಲ್ಲದೆ ಹಲವು ಊರು ನಗರಗಳಲ್ಲಿ ಗರ್ಭಿಣಿ ಕೇಂದ್ರಗಳನ್ನೂ ತೆರೆಯಿತು. ಹಾಗೆಯೇ ಕಾಲ ಕ್ರಮೇಣ ಮಾತೃ ಶಿಶು ಆರೋಗ್ಯ ಕೇಂದ್ರಗಳೂ ಪ್ರಾರಂಭವಾದುವು. ಉದ್ದಿಶ್ಯ ಅವುಗಳಿಗೆ ಗರ್ಭಿಣಿಯರು ಆಗಾಗ ಹೋಗಿ ಪರೀಕ್ಷೆಗೊಳಗಾಗಿ ಸಲಹೆ ಪಡೆಯುತ್ತಿರಬೇಕೆನ್ನುವುದು. ಗರ್ಭಕಾಲದಲ್ಲಿ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಕೂಸಿಗೆ ಪುಷ್ಟಿಕೊಡುವ ಆಹಾರ ತಾಯಿಯ ರಕ್ತದ ಮೂಲಕ ಕೂಸಿನ ರಕ್ತಕ್ಕೆ ಮಾಸಿನ ಮೂಲಕ ಒದಗುತ್ತಿರಬೇಕು. ಹಾಲು ಮೊದಲಾದವನ್ನು ಕೊಡಲು ಕೆಲವು ಕೇಂದ್ರಗಳಲ್ಲಿ ಏರ್ಪಾಟಿದೆ. ನಮ್ಮ ಬಡದೇಶದಲ್ಲಿ ತಾಯಿಗೆ ಸಾಕಷ್ಟು ಪುಷ್ಟಿಯಾದ ಆಹಾರ ಸಿಗದಿದ್ದಾಗ ಕೂಸಿಗೆಲ್ಲಿಂದ ಸಿಗುತ್ತದೆ? ಇನ್ನು ವರ್ಷಕ್ಕೊಂದು ಮಗುವನ್ನು ಹಡೆಯುತ್ತಿದ್ದರೆ ಬಹಳ ಸ್ತ್ರೀಯರು ಸಣ್ಣಗಾಗಿ ರಕ್ತ ಸಾಲದೆ ಬಿಳಿಚಿಕೊಂಡಾಗ ಅವರ ಪ್ರಾಣಕ್ಕೆ ಕುತ್ತು ಬರುತ್ತದೆ. ಪುಷ್ಟಿ ಸಾಲದೆ ಹಲವು ಬಾರಿ ಮೈ ಇಳಿದುಹೋಗಿ ನಿಶ್ಶಕ್ತಿ ಹೆಚ್ಚಿ ತಾಯಿ ಸತ್ತು ಮಕ್ಕಳೂ ತಬ್ಬಲಿಯಾಗುವ ಪ್ರಸಂಗಗಳಿಲ್ಲದಿಲ್ಲ. ಅಥವ ಮನೆಯಲ್ಲಿ ಮಕ್ಕಳು ಹೆಚ್ಚಿ ತಿನ್ನುವ ಬಾಯಿಗಳು ಹೆಚ್ಚಿ ಬಡತನ ಇನ್ನೂ ಹೆಚ್ಚಿ ಹಲವು ಮಕ್ಕಳೂ ಸಾಯುತ್ತಾರೆ ಇಲ್ಲವೇ ಅವರೂ ಕೂಲಿ ಕೆಲಸ ಮಾಡಬೇಕಾಗುತ್ತದೆ. ಚಿಕ್ಕ ಮಕ್ಕಳು ಬೀದಿಯಲ್ಲಿ ಬಿದ್ದಿರೋ ಸಗಣಿ ಬಾಚಿ ಬೆರಣಿ ತಟ್ಟುತ್ತಾರೆ. ಒಪ್ಪತ್ತೂಟಕ್ಕೂ ಕಷ್ಟವಿರುವ ಮಕ್ಕಳು ಶಾಲೆಗೆ ಹೋಗಿ ಓದು ಬರಹ ಕಲಿಯಲಾಗದು; ಅವರಿಗೆ ಅದು ಹಿಡಿಸುವುದೂ ಇಲ್ಲ. ಹಲವರು ರೋಗಗಳಿಂದ ನರಳಿ ಸಾಯಬಹುದು. ಅಥವಾ ಪೋಲಿಬಿದ್ದು ಕಳ್ಳತನ ಮಾಡಿ ಕೊಲೆಗಾರರಾಗಬಹುದು. ಆದರೂ ಒಟ್ಟಿನಲ್ಲಿ ದೇಶದ ಜನಸಂಖ್ಯೆ ಹೆಚ್ಚುತ್ತ ಬಡತನ ಹೆಚ್ಚುತ್ತಿದೆ. ಬಡತನ ಹೆಚ್ಚುತ್ತಿದ್ದರೆ ಗರ್ಭಿಣಿಯರ ಆರೋಗ್ಯಪಾಲನೆ ಹೇಗಾದೀತು? ಸ್ತ್ರೀಯರು ಬಸಿರಾಗಿ ತಾವೂ ಆರೋಗ್ಯ ಕಳೆದುಕೊಂಡು ಅಪಾಯಕ್ಕೆ ಗುರಿಯಾಗಿ ಆರೋಗ್ಯವಿಲ್ಲದ ಅಥವಾ ಸಾಯುವ ಮಕ್ಕಳನ್ನು ಹೆತ್ತು ಒಟ್ಟಿನಲ್ಲಿ ದೇಶದ ಜನಸಂಖ್ಯೆ ಹೆಚ್ಚಿಸಿ ದೇಶದ ಬಡತನವನ್ನೂ ಹೆಚ್ಚಿಸುತ್ತಿರುತ್ತಾರೆ. ಅದರಿಂದಲೇ ಪ್ರಪಂಚದಲ್ಲೆಲ್ಲೂ ಕುಟುಂಬ ಯೋಜನೆ ಚಳುವಳಿ ನಡೆದಿದೆ. ಆ ಯೋಜನೆಯಿಂದ ಬೇಡದ

ಮಕ್ಕಳು ಹುಟ್ಟುವುದು ತಪ್ಪಿ ತಾಯಂದಿರ ಹಾಗೂ ಮಕ್ಕಳ ಮರಣ ಕಮ್ಮಿಯಾಗಿ ದೇಶ ಬಡವಾಗುವುದೂ ತಪ್ಪುತ್ತದೆ, ಬೆಲೆಗಳು ಏರುವುದು ನಿಲ್ಲುತ್ತದೆ. ಕುಟುಂಬಗಳ ಕಲ್ಯಾಣವಾಗುತ್ತದೆ. ದೇಶ ಸುಭಿಕ್ಷವಾಗುತ್ತದೆ. ಮಾತೃ ಶಿಶು ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರ ಕುಟುಂಬ ಯೋಜನೆ ಪ್ರಾರಂಭಿಸಿ ಅವನ್ನು ಕುಟುಂಬ ಕಲ್ಯಾಣ ಕೇಂದ್ರಗಳನ್ನಾಗಿ ಮಾಡಿದೆ. ಎರಡು ಗರ್ಭಗಳ ನಡುವೆ ಮೂರು ವರ್ಷಗಳಾದರೂ ಬಿಡುವಿದ್ದರೆ ತಾಯಿಗೂ ಪೂರ್ತಿ ಚೇತರಿಸಿಕೊಳ್ಳುವ ಅವಕಾಶ ಸಿಗುತ್ತದೆ ಹಾಗೂ ಹುಟ್ಟುವ ಮಕ್ಕಳೂ ಹೆಚ್ಚು ಪುಷ್ಟಿ ಪಡೆಯಬಲ್ಲರು. ಕುಟುಂಬಕ್ಕೆ ಇಬ್ಬರೇ ಮಕ್ಕಳಾದರೆ ಗರ್ಭಿಣಿಗೆ ಹೆಚ್ಚು ಪುಷ್ಟಿ ಸಿಗುತ್ತದೆ, ಖರ್ಚು ಕಮ್ಮಿಯಾಗಿ ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿ ಸಾಗುತ್ತದೆ. ಬಡತನದಲ್ಲಿ ಹುಟ್ಟಿ ಕಷ್ಟಕ್ಕೀಡಾಗದಿರುವುದು ಮಕ್ಕಳ ಹಕ್ಕು. ಮಕ್ಕಳು ಹೆಚ್ಚಿ ಬಡತನದಿಂದ ನರಳದಿರುವುದು ತಾಯಿ ತಂದೆಯರ ಹಕ್ಕು. ಸ್ವಸೇವೆಯೊಡನೆ ದೇಶಸೇವೆಯನ್ನೂ ಮಾಡಿದಂತಾಗುತ್ತದೆ.

ಗರ್ಭಿಣಿಯು ತನ್ನ ಗರ್ಭದ ಪ್ರಾರಂಭದಲ್ಲೇ ಗರ್ಭಿಣಿ ಕೇಂದ್ರಕ್ಕೆ ಹೋಗಲು ಮೊದಲು ಮಾಡಿ ಏಳು ತಿಂಗಳವರೆಗೆ ತಿಂಗಳಿಗೊಂದು ಸಲವೂ ಆಮೇಲೆ ೨ ವಾರಗಳಿಗೊಂದು ಸಲವೂ ಕಡೇ ತಿಂಗಳಲ್ಲಿ ವಾರಕ್ಕೊಂದು ಸಲವೂ ಹೋಗಿ ಪರೀಕ್ಷೆಗೊಳಗಾಗಬೇಕು. ಹಲವು ಗರ್ಭಿಣಿಯರಿಗೆ ತೊಂದರೆಯೇನೂ ಇರುವುದಿಲ್ಲ. ವೈದ್ಯರು ಗರ್ಭದ ಸ್ವಭಾವ, ಪ್ರಗತಿ ಮುಂತಾದವನ್ನು ತಿಳಿದು ಸಲಹೆ ಕೊಡುತ್ತಾರೆ. ಕೆಲವು ಸಲ ಗರ್ಭಕೋಶದಲ್ಲಿ ಗರ್ಭವಿಲ್ಲದೆ ಕರುಳು ಇತ್ಯಾದಿಗಳ ನಡುವೆಯಿದ್ದು ಆ ಅಂಗಗಳನ್ನು ಮಾಸು ತಿಂದುಹಾಕುವುದರಿಂದ ಅಂಗನಾಶದ ಅಪಾಯವಲ್ಲದೆ ಕೂಡಲೇ ಗೊತ್ತಾಗದ ಒಳರಕ್ತಸ್ರಾವವಿರುತ್ತದೆ. ಇದು ಮೊದಲೇ ಗೊತ್ತಾದರೆ ಪರಿಸ್ಥಿತಿ ಕೈಮೀರುವ ಮೊದಲೇ ವೈದ್ಯರು ಅಗತ್ಯವಾದುದನ್ನು ಮಾಡಬಹುದು. ಕೆಲವು ವೇಳೆ ನಿಜವಾದ ಗರ್ಭವಲ್ಲದೆ ಗಡ್ಡೆ ಇತ್ಯಾದಿ ಇರಬಹುದು. ತಂದೆ ತಾಯಿಗಳ ಚರಿತ್ರೆ ಮತ್ತು ಇತರ ವಿಚಾರಗಳಿಂದ ಗರ್ಭಿಣಿಯಲ್ಲಿ ವೈದ್ಯ ಏನೇನು ನಿರೀಕ್ಷಿಸಬೇಕೆನ್ನುವುದು ತಿಳಿಯುತ್ತದೆ. ಕಾಲೂತ, ಮುಖಬಾವು, ಮಲಬದ್ಧತೆ, ಕಮ್ಮಿ ನಿದ್ದೆ ಇತ್ಯಾದಿಗಳಿಂದಲೂ ವಿಷಯಗಳು ತಿಳಿಯುತ್ತವೆ. ದೇಹದಲ್ಲಿ ಏನಾದರೂ ತಪ್ಪಿದ್ದರೆ ವೈದ್ಯಪರೀಕ್ಷೆಯಿಂದ ತಿಳಿಯುತ್ತದೆ. ಉದಾ:—ಗುಂಡಿಗೆಬಡಿತ, ರಕ್ತದೊತ್ತಡ, ಮೂತ್ರ ಪರೀಕ್ಷೆ ಇತ್ಯಾದಿ ಮಾಹಿತಿ ಒದಗಿಸುತ್ತವೆ. ಅಪರೂಪವಾಗಿ, ಗರ್ಭದ ನೀರು ಹೆಚ್ಚಿದ್ದರೆ ಅಥವಾ ಮಾಸಿನ ಅರ್ಬುದವಿದ್ದರೆ ಹೊಟ್ಟೆ ವಿಪರೀತ ದೊಡ್ಡ

ದಾಗಿರುತ್ತದೆ. ಗರ್ಭದ ವಯಸ್ಸಿಗಿಂತ ಗರ್ಭಕೋಶದ ಗಾತ್ರ ಕಮ್ಮಿಯಿದ್ದರೂ ಸಂದೇಹಕ್ಕಾಸ್ಪದ.

ಮಗು ತಲೆಕೆಳಗಿಲ್ಲದೆ ಯದ್ವಾತದ್ವಾ ತಿರುಗಿಕೊಂಡಿದ್ದರೆ, ಹೆರಿಗೆ ಕಷ್ಟವಾದುದಾಗಿ ತಾಯಿ ಮಗು ಇಬ್ಬರಿಗೂ ಅಪಾಯ. ತಾಯಿಯ ಅಸ್ಥಿಶ್ರೋಣಿ ಮಗುವಿನ ತಲೆಗಿಂತ ಚಿಕ್ಕದಾಗಿದ್ದರೆ ಹೆರಿಗೆ ಅಸಾಧ್ಯವಾಗುತ್ತದೆ. ಇದನ್ನು ಸಕಾಲದಲ್ಲಿ ತಿಳಿದು ಹೊಟ್ಟೆ ಕುಯ್ದು ಮಗುವನ್ನು ತೆಗೆದರೆ ತಾಯಿ ಮಗು ಇಬ್ಬರಿಗೂ ಕ್ಷೇಮ. ಗರ್ಭಕೋಶ ಭಿತ್ತಿಯಲ್ಲಿ, ಅಥವಾ ಶ್ರೋಣಿಯಲ್ಲೆಲ್ಲಾದರೂ ಗಡ್ಡೆಯಿದ್ದರೆ ಹೆರಿಗೆ ಕಷ್ಟ ಅಥವಾ ಅಸಾಧ್ಯವಾಗಬಹುದು. ಕೆಲವು ವೇಳೆ ತಾಯಿ, ಮಗು ರಕ್ತಗಳಲ್ಲಿ ಹೊಂದಾಣಿಕೆಯಿಲ್ಲದಿದ್ದರೆ (ಏಕೆಂದರೆ ಮಗುವಿನ ರಕ್ತದಲ್ಲಿ ತಂದೆಯ ಅಂಶಗಳೂ ಇರುವುದರಿಂದ) ಕೆಂಪುರಕ್ತ ಕಣಗಳ ಕರಗುವಿಕೆಯಿಂದ ಅಥವಾ ಅವು ಕೂಡಿ ಒಂದಾಗುವುದರಿಂದ, ಇಬ್ಬರಿಗೂ ಅಪಾಯ.

ತಾಯಿ ಭಯಗ್ರಸ್ಥಳಾಗಿ, ಕೋಪಿಷ್ಟಳಾಗಿ ಅಥವಾ ಬರಿದೇ ಪರದಾಡುವವಳಾಗಿದ್ದರೆಗರ್ಭಪಾತ (ಪೂರ್ಣ ಅಥವಾ ಅಪೂರ್ಣ)ವಾಗಬಹುದು. ಕೆಲವು ಅನುವಂಶೀಯ ಕೆಡಕುಗಳಿದ್ದರೆ ವೈದ್ಯಕೀಯ ಗರ್ಭಪಾತ ಬೇಕಾಗಬಹುದು.

ಆಹಾರ : ಗರ್ಭಿಣಿ ಚೆನ್ನಾಗಿ ತಿನ್ನಬೇಕು ಎಂದು ಅವರಿವರು ಹೇಳಿದುದನ್ನು ಕೇಳಿ ಹೊಟ್ಟೆ ಅಥವಾ ದೇಹ ಕೆಡಿಸಿಕೊಳ್ಳಬಾರದು. ಮಿತವಾದ ಪುಷ್ಟಿಯಾದ ಆಹಾರ ಸೇವಿಸಬೇಕು. ಅದರಲ್ಲಿ ಹಾಲು ತತ್ತಿಯಿರಬೇಕು. ಮಾಂಸವೂ ಇರಬಹುದು. ಹಣ್ಣು, ತರಕಾರಿ ತಿನ್ನಬೇಕು. ಕಬ್ಬಿಣಾಂಶ ಮಾತ್ರೆ, ವಿಟಮಿನ್‌ಗಳಿದ್ದರೆ ಒಳ್ಳೆಯದು. ಅತಿ ಕಮ್ಮಿಯೂ ತಿನ್ನಬಾರದು. ಸ್ಥೂಲ ಪ್ರಕೃತಿಯವರು ಕೊಂಚ ಕಮ್ಮಿ ತಿನ್ನಬೇಕು. ಉಷ್ಣದೇಶಗಳಲ್ಲಿ ಅಪಪುಷ್ಟಿ ಸಾಮಾನ್ಯ. ಆದರೆ ಅವರೂ ಮಿತಿ ಮೀರಿ ತಿನ್ನಬಾರದು.

ಗರ್ಭದ ಕಡೇ ವಾರದಲ್ಲಿ ಸ್ತನಗಳು ದೊಡ್ಡವಾಗುವಾಗ ಅವನ್ನು ಬಿಗಿಯಾಗಿ ಕಟ್ಟಬಾರದು. ಅವು ದೊಡ್ಡವಾಗಿದ್ದರೆ ಅವಕ್ಕೆ ಸಡಿಲ ಆಧಾರ ಕೊಡಬೇಕು. ಗರ್ಭದ ಕಡೆಯ ವಾರಗಳಲ್ಲಿ ಮೊಲೆ ತೊಟ್ಟುಗಳನ್ನು ಸೋಪಿನಿಂದ ತೊಳೆದು ಎಳೆಯಬೇಕು. ಬಿರುಕುಗಳಿದ್ದರೆ ತುಸು ಶುದ್ಧ ಎಣ್ಣೆ ಸವರಬೇಕು.

ಮಿತ ಅಂಗ ಸಾಧನೆ ಗರ್ಭಿಣಿಗೆ ಒಳ್ಳೆಯದು. ಆಯಾಸದ ಕೆಲಸಗಳು ಕೂಡದು. ಉಡುಪು ಹಗುರ, ಸಡಿಲ ಹಾಗೂ ಅನುಕೂಲಕರವಾಗಿರಬೇಕು. ಗರ್ಭದ ಮೊದಲಿನ ಮತ್ತು ಕೊನೆಯ ವಾರಗಳಲ್ಲಿ ಸಂಭೋಗ ವರ್ಜ್ಯ; ಅವುಗಳ ನಡುವೆ ಮಿತವಾಗಿ ಆಗಬಹುದು. ನಿತ್ಯ ಸ್ನಾನವಿರಬೇಕು. ಮಲಬದ್ಧತೆ

ಇರಬಾರದು ; ಇದ್ದರೆ ಆಹಾರದಿಂದ ಸರಿಪಡಿಸಿಕೊಳ್ಳಬೇಕು. ಬೇಕಾದರೆ ೧-೨ ಚಮಚ ಪ್ಯಾರಫಿನ್ ಎಣ್ಣೆ ರಾತ್ರಿ ಮಲಗುವಾಗ ತೆಗೆದುಕೊಳ್ಳಬಹುದು. ಭೇದಿ ಔಷಧಿಗಳನ್ನು ಸೇವಿಸಬಾರದು. ರೇಗಾಡದೆ, ಅಳದೆ, ಗಾಬರಿ ಪಡದೆ ಶಾಂತವಾಗಿರಬೇಕು. ತಾಯ್ತನದ ಪುಸ್ತಕಗಳನ್ನು ಓದುತ್ತಿದ್ದರೆ ಮನಸ್ಸು ಶಾಂತವಾಗಿರುತ್ತದೆ. ಬಸಿರು ಹೆರಿಗೆಗಳು ಸ್ತ್ರೀಯರ ಸಹಜ ಅಂಗ ಕ್ರಿಯೆಗಳು ; ಅವು ರೋಗಗಳಲ್ಲ.

ಸಾಮಾನ್ಯ ಬುದ್ಧಿವಾದ : ಯಾವ ಕಾರಣದಿಂದಲಾದರೂ ರಕ್ತ ಹೋಗುವುದು, ಮೂತ್ರ ಪ್ರಮಾಣ ಕಮ್ಮಿಯಾಗುವುದು, ಕಾಲೂತ, ಬಿಡದ ತಲೆನೋವು, ಮೇಲಿನ ಹೊಟ್ಟೆಯಲ್ಲಿ ನೋವು, ದೃಷ್ಟಿಮಾಂದ್ಯ, ಕಮ್ಮಿ ನಿದ್ರೆ, ಕಾಲು ಹಿಡಿದುಕೊಳ್ಳುವುದು, ಗರ್ಭಕೋಶ ಹಿಂಡುವ ನೋವು, ಗರ್ಭ ಚೀಲ ಒಡೆದು ನೀರು ಸೋರುವುದು,—ಇಂಥ ತೊಂದರೆಗಳನ್ನು ಕೂಡಲೆ ಪ್ರಸವ ವೈದ್ಯರಿಗೆ ತಿಳಿಸುವುದು.

ಹೆರಿಗೆ ಕಾಲಕ್ಕೆ ಸರಿಯಾಗಿ ಆಸ್ಪತ್ರೆ ಸೇರಬೇಕು. ಮೇಲೆ ತಿಳಿಸಿದಂತೆ ಗರ್ಭಿಣಿ ಜೋಕೆಯಿಂದ ನಡೆದುಕೊಂಡರೆ ಹೆರಿಗೆ ಸುಲಭವಾಗುತ್ತದೆ. ಮಧ್ಯೆ ತೊಂದರೆ ಯೇನಾದರಾದರೆ ಆಸ್ಪತ್ರೆ ಅಥವಾ ಆರೋಗ್ಯ ಕೇಂದ್ರದವರು ನೋಡಿಕೊಳ್ಳುತ್ತಾರೆ. ಗರ್ಭಕಾಲದಲ್ಲಿ ಜಾಗರೂಕತೆ ವಹಿಸಿದರೆ ಹೆರಿಗೆ ಬಾಣಂತಿ ಕಾಲಗಳು ತೊಂದರೆಯಿಲ್ಲದಿದ್ದು, ತಾಯಿ ಮಗುವಿನ ಆರೋಗ್ಯ ಸಮರ್ಪಕವಾಗಿರುತ್ತದೆ. ಕಷ್ಟ ಕೊಡುವ ಹೆರಿಗೆಗಳನ್ನು ತಜ್ಞರು ಮೊದಲೇ ತಿಳಿದು ಸೂಕ್ತ (ಅಗತ್ಯವಿದ್ದರೆ ಶಸ್ತ್ರ) ಚಿಕಿತ್ಸೆಯನ್ನು ನೀಡುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಗರ್ಭಿಣಿ ಸೇವೆ : ಪಾಶ್ಚಿಮಾತ್ಯ ದೇಶಗಳು ಮುಂದುವರಿದವಾದರೆ, ೬೮ ಕೋಟಿ ಮೀರಿ ಹೆಚ್ಚು ಜನರಿರುವ ಭಾರತ ಇನ್ನೂ ಬೆಳೆಯುತ್ತಿರುವ ದೇಶ. ೮೦% ಜನರು ಹಳ್ಳಿಗಳಲ್ಲಿದ್ದಾರೆ. ಹೆಚ್ಚು ವೈದ್ಯರು ಸೌಕರ್ಯಗಳಿರುವ ಪಟ್ಟಣ ಊರುಗಳಲ್ಲಿದ್ದಾರೆ. ಆದ್ದರಿಂದ ನುರಿತ ವೈದ್ಯರ ಸೇವೆ ಹಳ್ಳಿಯವರಿಗೆಲ್ಲ ಸಿಗುವುದು ಕಷ್ಟ. ಅದಕ್ಕೆ ೧೯೭೪-೭೯ (೫ನೇ ಪಂಚವಾರ್ಷಿಕ ಯೋಜನೆ) ರಲ್ಲಿ ಭಾರತ ಸರಕಾರ ೮೦,೦೦೦-೧,೦೦,೦೦೦ ಜನರಿರುವ ಮಂದಿ ಅಭಿವೃದ್ಧಿ ವಿಭಾಗಗಳಲ್ಲಿ ಒಂದೊಂದು ಪ್ರಥಮ ಆರೋಗ್ಯ ಕೇಂದ್ರ ತೆಗೆದು ಅದಕ್ಕೆ ಸೇರಿದಂತೆ ೬-೭ ಅಧೀನ ಕೇಂದ್ರಗಳನ್ನು ಸುತ್ತ ಕೆಲವು ಮೈಲಿ ದೂರಗಳಲ್ಲಿ ಕಟ್ಟಿದ್ದಾರೆ. ಪ್ರತಿ ಪ್ರಥಮ ಆರೋಗ್ಯ ಕೇಂದ್ರದಲ್ಲಿರುವ ಇಬ್ಬರು ವೈದ್ಯರು ಅಧೀನದಲ್ಲಿ ವಿಭಾಗದ ತರಪೇತಾದ ಸಿಬ್ಬಂದಿ ಇದ್ದಾರೆ.

೫ ಕಿ. ಮೀ. ದೂರದೊಳಗೆ ೩೦೦೦ ಅಥವಾ ಹೆಚ್ಚು ಮಂದಿಗೆ ಒಬ್ಬ ಆರೋಗ್ಯ ಉಸ್ತುವಾರಿಯಾಕೆ ತನ್ನ ಸುಪರ್ದಿನ ಹಳ್ಳಿಗಳಲ್ಲಿ ಸುತ್ತಿ ಗರ್ಭಿಣಿಯರನ್ನು ನೋಡಿ ವರದಿ ಸಲ್ಲಿಸುತ್ತಾಳೆ; ಸಣ್ಣ ತೊಂದರೆಗಳಿಗೆ ತಾನೇ ಔಷಧಿ ಕೊಡುತ್ತಾಳೆ. ಹೆಚ್ಚು ಕಾರ್ಯವಿರುವ ವಲಯಗಳಲ್ಲಿ ಮಾತೃ ಶಿಶು ಆರೋಗ್ಯ ಮತ್ತು ಕುಟುಂಬ ಯೋಜನೆ (ಕುಟುಂಬ ಕಲ್ಯಾಣ) ಸೇವೆಗೆ ಹೊಣೆ ಹೊತ್ತ ಆರೋಗ್ಯ ಕೆಲಸದಾಕೆ ಇರುತ್ತಾಳೆ. ಪ್ರಥಮ ಆರೋಗ್ಯ ಕೇಂದ್ರದಲ್ಲಿ ೧೦-೨೦ ವೈದ್ಯಸೇವೆ ಹಾಸಿಗೆಗಳಿರುತ್ತವೆ. ಕುಟುಂಬ ಕಲ್ಯಾಣ ಕೇಂದ್ರಗಳು ದುರ್ಬಲ ಪ್ರಜೆಗಳಾದ ತಾಯಿ ಮಕ್ಕಳಿಗೆ ಮೀಸಲಾಗಿದೆ. ಅಧೀನ ಕೇಂದ್ರಗಳು ಆರೋಗ್ಯ ಪಾಲನೆಯ ಕೇಂದ್ರಗಳು. ವೈದ್ಯರು ಸಿಬ್ಬಂದಿಗೆ ತರಪೇತು ಕೊಡುತ್ತ, ಅವರ ಕೆಲಸಗಳ ಉಸ್ತುವಾರಿ ಮಾಡುತ್ತ ದೊಡ್ಡ ತೊಂದರೆ ರೋಗಿಗಳನ್ನು ನೋಡಿಕೊಳ್ಳುತ್ತಾರೆ. ಮಾತೃ ಶಿಶು ಆರೋಗ್ಯ ಸೇವೆಯ ಹಲವು ಕೆಲಸಗಳನ್ನು ಆರೋಗ್ಯ ಕೆಲಸದಾಕೆ ಮಾಡಿ, ಗರ್ಭ ನಿರೋಧ ಸಾಧನೆ ಮತ್ತು ಮದ್ದುಗಳನ್ನು ಗರ್ಭಗಳಿಗೆ ಅಂತರ ಹೆಚ್ಚಿಸಲು ಕೊಡುತ್ತಾಳೆ. ಮತ್ತು ಗರ್ಭಿಣಿಯರನ್ನು ೩೪, ೩೬, ೩೮ನೇ ವಾರಗಳಲ್ಲಿ ನೋಡಿ ತೊಂದರೆ ಇರುವವರನ್ನು ವೈದ್ಯರು ನೋಡಲಿಕ್ಕೆ ತಿಳಿಸುತ್ತಾಳೆ. ಕಷ್ಟವಿಲ್ಲದವರ ಹೆರಿಗೆಗಳನ್ನು ತರಪೇತಾದ ಹಳ್ಳಿ ಸೂಲಗಿತ್ತಿ ನಡೆಸುತ್ತಾಳೆ. ೩೮ನೇ ವಾರದಲ್ಲಿ ಗರ್ಭಿಣಿಗೆ ಕಷ್ಟವಾಗುವಂತಿದ್ದರೆ ವೈದ್ಯರು ವಾಹನದಲ್ಲಿ ಶುಚಿಯಾದ ಚೀಲ ಅಥವಾ ಪೆಟ್ಟಿಗೆಯಲ್ಲಿ ಶುಚಿಶಸ್ತ್ರಗಳನ್ನು ತೆಗೆದುಕೊಂಡು ಮಂದಿ ಅಭಿವೃದ್ಧಿ ವಲಯದಲ್ಲಿ ಸಂಚರಿಸುತ್ತಾರೆ, ಶಸ್ತ್ರ ಕೆಲಸಗಳನ್ನು ಮಾಡುತ್ತಾರೆ, ತುರ್ತಾಗಿ ಹೊಟ್ಟೆ ಕುಯ್ಯಬೇಕಿದ್ದರೆ ಅದನ್ನೂ ಮಾಡುತ್ತಾರೆ.

—ಎಂ. ದಯಾಕರ

ಸ್ವರ್ಗೀಯ ವಸ್ತುಗಳ ಚಿತ್ರಗಳನ್ನು ಕಲ್ಪಿಸುವ ಆತ್ಮಕ್ಕೆ ಶ್ರದ್ಧೆಯೇ ಸೀಸಕಡ್ಡಿ.

—ಟಿ. ಬಬ್ರಿಡ್

ಬುದ್ಧಿವಂತರು ತಮ್ಮ ಹಾದಿ ತಾವೇ ಹುಡುಕುತ್ತಾರೆ, ತಮ್ಮ ದೀಪವನ್ನು ತಾವೇ ಹಿಡಿದೊಯ್ಯುತ್ತಾರೆ.

—ವಿಲ್ಲಾ ಕ್ಯಾಥರ್

ಮಕ್ಕಳ ಮೇಲ್ಮೆ

ಮನುಷ್ಯನ ಮನಸ್ಸಿಗಿಂತ ವಿಚಿತ್ರವಾದುದು ಈ ಪ್ರಪಂಚದಲ್ಲಿ ಬೇರೊಂದು ಇರಲಾರದು. ಒಂದು ಘಟನೆ ನಡೆದ ಬಳಿಕ, ಕುಳಿತು ನಿಧಾನವಾಗಿ ಆಲೋಚನೆ ಮಾಡಿ ನೋಡಿದರೆ ಒಬ್ಬ ವ್ಯಕ್ತಿ ಆ ಸಂದರ್ಭದಲ್ಲಿ ಹಾಗೇಕೆ ನಡೆದು ಕೊಂಡ ಎನ್ನುವುದಕ್ಕೆ ಸಕಾರಣವಾಗಿ ವಿವರಣೆ ಪತ್ತೆಮಾಡುವುದು ಕಷ್ಟ. ನಿಧಾನಿ ಎನಿಸಿಕೊಂಡವನು ತಾಳ್ಮೆಗೆಟ್ಟು ಕಿರಿಚಾಡಬಹುದು, ಮುಂಗೋಪಿ ವಿಚಾರವಂತನಂತೆ ಸಾವಧಾನದಿಂದ ವರ್ತಿಸಬಹುದು. ಆದರೆ ಈ ವರ್ತನೆಗೆ ಕಾರ್ಯಕಾರಣ ಸಂಬಂಧ ಹುಡುಕಿ ಹೀಗೇ ನಡೆದಿರಬಹುದೆಂದು ಊಹೆ ಮಾಡುವುದು ಅಸಾಧ್ಯ.

ವಿದ್ಯಾರ್ಥಿಗಳಲ್ಲಿ ಅಶಿಸ್ತು ಈಚಿನ ದಿನಗಳಲ್ಲಿ ತುಂಬಾ ಹೆಚ್ಚಿರುವುದು ಕಂಡುಬರುತ್ತೆ. ಇದು ನಮ್ಮ ದೇಶಾದ್ಯಂತ ಅಂಟು ಜಾಡ್ಯದಂತೆ ವ್ಯಾಪಿಸಿ ಬಿಟ್ಟಿದೆ. ಪೋಷಕರೂ ಉಪಾಧ್ಯಾಯರೂ ಕೂಡಿ ವಿಚಾರವಿನಿಮಯ ಮಾಡಿ ಕೊಳ್ಳಬೇಕು. ಈ ಮನೋವೃತ್ತಿಯ ಬೇರು ಎಲ್ಲಿ ಎಂದು ಕಂಡುಹಿಡಿದು ಅದನ್ನು ಮೂಲೋತ್ಪಾಟನೆ ಮಾಡಿದರೆ ಮಾತ್ರ ಈ ಬೃಹತ್ ಸಮಸ್ಯೆ ಕೊನೆ ಗೊಳ್ಳಬಹುದು.

ಸಾಧಾರಣವಾಗಿ ಮಕ್ಕಳು ತಂದೆತಾಯಿ ಹೇಳಿದಂತೆ ಕೇಳಿಕೊಂಡು, ಪಾಠ ಶಾಲೆಗೆ ಸರಿಯಾಗಿ ಹೋಗುವುದು–ಪಾಠಗಳನ್ನು ಕ್ರಮವಾಗಿ ಮಾಡುವುದು, ಸ್ನೇಹಿತರೊಂದಿಗೆ ಹೊಂದಿಕೊಂಡು ಆಟವಾಡುವುದು ಇವುಗಳಲ್ಲಿ ಮಗ್ನರಾಗಿರು ತ್ತಾರೆ. ಏನೋ ಅಪರೂಪಕ್ಕೆ ಒಂದೊಂದು ಸಲ ಹಿರಿಯರ ಮಾತನ್ನು ವಿರೋಧಿಸುವುದು, ಶಾಲೆಗೆ ತಪ್ಪಿಸಿಕೊಳ್ಳುವುದು, ಮನೆಪಾಠ ಮಾಡದಿರುವುದು– ಹೀಗೆ ಸಾಮಾನ್ಯವಾದ ನಡವಳಿಕೆಗೆ ಮೀರಿ ನಡೆದುಕೊಳ್ಳಬಹುದು. ಅದು ಅಸಹಜವಲ್ಲ. ಆದರೆ ಸದಾ ಇದೇ ರೀತಿ ಮಾಡುತ್ತಾ ಇದ್ದರೆ ಆಗ ಅದು ಆ ಮಗುವಿನ ಮನಸ್ಥಿತಿಯಲ್ಲಿ ಏರುಪೇರಾಗಿರುವುದನ್ನು ಸೂಚಿಸುತ್ತದೆ. ತಂದೆ–ತಾಯಿ, ಉಪಾಧ್ಯಾಯರು, ಸಹಪಾಠಿಗಳು ಅಂತಹ ಮಗುವಿನೊಡನೆ ವಿಶ್ವಾಸ ದಿಂದ ನಡೆದುಕೊಂಡು ನಿತ್ಯ ಕ್ರಮಕ್ಕಿಂತ ಹೆಚ್ಚಿನ ಪ್ರೀತಿ ಆದರ ತೋರಿಸ ಬೇಕಾಗುತ್ತದೆ. ಒಂದೊಂದು ಸಲ ಇಷ್ಟರಿಂದಲೇ ಮಗು ಚೇತರಿಸಿಕೊಂಡು ಮೊದಲಿನಂತಾಗಿಬಿಡಬಹುದು. ಆದರೆ ಆ ಮಗುವಿನ ಮನಸ್ಸಿಗೆ ಬಲವಾದ ಆಘಾತ ಉಂಟಾಗಿದ್ದರೆ ಅದನ್ನು ಕಂಡುಹಿಡಿದು ಯುಕ್ತವಾಗಿ ಅವರೊಡನೆ ವ್ಯವಹರಿಸಿ ಆಘಾತದ ಪರಿಣಾಮವನ್ನು ನಿವಾರಿಸಬೇಕಾಗುತ್ತದೆ.

ಮಕ್ಕಳ ಎಳೆ ಮನಸ್ಸು ಹೂವಿನಂತೆ. ಅದನ್ನು ದೊಡ್ಡವರು ಹಿಸುಕದೆ, ಚೆನ್ನಾಗಿ ಅರಳುವಂತೆ ಮನೆಯು ಹಾಗೂ ಶಾಲೆಯ ವಾತಾವರಣ ಇರಬೇಕಾಗಿರುವುದು ಅತ್ಯವಶ್ಯಕ. ಎಷ್ಟೋ ಮನೆಗಳಲ್ಲಿ ಹೊರಗಿನವರ ಮಕ್ಕಳನ್ನು ಸಹಾನುಭೂತಿಯಿಂದ ಕಾಣುವ ಹಿರಿಯರು ತಮ್ಮ ಮಕ್ಕಳ ಸಣ್ಣ ತಪ್ಪನ್ನೇ ದೊಡ್ಡದು ಮಾಡಿ ಶಿಕ್ಷಿಸುವುದನ್ನು ಕಾಣುತ್ತೇವೆ. ಮಕ್ಕಳ ಸರಿಯಾದ ಬೆಳವಣಿಗೆಗೆ ಮನೆಯ ವಾತಾವರಣ ಬಹು ಮುಖ್ಯ. ತಂದೆತಾಯಿಯರ ಪ್ರೀತಿ, ಸಮವಯಸ್ಕರ ಸ್ನೇಹ ಎರಡೂ ಇರಬೇಕು. ಮನೆಯವರು ಅತಿ ಮುದ್ದೂ ಮಾಡದೆ, ಮಿತಿಮೀರಿ ಶಿಕ್ಷೆಯನ್ನೂ ಕೊಡದೆ ಬೆಳೆಸಬೇಕು. ಮಗು ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಸಬೇಕು. ಹೀಗೆ ಮಾಡುವುದರಿಂದ ಮಗುವಿಗೆ ಆತ್ಮಭರವಸೆಯುಂಟಾಗಿ ಅದು ಹತ್ತು ಜನರಲ್ಲಿ ಎದ್ದು ಕಾಣುವಂತೆ ಬೆಳೆಯುತ್ತದೆ.

ಇದು ಸರಿಯಾಗಿ ಬೆಳೆಯುವ ಮಕ್ಕಳ ದಾರಿಯಾಯಿತು. ತಂದೆತಾಯಿ ಮಗುವಿನ ಎದುರಿಗೇ ಜಗಳ ಆಡುವುದು, ಮಗುವಿಗೆ ಅತಿ ಶಿಕ್ಷೆ ಕೊಡುವುದು ತಾಯಿಯೂ ಕೆಲಸಕ್ಕೆ ಹೋಗುವುದು, ಅನಾದರ-ಮೂದಲಿಕೆ- ಈ ವಾತಾವರಣದಲ್ಲಿ ಸಿಕ್ಕಿ ಬೆಳೆದ ಮಗು ತಾನು ಇತರರಿಗಿಂತ ಕೀಳು ಎನ್ನುವ ಮನೋಭಾವದಲ್ಲಿರುತ್ತಾನೆ. ಆಗ ಮನಸ್ಸಿನಲ್ಲಿ ನಿರಂತರ ಸಾಗುವ ಹೋರಾಟದಿಂದ ಅವನು ಸಮಸ್ಯೆಯ ಮಗು ಆಗಿಬಿಡುತ್ತಾನೆ. ಕದಿಯುವುದು, ಸುಳ್ಳು ಹೇಳುವುದು, ಸಹಪಾಟಿಗಳೊಂದಿಗೆ ಸದಾ ಜಗಳ, ಸ್ಕೂಲಿಗೆ ತಪ್ಪಿಸಿಕೊಳ್ಳುವುದು, ದೊಡ್ಡವರಲ್ಲಿ ಅವಿಧೇಯತೆಯಿಂದ ವರ್ತಿಸುವುದು ಮೊದಲಾದ ವೈಪರೀತ್ಯಗಳು ಕಾಣಿಸಿಕೊಳ್ಳುತ್ತವೆ. ನಮ್ಮಲ್ಲಿ ಸಾಧಾರಣವಾಗಿ ಇಂತಹ ಮಕ್ಕಳನ್ನು ಶಿಕ್ಷಿಸಿಯೇ ದಾರಿಗೆ ತಗಲು ಯತ್ನಿಸಿ ಆ ಮಕ್ಕಳ ಸ್ಥಿತಿ ಇನ್ನೂ ಶೋಚನೀಯವಾಗುವಂತೆ ಮಾಡಿಬಿಡುತ್ತಾರೆ. ಆದರೆ ಇಂತಹವರ ಸಮಸ್ಯೆಯನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು. ಮನೆಯಲ್ಲೂ ಶಾಲೆಯಲ್ಲೂ ಅವನನ್ನು ಎಚ್ಚರಿಕೆಯಿಂದ ಗಮನಿಸಬೇಕು. ಆಗ ಸುಮಾರಾಗಿ ಅವನ ಖಾಯಿಲೆಯ ಮೂಲ ಎಲ್ಲಿದೆ ಎಂದು ಗೊತ್ತಾಗುತ್ತದೆ. ಆಮೇಲೆ ಸೂಕ್ಷ್ಮವಾಗಿ ವಿಚಾರಮಾಡಿ ಯಾವ ರೀತಿ ನಡೆದುಕೊಂಡರೆ ಹುಡುಗ ಮೊದಲಿನಂತಾಗುತ್ತಾನೆ ಎನ್ನುವುದನ್ನು ನಿರ್ಧರಿಸಿ ಅದರಂತೆ ನಡೆಯುವುದು ಒಳ್ಳೆಯದು.

ಮಕ್ಕಳಲ್ಲಿ ವಕ್ರತೆ ಕೆಲವು ಸಮಯ ಆನುವಂಶಿಕವಾಗಿಯೂ ಬರಬಹುದು. ಹಾಸಿಗೆ ಒದ್ದೆಮಾಡಿಕೊಳ್ಳುವುದು, ಕ್ರೌರ್ಯ, ಅತಿ ನಾಚುಗೆ ಈ ಗುಂಪಿಗೆ

ಸೇರಿದವು. ಒಂದು ಮಗು ದೈಹಿಕವಾಗಿ ಹತ್ತು ಮಕ್ಕಳಂತೆ ಇರದಿರಬಹುದು. ಆಗ ಇತರ ಮಕ್ಕಳು ಅದನ್ನು ಗೇಲಿ ಮಾಡುವುದು, ಅಣಕಿಸುವುದು ಮಾಡಿ ಆ ಹುಡುಗ ಅಂಜುಬುರುಕ ಆಗುವಂತೆ ಮಾಡುತ್ತಾರೆ. ಆ ಮಗುವಿನ ಮನಸ್ಸಿಗೆ ಮೊದಲೇ ತನ್ನ ನ್ಯೂನತೆ ಚುಚ್ಚುತ್ತಿರುತ್ತದೆ. ಅದರಿಂದ ಅವನ ಸೂಕ್ಷ್ಮ ಮನಸ್ಸು ತನ್ನ ವಿಚಾರದಲ್ಲಿ ಇತರರ ನಡವಳಿಕೆ ಹೇಗಿರುತ್ತದೆ ಎಂತ ಪರಿಶೀಲಿಸುತ್ತಲೇ ಇರುತ್ತದೆ. ಅದರಿಂದ ಯಾವಾಗ ತಾನು ಇತರರ ಕೀಟಲೆಗೆ ಗುರಿಯಾಗುವನೋ ಆಗ ಹೆದರಿಕೆ ಉಂಟಾಗಿ ಅವನು ಎಲ್ಲರ ಸಂಸರ್ಗದಿಂದಲೂ ದೂರ ಇರಲು ಬಯಸುತ್ತಾನೆ. ನಾಚುಗೆ, ಹೇಡಿತನ ಉಂಟಾಗಿ ಆತ್ಮಭರವಸೆ ಕಳೆದುಕೊಳ್ಳುತ್ತಾನೆ ಅಥವಾ ತೀರ ರೋಷಿಸಿಹೋಗಿ ರೌಡಿಯಂತೆ ಆಡುತ್ತಾನೆ. ಇಂತಹ ಹುಡುಗನನ್ನು ಮನೆಯಲ್ಲಿ ಹಿರಿಯರು ಪ್ರೀತಿಯಿಂದ ಕಾಣಬೇಕು. ಶಾಲೆಯಲ್ಲಿ ಗೆಳೆಯರೂ ಅವನ ನ್ಯೂನತೆಯನ್ನು ಮರೆತು ತಮ್ಮೊಡನೆ ಆಟದಲ್ಲಿ ಪಾಲ್ಗೊಳ್ಳುವಂತೆ ಮಾಡಿದರೆ ಆಗ ಅವನೂ ತನ್ನ ನ್ಯೂನತೆಯನ್ನು ಮರೆತು ಉತ್ಸಾಹಶಾಲಿಯಾಗುತ್ತಾನೆ.

ಒಟ್ಟಿನಲ್ಲಿ ಒಂದು ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಬೆಳೆಯಬೇಕಾದರೆ ಹಿರಿಯರು ಈ ಕೆಲವು ಅಂಶಗಳನ್ನು ನೆನಪಿನಲ್ಲಿಡುವುದು ಒಳ್ಳೆಯದು. ಮಗು ಹಿರಿಯರ ಪ್ರೀತಿ ಮತ್ತು ಸಾಮೀಪ್ಯದಿಂದ ತೃಪ್ತಿ ಪಡೆಯಲು ಬಯಸುತ್ತದೆ. ಹಾಗೂ ತಾನೇ ಅವರ ಗಮನದ ಕೇಂದ್ರವಾಗಿರಬೇಕೆಂದೂ ಮಾನಸಿಕ ಭದ್ರತೆಗಾಗಿಯೂ ಹಾತೊರೆಯುತ್ತದೆ. ಅದರ ದೈಹಿಕ ಬೇಡಿಕೆಗಳನ್ನು ಕಾಲಕಾಲಕ್ಕೆ ತಕ್ಕಂತೆ ಪೂರೈಸಬೇಕು. ಮಗು ಬೆಳೆಯುತ್ತಿರುವಾಗ ಪ್ರತಿ ಹೆಜ್ಜೆಯಲ್ಲೂ ಸ್ವಾತಂತ್ರ್ಯ, ಭದ್ರತೆ, ಸಾಧನೆ ಈ ಭಾವನೆಗಳನ್ನು ವಿಶ್ವಾಸ, ಪ್ರೀತಿ, ಗಮನ ಹರಿಸಿ ತೋರಿಸಿಕೊಡಬೇಕು. ಚಿಕ್ಕ ವಯಸ್ಸಿನಲ್ಲಿ ಮಗುವಿನ ಬೆಳವಣಿಗೆಗೆ ಅನುಗುಣವಾಗಿ ಉತ್ತೇಜನ-ಪ್ರೋತ್ಸಾಹ ಕೊಟ್ಟು ಅದು ಪ್ರಪಂಚವನ್ನು ಪರಿಚಯಮಾಡಿಕೊಳ್ಳುವುದರಲ್ಲಿ ಸಹಕರಿಸಬೇಕು. ಅದಕ್ಕೆ ತಕ್ಕಂತಿರುವ ಆಡುವಾಗಲೇ ಕಲಿಯುವುದಕ್ಕೂ ಅನುಕೂಲವಾಗಿರುವಂತಹ ಆಟದ ಸಾಮಾನುಗಳನ್ನು ತೆಗೆದುಕೊಡುವುದು; ಅದೇ ಹುಡುಕಿಕೊಂಡು ಹೊಸತಾದುದನ್ನು ಮಾಡುವಂತೆ ಮಾಡಿ, ಏನೋ ಸಾಧಿಸಿದಂತೆ ತೋರಿಸಿ, ಪ್ರೋತ್ಸಾಹಿಸುವುದು ಮಾಡಬೇಕು. ಮಗುವಿಗೆ ಪ್ರೀತಿ, ತಂದೆ ತಾಯಿ ಅವರನ್ನು ಅರ್ಥಮಾಡಿಕೊಂಡಿರುವುದು, ಮಕ್ಕಮಕ್ಕಳಲ್ಲಿ ಭೇದಭಾವವಿಲ್ಲದೆ ಎಲ್ಲರನ್ನೂ ಸರಿಸಮಾನರಾಗಿ ಕಾಣುವುದು, ತಂದೆತಾಯಿಯರ ಮಧ್ಯೆ

ವಿರಸವಿಲ್ಲದಿರುವುದು, ಮಕ್ಕಳನ್ನೂ ಕೆಲವು ಸಲ ದೊಡ್ಡವರಂತೆ ಕಾಣುವುದು-ಇಂತಹ ವಾತಾವರಣದಲ್ಲಿ ಬೆಳೆದ ಪ್ರತಿ ಮಗುವೂ ಸರ್ವತೋಮುಖ ಬೆಳವಣಿಗೆ ಹೊಂದುವುದರಲ್ಲಿ ಸಂಶಯವಿಲ್ಲ.

ಹುಡುಗ ದೊಡ್ಡವನಾದಂತೆ ಅವನ ದೈಹಿಕ ಬೇಡಿಕೆ ಪೂರೈಕೆಗಾಗಿ ಶಾಲೆ ಮತ್ತು ಮನೆಯಲ್ಲಿ ಸರಿಯಾದ ಆಟಗಳು, ವ್ಯಾಯಾಮದ ವ್ಯವಸ್ಥೆ ಇರಬೇಕು. ಶಾಲೆಗೆ ಹೋಗುವುದು ಆದಷ್ಟು ಮಟ್ಟಿಗೂ ಸಂತಸದಾಯಕ ಸಂಗತಿ ಎನಿಸುವಂತೆ ಇರುವುದೊಳ್ಳೆಯದು. ಉಪಾಧ್ಯಾಯರೂ ಪಾಠ ಹೇಳುವಾಗ ಮಕ್ಕಳಲ್ಲಿರುವ ಗ್ರಹಣಶಕ್ತಿ ವ್ಯತ್ಯಾಸಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮಕ್ಕಳ ಮನಸ್ಸು ವಿಶಾಲವಾಗುವಂತೆ, ಅವರಲ್ಲಡಗಿರುವ ಪ್ರತಿಭೆ ಹೊರಹೊಮ್ಮುವಂತೆ ಮಾಡಿದರೆ ಅವರ ವ್ಯಕ್ತಿತ್ವ ವಿಕಾಸವಾಗುವ ಸಂಭವ ಕಡಿಮೆಯಾಗುತ್ತದೆ. ಮಕ್ಕಳಲ್ಲಿ ಸ್ನೇಹ ಬೆಳೆಸಲು ಉತ್ತೇಜಕವಾಗಿ ಸ್ಕೌಟ್‌ದಳ, ಗರ್ಲ್ ಗೈಡ್‌ಗಳನ್ನು ವ್ಯವಸ್ಥೆ ಮಾಡಬೇಕು. ಮಗು ಕೀಳುಭಾವನೆ ಬೆಳೆಸಿಕೊಳ್ಳದಂತೆ ಜಾಗ್ರತರಾಗಿರಿ. ಈ ಬೆಳವಣಿಗೆಗೆ ಹಿರಿಯರು, ಉಪಾಧ್ಯಾಯರೂ ಕೂಡಿಯೇ ಶ್ರಮಿಸುವುದು ಒಳ್ಳೆಯದು.

ದೊಡ್ಡವರಾಗುತ್ತಿರುವಾಗ (adolocent age) ಹುಡುಗಹುಡುಗಿಯರಿಗೆ ಭದ್ರತೆ, ತಕ್ಕದಾದ ವಾತಾವರಣ ಅಗತ್ಯ. ದೈಹಿಕವಾಗಿ ಆಗುವ ಬದಲಾವಣೆಗಳಿಗೆ ಅವರನ್ನು ಒಗ್ಗಿಸಬೇಕು. ಶಾಲೆಯಲ್ಲಿ ತಕ್ಕ ಆಟ, ವ್ಯಾಯಾಮಗಳೂ; ಮನೆಯಲ್ಲಿ ಅನುಗುಣವಾದ ವಿಶ್ರಾಂತಿ, ಆಹಾರ, ಈಗ ಆಗುತ್ತಿರುವ ದೈಹಿಕ ಬದಲಾವಣೆ ಮತ್ತು ಲೈಂಗಿಕ ವಿಜ್ಞಾನದ ವಿಷಯಗಳಲ್ಲಿ ತಿಳುವಳಿಕೆ ಅವರ ಮನಸ್ಸಿಗೆ ಗಾಬರಿ ಉಂಟಾಗದಂತೆ ಮಾಡಿಕೊಡಬೇಕು. ಇದು ಅವರು ದೊಡ್ಡವರಾಗಲು, ಪೂರ್ಣರಾಗಲು ಆವಶ್ಯಕ. ತನಗೆ ಸಂಬಂಧಿಸಿದ ವಿಷಯಗಳನ್ನು ಅವನೇ ನಿರ್ಣಯಿಸುವಂತೆ ಕಲಿಸುವುದು, ಅವನ-ನಿಮ್ಮ ಅಭಿಪ್ರಾಯಗಳಲ್ಲಿ ಭೇದವಿದ ರೆ ನಿರಾತಂಕವಾಗಿ ಅವನು ಅದನ್ನು ವ್ಯಕ್ತಪಡಿಸುವಂತಿರಬೇಕು-(ಏಕೆಂದರೆ ಅದರಿಂದಾಗಿ ತಾನು ನಿಮ್ಮ ಸ್ನೇಹ, ಪ್ರೀತಿ, ವಿಶ್ವಾಸಕ್ಕೆ ಎರವಾಗಬಹುದೆಂಬ ಶಂಕೆ ಅವನ ಮನಸ್ಸಿನಲ್ಲಿ ಏಳಬಹುದು). ಹುಡುಗರ ಭಾವನೆಗಳ ವಿಕಾಸಕ್ಕೆ, ವಿಚಾರಶಕ್ತಿ ಬೆಳೆಯುವುದಕ್ಕೆ ಅನುಕೂಲವಾಗುವಂತೆ ನಾಟಕಗಳು, ಚರ್ಚಾಸ್ಪರ್ಧೆ, ಸಂಗೀತ, ಸ್ಕೌಟ್ ಇವುಗಳಿಗೆ ಸೇರುವಂತೆ ಪ್ರೇರೇಪಿಸಿ. ಇದರಿಂದ ಆ ವಯಸ್ಸಿಗೆ ಸಹಜವಾದ ಮಾನಸಿಕ ಏರಿಳಿತಗಳು ಸರಿಹೋಗಿ ತಮ್ಮ ಮನಸ್ಸನ್ನು ಸರಿಯಾದ ದಾರಿಯಲ್ಲಿ

ಕೊಂಡೊಯ್ಯಲು ಅನುವಾಗುವಂತೆ ಆಗುತ್ತದೆ. ಆಗಲೇ ಜೀವನದ ಬಗ್ಗೆ ಸರಿಯಾದ ದೃಷ್ಟಿಕೋನ ಬೆಳಸಿದರೆ ಮುಂದೆ ಅವರು ನಿಜಜೀವನದಲ್ಲಿ ಒದಗಬಹುದಾದ ಕಷ್ಟನಿಷ್ಠುರಗಳು, ಇಳಿತ–ಬರತಗಳನ್ನು ನಿರ್ವಿಕಾರ ಭಾವದಿಂದ ಎದುರಿಸಲು ಬೇಕಾದ ಧೈರ್ಯ ಬೆಳೆಸಿಕೊಳ್ಳುತ್ತಾರೆ. ಹೇಡಿಯಂತೆ ಅದರಿಂದ ವಿಮುಖನಾಗಿ ದೂರ ಸರಿದು ಕುಳಿತುಕೊಳ್ಳುವುದಿಲ್ಲ. ಸಾಮಾಜಿಕ ಹೊಣೆಯರಿತು ತುಂಬುಬಾಳು ಬಾಳುತ್ತಾನೆ.

ಮನೆಯ ಪ್ರೀತಿವಿಶ್ವಾಸದ ವಾತಾವರಣ ಅವರಿಗೆ ನೆಮ್ಮದಿ ಕೊಡುತ್ತದೆ. ಸ್ವವಿಕಾಸ, ತನ್ನತನ, ತೃಪ್ತಿ ದಿನದಿನದ ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನು ಆತ್ಮಭರವಸೆಯಿಂದ ಲೀಲಾಜಾಲವಾಗಿ ಪರಿಹರಿಸಲು ಶಕ್ತರಾಗುತ್ತಾರೆ. ಈ ತರಹ ತೃಪ್ತಿ, ಅವರು, ಸುತ್ತಮುತ್ತಲ ವಾತಾವರಣದ ಪ್ರಭಾವಕ್ಕೆ ಸಿಕ್ಕು ಎಡವುವ ಸಂಭವವನ್ನು ಕಡಿಮೆ ಮಾಡುತ್ತದೆ.

ಎಂ. ಎನ್. ಸುಮಿತ್ರಾ



ಬಡಿವಾರ ಬಡಿಯುವವರೆಲ್ಲರೂ ಒಂದನ್ನು ನೆನಪಿಡಲಿ! ಜಂಭದ ಕೃತಕ ಕೋಡು ಮುರಿದ ಮೇಲೆ ಪ್ರತಿ ಬಡಿವಾರಿಯೂ ಕತ್ತೆಯಾಗಿಯೇ ಕಾಣಬೇಕು.

—ಷೇಕ್ಸ್‌ಪಿಯರ್

ಪ್ರಪಂಚದಲ್ಲಿ ಬಲು ಬೇಗ ಬೇಗ ಬೆಳೆದವರ ಬಗ್ಗೆ ಜನರು ಬಹುವಾಗಿ ಭಾವಿಸುತ್ತಾರೆ. ಆದರೆ ಕಸ, ಕಡ್ಡಿ, ಗರಿಗಳಷ್ಟು ರಭಸದಿಂದ ಬೇರೆ ಏನೂ ಬೆಳೆಯುವುದಿಲ್ಲ.

—ಹೇರ್

ಬರ್ಲಿಟ್ಜ್ ಭಾಷಾಶಾಲೆಗಳ ಕೊಡುಗೆ

ಜೇಮ್ಸ್ ಮಾರ್ಕಮ್ ಎಂಬಾತ ೧೯೭೬ ರಲ್ಲಿ ನಡೆದ ಲೆಬನಾನ್ ಅಂತಯುದ್ಧದ ಬಗೆಗೆ ದಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಗೆ ವರದಿ ನೀಡುತ್ತಿದ್ದಾಗ ಕೆಲವು ಬಂದೂಕುಧಾರಿ ಮುಸ್ಲಿಮರು ಅವನ ಕಾರನ್ನು ದಾರಿಯಲ್ಲಿ ಅಡ್ಡಗಟ್ಟಿದರು. ಮಾರ್ಕಮ್ ತನ್ನ ಬಗ್ಗೆ ಫ್ರೆಂಚ್ ಮತ್ತು ಇಂಗ್ಲಿಷಿನಲ್ಲಿ ವಿವರಣೆ ನೀಡಲು ಯತ್ನಿಸಿದಾಗ ಬಂದೂಕುಧಾರಿ ವ್ಯಕ್ತಿಗಳು ಸಿಡುಕಿನಿಂದ 'ಅಹ್ಕಿ ಅರಾಬಿ! ಅಹ್ಕಿ ಅರಾಬಿ!' (ಅರಾಬಿಕ್ ಮಾತನಾಡು!) ಎಂದು ಗರ್ಜಿಸಿ ಬಲವಂತದಿಂದ ಅವನನ್ನು ಕಾರಿನಿಂದ ಎಳೆದುಹಾಕಿ ಕೊಲ್ಲಲು ಅಣಿಯಾದರು. ಅದೃಷ್ಟವಶಾತ್ ಮಾರ್ಕಮ್ ನ್ಯೂಯಾರ್ಕಿನಲ್ಲಿಯ ಬರ್ಲಿಟ್ಜ್ ಶಾಲೆಯಲ್ಲಿ ಅರಾಬಿಕ್ ಭಾಷೆಯನ್ನು ಎರಡು ವಾರಗಳಲ್ಲಿ ತೀವ್ರ ಅಭ್ಯಾಸಮಾಡಿ ಕಲಿತಿದ್ದ. ಪ್ರಾಣಭಯದಿಂದ ಹೆದರಿದ್ದರೂ ಆ ಸನ್ನಿವೇಶದಲ್ಲಿ ಅವನು ತಕ್ಕಮಟ್ಟಿನ ಅರಾಬಿಕ್ ಮಾತನಾಡಿದುದರಿಂದ ಅವನ ಜೀವ ಉಳಿಯಿತು.

ಇಟಲಿಯ ಚಿತ್ರನಟ ಗಿಯಾನ್‌ಕಾರ್ಲೊ ಗಿಯಾನ್ನಿನಿ ಚಲನಚಿತ್ರ ಒಂದನ್ನು ಜನಪ್ರಿಯಗೊಳಿಸಲು ೧೯೭೮ ರಲ್ಲಿ ಅಮೆರಿಕೆಗೆ ಬಂದಾಗ ಅವನಿಗೆ ಇಂಗ್ಲಿಷ್ ಭಾಷೆ ಸರಿಯಾಗಿ ಬರುತ್ತಿರಲಿಲ್ಲ. ದೂರದರ್ಶನದಲ್ಲಿ ಕಾಣಿಸಿಕೊಳ್ಳಲು ದುಭಾಷಿಯೊಬ್ಬನ ಸಹಾಯ ಅವನಿಗೆ ಬೇಕಾಯಿತು. ಈ ಸಂಕಷ್ಟದಿಂದ ಪಾರಾಗಲು ಅವನು ಇಂಗ್ಲಿಷ್ ಭಾಷೆಯನ್ನು ಶೀಘ್ರವಾಗಿ ಕಲಿಯಲು ನಿರ್ಧರಿಸಿದ. ನ್ಯೂಯಾರ್ಕಿನಲ್ಲಿಯ ಬರ್ಲಿಟ್ಜ್ ಶಾಲೆಯಲ್ಲಿ ಮೂರು ವಾರಗಳ ಶಿಕ್ಷಣ ಪಡೆದ. ಅನಂತರ ಅಮೆರಿಕಾದ್ಯಂತ ಸಂಚರಿಸಿದ. ತನ್ನ ದೂರದರ್ಶನ ಕಾರ್ಯಕ್ರಮಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಲೀಲಾಜಾಲವಾಗಿ ಬಳಸಿದ.

ಬರ್ಲಿಟ್ಜ್ ಭಾಷಾ ಶಾಲೆಗೆ ನೂರಆರು ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಮೂವತ್ತು ಮಿಲಿಯನ್‌ಗಿಂತ ಅಧಿಕ ಮಂದಿ ಬೇರೆಬೇರೆ ವಿದೇಶಿ ಭಾಷೆಗಳನ್ನು ಕಲಿತಿದ್ದಾರೆ. ಸಂಪರ್ಕ ನಡೆಸಲು ಸಮರ್ಥರಾಗಿದ್ದಾರೆ. ಇಂದು ಇಪ್ಪತ್ತೊಂದು ದೇಶಗಳಲ್ಲಿ ಇನ್ನೂರಕ್ಕೂ ಹೆಚ್ಚು ಬರ್ಲಿಟ್ಜ್ ಭಾಷಾಶಾಲೆಗಳಿವೆ! ಇವು ಒಂದು ವರ್ಷದಲ್ಲಿ ಸುಮಾರು ೧,೫೦,೦೦೦ ವಿದ್ಯಾರ್ಥಿಗಳಿಗೆ

೧೯೮೪ ಜೂನ್ ತಿಂಗಳಿನ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿ ಪ್ರಕಟವಾದ ತಾಮಸ್ ಫ್ಲೆಮಿಂಗ್ ಅವರ 'ದಿ ಗಿಫ್ಟ್ ಆಫ್ ಟಂಗ್ಸ್' ಲೇಖನದ ಭಾವಾನುವಾದ.

ಭಾಷಾಶಿಕ್ಷಣ ನೀಡುತ್ತಿವೆ. ಈ ಶಿಕ್ಷಣವು ಪ್ರಪಂಚದ ಬಹುತೇಕ ಭಾಷೆಗಳಲ್ಲಿ–ಅಮ್ಹಾರಿಕ್ (ಇಥಿಯೋಪಿಯನ್) ಭಾಷೆಯಿಂದ ಮೊದಲ್ಗೊಂಡು ಸ್ವಹೀಲಿ ಭಾಷೆಯನ್ನು ಒಳಗೊಂಡಂತೆ—ನಡೆಯುತ್ತಿದೆ. ಭಾರತದಲ್ಲಿ ಮಾತ್ರ ಬರ್ಲಿಟ್ಜ್ ಶಾಲೆಗಳಿಲ್ಲ. ಆದರೆ ಹೊರ ದೇಶಗಳಲ್ಲಿರುವ ಶಾಲೆಗಳು ಹಿಂದೀ ಮತ್ತಿತರ ಭಾರತೀಯ ಭಾಷೆಗಳ ಬಗ್ಗೆ ಶಿಕ್ಷಣ ನೀಡುತ್ತಿವೆ! ಕಳೆದ ಮೂರು ವರ್ಷಗಳಲ್ಲಿ ಟೋಕಿಯೊ, ಅವಾಯ್, ಬ್ಯೂನಸ್ ಏರ್ಸ್ ಮತ್ತು ಪ್ರಿನ್ಸ್‌ಟನ್ ನ್ಯೂಜೆರ್ಸಿ ಮುಂತಾದ ಸ್ಥಳಗಳಲ್ಲಿ ಹದಿನೈದು ಹೊಸ ಶಾಲೆಗಳನ್ನು ಆರಂಭಿಸಲಾಗಿದೆ. ಬರ್ಲಿಟ್ಜ್ ಶಾಲೆಯ ಅಧ್ಯಕ್ಷರಾದ ಎಲಿಯೋ ಬೊಚಿಯೋ ಮೂರು ಭಾಷೆಗಳಲ್ಲಿ ಪರಿಣತಿ ಪಡೆದವರು. ಇಟಲಿ ಪ್ರಜೆಯಾದ ಅವರು ಹೇಳುತ್ತಾರೆ: "ಒಬ್ಬ ವ್ಯಕ್ತಿ ನ್ಯೂಯಾರ್ಕ್ ಶಾಲೆಯಲ್ಲಿ ಸ್ಪಾನಿಷ್ ಭಾಷೆಯ ಅರವತ್ತು ಪಾಠಗಳನ್ನು ಕಲಿತು ಅನಂತರ ಮೆಕ್ಸಿಕೋ ನಗರಕ್ಕೆ ಹೋಗಿ ಯಾವುದೇ ಗೊಂದಲವಿಲ್ಲದೆ, ಪುನರಾವೃತ್ತಿಯಿಲ್ಲದೆ ಅರವತ್ತೊಂದನೆಯ ಪಾಠವನ್ನು ಅಲ್ಲಿಯ ಬರ್ಲಿಟ್ಜ್ ಶಾಲೆಯಲ್ಲಿ ಪ್ರಾರಂಭಿಸಬಹುದು." ಇದು ಬರ್ಲಿಟ್ಜ್ ಸಂಸ್ಥೆ ಒದಗಿಸಿರುವ ಸೌಲಭ್ಯ.

೧೮೭೮ ರಲ್ಲಿ ಜರ್ಮನ್ ಭಾಷಾವಿಜ್ಞಾನಿ ಮ್ಯಾಕ್ಸಿಮಿಲಿಯನ್ ಬರ್ಲಿಟ್ಜ್ ರೋಡ್ ದ್ವೀಪದಲ್ಲಿಯ ಭಾಷಾಶಾಲೆಯಲ್ಲಿ ಫ್ರೆಂಚ್ ಭಾಷೆಯನ್ನು ಕಲಿಸಲು ನಿಕೋಲಸ್ ಜೋಲಿ ಎಂಬಾತನನ್ನು ನೇಮಕ ಮಾಡಿದ. ಅಂದಿನಿಂದ ಬರ್ಲಿಟ್ಜ್ ಶಾಲೆಯ ಇತಿಹಾಸ ಆರಂಭವಾಯಿತು. ಜೋಲಿಯು ಈ ಶಾಲೆಗೆ ಬರುವ ಮುನ್ನ ನ್ಯೂಯಾರ್ಕ್ ನಗರದಲ್ಲಿ ಎತ್ತುಯಂತ್ರದ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಹೀಗಾಗಿ ಸ್ಥಳೀಯ ಭಾಷೆಯಾದ ಇಂಗ್ಲಿಷಿನ ಪ್ರಭಾವ ಅವನಿಗೆ ಆಗಿತ್ತು. ಆದುದರಿಂದ ತರಗತಿಯಲ್ಲಿ ಅವನು ಪಾಠ ಮಾಡುವಾಗ ಇಂಗ್ಲಿಷಿನ ಅನೇಕ ಪದಗಳು ಅಪ್ರಯತ್ನಪೂರ್ವಕವಾಗಿ ಮಾತಾಡುತ್ತಿದ್ದ. ಈ ಅಂಶವನ್ನು ಬರ್ಲಿಟ್ಜ್ ಪತ್ತೆಹಚ್ಚಿದ. ಬದಲಿ ವ್ಯವಸ್ಥೆಯನ್ನು ರೂಪಿಸಲು ಯತ್ನಿಸಿದ. ಈ ಪ್ರಯತ್ನದಲ್ಲಿರುವಾಗಲೇ ಬರ್ಲಿಟ್ಜನ ಆರೋಗ್ಯ ಕೆಟ್ಟಿತು. ಆದುದರಿಂದ ಬದಲಿ ವ್ಯವಸ್ಥೆಯನ್ನು ರೂಪಿಸಲು ತಕ್ಷಣ ಅವನಿಗೆ ಸಾಧ್ಯವಾಗಲಿಲ್ಲ. ಆಗ ಅವನು ಜೋಲಿಯನ್ನು ಹತ್ತಿರ ಕರೆದು ಪ್ರಾಯೋಗಿಕ ದೃಷ್ಟಿಯಿಂದ ಪಾಠ ಮಾಡಲು ಹೇಳಿದ. ಕೆಲವು ವಾರಗಳ ಅನಂತರ ಅನಾರೋಗ್ಯದಿಂದ ಚೇತರಿಸಿಕೊಂಡ ಬರ್ಲಿಟ್ಜ್‌ನು ಜೋಲಿಯ ಅಧ್ಯಾಪನ ವಿಧಾನದ ಪರಿಣಾಮವನ್ನು ಪರಿಶೀಲಿಸಲು ತರಗತಿಗೆ ಬಂದ. ಆದರೆ ಅವನು ಕಂಡದ್ದೇನು? ತರಗತಿಯಲ್ಲಿ ವಿದ್ಯಾರ್ಥಿ

ಗಳು ಫ್ರೆಂಚ್ ಭಾಷೆಯಲ್ಲಿ ಸರಾಗವಾಗಿ ಹರಟುತ್ತಿದ್ದರು. ಬರ್ಲಿಟ್ಜನ ಸಾಂಪ್ರದಾಯಿಕ ಶಿಕ್ಷಣ ವಿಧಾನದಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿದ್ದುದ ಕ್ಕಿಂತಲೂ ಶೀಘ್ರವಾಗಿ ಫ್ರೆಂಚ್ ಭಾಷೆಯನ್ನು ಕಲಿತಿದ್ದರು. ಮಕ್ಕಳು ತಮ್ಮ ಮಾತೃಭಾಷೆಯನ್ನು ಹಿರಿಯರ ಅನುಕರಣೆಯಿಂದ ಕಲಿಯುವಂತೆಯೇ ಜೋಲಿಯ ವಿದ್ಯಾರ್ಥಿಗಳು ಫ್ರೆಂಚ್ ಭಾಷೆಯ ಅಕ್ಷರ, ಪದ, ಪದಪುಂಜ, ವಾಕ್ಯ ಮುಂತಾದವನ್ನು ಕಲಿತರು.

ವಿದ್ಯಾರ್ಥಿಗಳ ಕಲಿಕೆಯಿಂದಾಗಿ ಬರ್ಲಿಟ್ಜ್ ಹರ್ಷಗೊಂಡ. ಅನಂತರ ತಾನು ಕಂಡುಕೊಂಡ ಶಿಕ್ಷಣ ವಿಧಾನವನ್ನು ಕಾರ್ಯರೂಪಕ್ಕೆ ತರಲು ಶ್ರಮ ವಹಿಸಿದ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿ, ಅನೇಕ ಭಾಷಾಶಾಲೆ ಗಳನ್ನು ತೆರೆದು, ಹಲವಾರು ಉಪನ್ಯಾಸಗಳನ್ನು ಕೊಡುವುದರಲ್ಲೇ ತನ್ನ ಜೀವಿತಾವಧಿಯನ್ನು ಕಳೆದ. ತನ್ನ ಈ ಕಾರ್ಯಕ್ಕಾಗಿ ಫ್ರಾನ್ಸಿನ ಲೀಜನ್ ಆಫ್ ಆನರ್ ಪ್ರಶಸ್ತಿಯನ್ನೂ ಸ್ಪೇನಿನ ದೊರೆ ಮತ್ತು ಮೊರಾಕೊ ಸುಲ್ತಾನ ನಿಂದ ಕಾಣಿಕೆಗಳನ್ನೂ ಪಡೆದ. ಜರ್ಮನಿಯ ಕೈಸರ್ ವಿಲ್‌ಹೆಲ್ಮ್, ರಷ್ಯದ ಟ್ಸಾರ್ ನಿಕೊಲಸ್ (ಎರಡನೆಯ) ಅವನ ಶಿಷ್ಯರಾದರು. ಅಂತೆಯೇ ಸೇಂಟ್ ಲೂಯಿ ವರ್ಲ್ಡ್‌ಸ್ ಫೇರ್‌ನ (೧೯೦೪) ಪ್ರತಿನಿಧಿಗಳಾದ ಮೊರೊ ಎಂಬ ಪ್ರಾಚೀನ ಬುಡಕಟ್ಟು ಜನ ಬರ್ಲಿಟ್ಜನ ವಿದ್ಯಾರ್ಥಿಗಳಾಗಿ ಬಂದರು. ಅವರು ಅತಿಥಿಗಳೊಂದಿಗೆ ಸಂಭಾಷಿಸುವ ಮಟ್ಟಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸಿದ. ಇದಕ್ಕಾಗಿ ಪುರಾಣಕತೆಗಳನ್ನೂ ಆಖ್ಯಾಯಿಕೆಗಳನ್ನೂ ಬಳಸಿಕೊಂಡ. ಎಲ್ಲಕ್ಕಿಂತ ಮುಖ್ಯವಾಗಿ 'ನಾವು ಅನಾಗರಿಕರು' ಎಂಬ ಕಹಿಭಾವನೆ ಅವರಲ್ಲಿ ಅಳಿಸಿ ಹೋಗುವಂತೆ ಮಾಡುವುದರಲ್ಲಿ ಯಶಸ್ವಿಯಾದ.

ಬರ್ಲಿಟ್ಜನ ಶಾಲೆಗಳಲ್ಲಿ ಅವನ ಶೈಕ್ಷಣಿಕ ವಿಧಾನಗಳು, ಬೋಧನಾ ಕ್ರಮ ಗಳು ಇಂದಿನ ದಿನಗಳಲ್ಲೂ ಹೆಚ್ಚು ಪರಿವರ್ತನೆಗೆ ಒಳಗಾಗಿಲ್ಲ. ಅರ್ಥಕೋಶ ಗಳು, ವ್ಯಾಕರಣ ಪುಸ್ತಕಗಳು ಬರ್ಲಿಟ್ಜನ ಬೋಧನಾಕ್ರಮದಿಂದ ದೂರ ಇವೆ. ಈ ಶಾಲೆಯ ವಿದ್ಯಾರ್ಥಿ ತಾನು ಕಲಿಯಬೇಕೆಂದಿರುವ ಭಾಷೆಯಲ್ಲಿ ತನ್ನ ಮೊದಲನೆಯ ಪಾಠವನ್ನು ಕೇಳುತ್ತಾನೆ ಮತ್ತು ಮಾತನಾಡು ತ್ತಾನೆ.

ಸ್ಪಾನಿಷ್ ಭಾಷೆಯನ್ನು ಕಲಿಯಲು ಬರ್ಲಿಟ್ಜ್ ಶಾಲೆಗೆ ಹೋದ. ವಿದ್ಯಾರ್ಥಿಯ ಮೊದಲ ತರಗತಿ ಆರಂಭವಾಗುವ ಮುಂಚೆ ಅಲ್ಲಿಯ ಅಧ್ಯಾಪಕ ವಿದ್ಯಾರ್ಥಿಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾನೆ. ಅನಂತರ

ಮೇಲಿನ ಮೇಲೆ ಅಚ್ಚುಕಟ್ಟಾಗಿ ರಟ್ಟು ಕಟ್ಟಿರುವ ಚಿತ್ರದ ಪುಸ್ತಕವೊಂದನ್ನು ತೆರೆದಿಡುತ್ತಾನೆ. ಮೇಜಿನ ಮೇಲೆ ಪುಸ್ತಕವೇ ಅಲ್ಲದೆ ಮ್ಯಾಗಜೀನ್, ಟೆಲಿಫೋನ್, ದಿನಪತ್ರಿಕೆ, ಬೆಂಕಿಪೆಟ್ಟಿಗೆ, ಸಿಗಾರ್, ಸಿಗರೇಟು ಮುಂತಾದುವು ಇರುತ್ತವೆ. ಅಧ್ಯಾಪಕ ಆ ಪ್ರತಿಯೊಂದು ವಸ್ತುವನ್ನೂ ತೋರಿಸುತ್ತಾ 'ಎಸ್ತ ಎಸ್ ಅನ ಮೀಸ (ಇದು ಒಂದು ಮೇಜು)' ಎನ್ನುತ್ತಾನೆ. ಅನಂತರ ವಿದ್ಯಾರ್ಥಿಗೆ ಸಿಗರೇಟಿನ ಕಡೆಗೆ ಕೈ ತೋರಿಸಿ 'ಎಸ್ ಎಸ್ತೊ ಅನ್ ಫೋಸ್ ಫೋರೋ? [ಇದು ಬೆಂಕಿಪೆಟ್ಟಿಗೆಯೇ?]' ಎಂದು ಪ್ರಶ್ನೆ ಕೇಳಿ ಅದಕ್ಕೆ ತಾನೇ ತಲೆ ಅಲ್ಲಾಡಿಸುತ್ತಾ 'ನೋ, ನೋ, ಎಸ್ ಅನ್ ಫೋಸ್‌ಫೋರೋ, ಎಸ್ ಅನ್ ಸಿಗರ್ರಿಲ್ಲೋ [ಇಲ್ಲ, ಇಲ್ಲ, ಇದು ಬೆಂಕಿಪೆಟ್ಟಿಗೆ ಅಲ್ಲ, ಇದು ಸಿಗರೇಟು]' ಎನ್ನುತ್ತಾನೆ. ಹೀಗೆಯೇ ಮುಂದುವರೆಸಿ, ವಿದ್ಯಾರ್ಥಿಯ ಕಡೆಗೆ ನೋಡುತ್ತಾ 'ಉಸ್ಟೆಡ್ [ನೀನು ಹೇಳು]' ಎಂದಾಗ ವಿದ್ಯಾರ್ಥಿಯು ಅಧ್ಯಾಪಕ ಹೇಳಿ ಕೊಟ್ಟಿದ್ದನ್ನು ಕ್ರಮವಾಗಿ ಹೇಳಬೇಕು. ಹೇಳುವುದರಲ್ಲಿ ತಪ್ಪಾದರೆ ಅಧ್ಯಾಪಕ ತಿದ್ದುತ್ತಾನೆ. ಸರಿಯಾಗಿ ಹೇಳಿದರೆ ಶ್ಲಾಘಿಸುತ್ತಾನೆ. ಈ ಬಗೆಯಲ್ಲಿ ಒಂದು ಗಂಟೆಯ ಬಳಿಕ ವಿದ್ಯಾರ್ಥಿಗೆ ಆಶ್ಚರ್ಯವಾಗಿ ತಾನು ಸ್ಪಾನಿಷ್ ಮಾತನಾಡುತ್ತಿದ್ದೇನೆ ಎಂಬ ಭಾವನೆ ಬಲವಾಗಿ ಬೇರೂರುತ್ತದೆ. ಈ ಬಗೆಯ ಹತ್ತು ವಾರಗಳ ಶಿಕ್ಷಣದ ತರುವಾಯ ಅವನು ಸುಮಾರು ಐನೂರು ಪದಗಳನ್ನು ಕಲಿತಿರುತ್ತಾನೆ. ಈ ಶಿಕ್ಷಣ ಅವನ ಪ್ರವಾಸ ಕಾಲದಲ್ಲಿ ಭಾಷಾಕೊರತೆಯನ್ನು ನೀಗಿಸಲು ಸಹಾಯಕವಾಗುತ್ತದೆ.

೧೯೨೧ರಲ್ಲಿ ಶಾಲೆಯ ಸಂಸ್ಥಾಪಕ ಬರ್ಲಿಟ್ಜ್ ನಿಧನನಾದ. ಅನಂತರ ಶಾಲೆಗೆ ಹೊಸದಾಗಿ ನೇಮಕಗೊಂಡ ನಿರ್ದೇಶಕರು ಶಾಲೆಯನ್ನು ಮತ್ತಷ್ಟು ಉತ್ತಮಪಡಿಸಲು ಯತ್ನಿಸಿದರು. ಪ್ರಪಂಚದ ಎರಡನೆಯ ಮಹಾಯುದ್ಧ ಆರಂಭವಾಗುವ ಮುಂಚೆ, ಸಾಂಸ್ಕೃತಿಕ ಕಾರಣಗಳಿಂದಲೂ ಪ್ರವಾಸದ ಉದ್ದೇಶದಿಂದಲೂ ಹಲವಾರು ಮಂದಿ ಬೇರೆಬೇರೆ ಭಾಷೆಗಳನ್ನು ಕಲಿತರು. ಆದರೆ ಯುದ್ಧದ ತರುವಾಯ ಹೊಸ ಜನ ಜನಾಂಗ, ವ್ಯಾಪಾರಿ ದೃಷ್ಟಿಯಿಂದ, ಪ್ರವಾಸ ದೃಷ್ಟಿಯಿಂದ ಮತ್ತು ಅತಿ ಕಡಿಮೆ ಅವಧಿಯಲ್ಲಿ ಹೊಸ ಭಾಷೆಯೊಂದನ್ನು ಕಲಿಯಬಹುದೆಂಬ ಭಾವನೆಯಿಂದ ಕಲಿಯತೊಡಗಿದರು. ೧೯೫೩-೭೦ರ ತನಕ ಬರ್ಲಿಟ್ಜ್ ಶಾಲೆಯ ಅಧ್ಯಕ್ಷನಾಗಿದ್ದ ರಾಬರ್ಟ್ ಸ್ಟೀಫನ್ ಡೇರಿ ಎಂಬಾತ ಶಾಲೆಯಲ್ಲಿ ಆಧುನಿಕ ವಿಧಾನಗಳನ್ನು [ಮೂಲ ವಿಧಾನಕ್ಕೆ ಲೋಪಬಾರದಂತೆ] ಅಳವಡಿಸಿದರು. ವಿದ್ಯಾರ್ಥಿಗಳಿಗೆ ಆಧುನಿಕ

ಉಪಕರಣಗಳ ಸೌಲಭ್ಯ ನೀಡಲಾಯಿತು. ಪರಿಣಾಮವಾಗಿ ಶಾಲೆಯ ಗುಣಮಟ್ಟ ಉತ್ತಮವಾಯಿತು.

ವಿದ್ಯಾರ್ಥಿಗಳ ಉದ್ದೇಶ ಮತ್ತು ಸೌಲಭ್ಯಕ್ಕೆ ಅನುಗುಣವಾಗಿ, ಅತಿ ಕಡಿಮೆ ಅವಧಿಯಲ್ಲಿ ಯಶಸ್ವೀ ಭಾಷಾಶಿಕ್ಷಣ ನೀಡುವುದು ಹೇಗೆ? ಎಂಬ ವಿಷಯವನ್ನು ಕುರಿತು ಸ್ಟೀಫನ್ ಡೇರಿ ಅವರು ಮಾಂಟ್ರೀಲ್‌ನ ಮ್ಯಾಕ್‌ಗಿಲ್ ವಿಶ್ವವಿದ್ಯಾಲಯದಲ್ಲಿ ಒಂದು ಪ್ರಾಯೋಗವನ್ನು ನಡೆಸಿದರು. ಬರ್ಲಿಟ್ಜ್ ಶಾಲೆಯ ಅಧ್ಯಾಪಕ ತಂಡ ಆ ವಿಶ್ವವಿದ್ಯಾಲಯದಲ್ಲಿ ಪಾಠ ಹೇಳಲು ತೊಡಗಿದಾಗ, ಕಲಿಯಲು ಕುಳಿತಿದ್ದ ಹಲವಾರು ವಿದ್ಯಾರ್ಥಿಗಳ ಪೈಕಿ ಇಬ್ಬರು ಮಾತ್ರ ನಲವತ್ತೈದು ಗಂಟೆಗಳ ಕಾಲ ಶ್ರದ್ಧೆಯಿಂದ ಕುಳಿತಿದ್ದರು. ಈ ಪ್ರಾಯೋಗದಿಂದ ವಿದ್ಯಾರ್ಥಿಗೆ ಕಲಿಯುವ ಬಗೆಗಿನ ಆಸಕ್ತಿ ೧೦-೧೨ ಗಂಟೆಗಳ ಅನಂತರ ಇಳಿಮುಖವಾಗುತ್ತದೆ ಎಂಬ ವಿಚಾರ ಸ್ಪಷ್ಟವಾಯಿತು. ಇದಕ್ಕನುಗುಣವಾಗಿ ರೂಪಿತವಾದ ವಿಧಾನಕ್ಕೆ 'ಟೋಟಲ್ ಇಮ್ಮರ್ಷನ್' ಎಂದು ಕರೆಯಲಾಯಿತು [೧೯೬೪]. ಈ ವಿಧಾನದ ಪ್ರಕಾರ ವಿದ್ಯಾರ್ಥಿ ವಾರದಲ್ಲಿ ಐದು ದಿನ, ದಿನವೊಂದಕ್ಕೆ ಒಂಬತ್ತು ಗಂಟೆ ಪಾಠ—ಕಲಿಯಬೇಕು. ಅವನಿಗೆ ಅಭ್ಯಾಸ ಮಾಡಿಸಲು ಮೂವರು ಅಧ್ಯಾಪಕರ ತಂಡ ಇರುತ್ತದೆ. ಪಾಠದ ಅವಧಿ ೪೫ ನಿಮಿಷ. ಇದರಲ್ಲಿ ೫ ನಿಮಿಷ ವಿರಾಮ ಮಾತ್ರ. ಇದರ ಜೊತೆಗೆ ವಿದ್ಯಾರ್ಥಿ ದಿನ ಒಂದರಲ್ಲಿ ೩ ರಿಂದ ೪ ಗಂಟೆಗಳ ಕಾಲವನ್ನು ಹೋಂ ವರ್ಕ್ ಮಾಡಲು ಮೀಸಲಿಡಬೇಕು, ಈ ಕಲಿಕೆಯ ಕ್ರಮವನ್ನೇ 'ದಿ ಬರ್ಲಿಟ್ಜ್ ಬ್ಲಿಟ್ಜ್' ಎಂದು ಕರೆದಿದ್ದಾರೆ. ನ್ಯೂಯಾರ್ಕಿನ ಬರ್ಲಿಟ್ಜ್ ಶಾಲೆಯ ನಿರ್ದೇಶಕಿ ಮೇಡಂ ಆಗ್ನೇಸ್ ಜೀನ್.

ಬರ್ಲಿಟ್ಜ್ ಶಾಲೆಗಳ ಪ್ರಸಿದ್ಧತೆಗೆ ಮತ್ತೊಂದು ಕಾರಣವಿದು: ಅಲ್ಲಿಯ ಶಾಲಾವರ್ಗ, ಅಭ್ಯರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ನೀಡಲು ತೊಡಗಿದುದು. ಇಟಲಿ ದೇಶದ ಪಾಕಶಾಲೆಗಳನ್ನು ಪರಿಶೀಲಿಸುವ ಉದ್ದೇಶದಿಂದ ಆ ದೇಶಕ್ಕೆ ಪ್ರವಾಸ ಕೈಗೆಂಡಿದ್ದ ಸಂಯುಕ್ತ ಸಂಸ್ಥಾನಗಳ ಆಹಾರ ತಜ್ಞರ ತಂಡಕ್ಕೆ ಬರ್ಲಿಟ್ಜ್ ಶಾಲಾವರ್ಗ ಇಟಲಿ ಭಾಷೆಯನ್ನು (ವಿಶೇಷವಾಗಿ ಆಹಾರ ಪದಾರ್ಥಗಳಿಗೆ ಸಂಬಂಧಿಸಿದಂತೆ) ಕಲಿಸಿತು. ತುರ್ಕಿ ದೇಶದಲ್ಲಿ ಮಾದಕ ವಸ್ತುಗಳ ಮಾರಾಟದ ಬಗೆಗೆ ಪರಿಶೀಲನೆ ಕೈಗೊಂಡ ಮೂವರು ಅಮೆರಿಕನ್ ಪತ್ರಿಕೋದ್ಯಮಿಗಳಿಗೆ ತುರ್ಕಿ ಭಾಷೆಯನ್ನು ಹೇಳಿಕೊಡಲಾಯಿತು. ಪತ್ರಿಕೋದ್ಯಮಿಗಳು ಸಾದರ ಪಡಿಸಿದ ಉತ್ತಮ ವರದಿಗಾಗಿ ಪುಲಿಟ್ಜರ್

ಬಹುಮಾನ, ಸಂಯುಕ್ತ ಸಂಸ್ಥಾನಗಳ ಪತ್ರಿಕೋದ್ಯಮ ಪ್ರಧಾನ ಪ್ರಶಸ್ತಿ ದೊರೆಯಿತು. 'ತುರ್ಕಿ ಭಾಷೆಯನ್ನು ತಮಗೆ ಕಲಿಸಿ, ಆ ಮೂಲಕ ಪ್ರಶಸ್ತಿ ದೊರಕಲು ಕಾರಣರಾದ ಬರ್ಲಿಟ್ಜ್ ಅಧ್ಯಾಪಕರಿಗೆ ನಮ್ಮ ಕೃತಜ್ಞತೆಗಳು' ಎಂದು ವರದಿಗಾರರು ಹೇಳಿದ್ದಾರೆ.

ಒಮ್ಮೆ ವಿಮಾನ ಚಾಲಕನೊಬ್ಬ ತನ್ನ ಸ್ಪಾನಿಷ್ ತರಗತಿಯ ಮೊದಲನೆಯ ದಿನ 'ನಾವೀಗ ೬೬೦೦ ಮೀಟರ್ ಎತ್ತರದಲ್ಲಿ ಹಾರಾಡುತ್ತಿದ್ದೇವೆ' ಎಂಬ ವಾಕ್ಯವನ್ನು ಹೇಳಿಸಿಕೊಳ್ಳಲು ಅಧ್ಯಾಪಕನನ್ನು ಒತ್ತಾಯಿಸಿದ. ವಾಕ್ಯವನ್ನು ಹೇಳಿಕೊಟ್ಟ ಅನಂತರ ಅಧ್ಯಾಪಕ ಸಹಜವಾಗಿಯೇ 'ಆದರೆ ನೀವು ೬೬೦೦ ಮೀಟರ್ ಎತ್ತರದಲ್ಲಿ ಹಾರದಿದ್ದರೆ ಕ್ಯಾಪ್ಟನ್....?' ಎಂದು ಪ್ರಶ್ನಿಸಿದ ಮತ್ತು ಸ್ಪಾನಿಷ್ ಭಾಷೆಯಲ್ಲಿನ ವ್ಯತ್ಯಾಸಗಳನ್ನು ತಿಳಿಸಿಕೊಟ್ಟ. ವಿಮಾನ ಚಾಲಕ ಅವನ ಮಾತಿಗೆ ಹಲ್ಲುಕಿರಿದು ಈ ವ್ಯತ್ಯಾಸವನ್ನು ಯಾರು ಬಲ್ಲರು?' ಎಂದ.

ಬರ್ಲಿಟ್ಜ್ ಶಾಲೆ ಪ್ರಪಂಚದ ಯಾವುದೇ ಆಡು ಭಾಷೆಯನ್ನು ಕಲಿಸಿಕೊಡಲು ಸಿದ್ಧವಿದೆ. ಯುಕ್ತ ಹಣವನ್ನು ಕೊಟ್ಟರೆ ವಿದ್ಯಾರ್ಥಿ ಎಲ್ಲಿಬೇಕಾದರೂ ಪಾಠ ಹೇಳಿಸಿಕೊಳ್ಳಬಹುದು. ಒಮ್ಮೆ ನೌಕಾಪಡೆಯ ಸಹಾಯಕ ಕಾರ್ಯದರ್ಶಿಯೊಬ್ಬನಿಗೆ ಅವನ ಸಿಬ್ಬಂದಿ ಕಛೇರಿಯಲ್ಲಿಯೇ ಫ್ರೆಂಚ್ ಭಾಷೆಯನ್ನು ಹೇಳಿಕೊಡಲಾಯಿತು. ಡೊಮಿನಿಕನ್ ರಿಪಬ್ಲಿಕ್‌ನ ನಿರಂಕುಶಪ್ರಭು ರೇಫಲ್ ತುಜಿಲ್ಲೋ ಎಂಬಾತನ ಹತ್ತು ವರ್ಷದ ಮಗನಿಗೆ ಪಾಠ ಹೇಳಿಕೊಡಲು ಬರ್ಲಿಟ್ಜ್ ಅಧ್ಯಾಪಕ ನೇಮಕಗೊಂಡ. ಹುಡುಗನಿಗೆ ಅಧ್ಯಾಪಕ ಹಾನಿ ಮಾಡಲು ಯತ್ನಿಸಿಯಾನು ಎಂಬ ಕೆಟ್ಟ ಆಲೋಚನೆ ಹೊಂದಿದ್ದರಿಂದ, ತರಬೇತಿ ಪಡೆದ ಶಸ್ತ್ರಧಾರಿಗಳು ಬಾಲಕನ ಬಂಗಾವಲಿಗೆ ಇದ್ದರು. ಇಂತಹ ಪರಿಸ್ಥಿತಿಯಲ್ಲಿಯೂ ಬರ್ಲಿಟ್ಜ್ ಅಧ್ಯಾಪಕರು ಪಾಠಮಾಡಿ ಸಫಲರಾಗಿದ್ದಾರೆ.

ಬರ್ಲಿಟ್ಜ್ ಶಾಲೆಯಲ್ಲಿ ಕಲಿತು ಪ್ರಸಿದ್ಧರಾದ ವ್ಯಕ್ತಿಗಳ ಪೈಕಿ ಅಂತಾರಾಷ್ಟ್ರೀಯ ಮನ್ನಣೆ ಪಡೆದವರೂ ಇದ್ದಾರೆ. ಆ ಶಾಲೆಯ ಅಧ್ಯಾಪಕರಿಂದ ಸ್ಪಾನಿಷ್ ಭಾಷೆ ಕಲಿತ ಡ್ಯೂಕ್ ಆಫ್ ವಿಂಡ್ಸರ್ ಎಂಬಾತ, ಕ್ಯಾಸ್ಟಿಲಿಯನ್ ಕವಿತೆಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲ ವಿದ್ವಾಂಸನಾದ. ಜಾನ್ ಲೆನ್ನನ್ ಎಂಬುವನು ಜಪಾನಿ ಭಾಷೆ ಕಲಿತರೆ ಅವನ ಹೆಂಡತಿ ಯೋಕೊಒನೊ ಫ್ರೆಂಚ್ ಕಲಿತಳು. ಬ್ರೆಜಿಲ್ ದೇಶದ

ಪ್ರಸಿದ್ಧ ಫುಟ್‌ಬಾಲ್ ಆಟಗಾರ ಪೀಲೆ, ಕಾಸ್ಮಾಸ್ ತಂಡದ ಪರ ಆಡಲು ನ್ಯೂಯಾರ್ಕಿಗೆ ಹೋದಾಗ ಇಂಗ್ಲಿಷ್ ಭಾಷೆ ಕಲಿತ.

ಬರ್ಲಿಟ್ಜ್ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಯಲು ಬರುವವರ ಸಂಖ್ಯೆಯೇ ಹೆಚ್ಚು. ಇದರಿಂದಾಗಿ ಇಂಗ್ಲಿಷ್ ಭಾಷೆ ಅಂತಾರಾಷ್ಟ್ರೀಯ ಭಾಷೆಯಾಗಿ ಸ್ಥಾನ ಪಡೆದುಕೊಳ್ಳುವ ಹಾದಿಯಲ್ಲಿದೆ [ಈಗಾಗಲೇ ಸ್ಥಾನ ಪಡೆದಿದೆ ಎನ್ನುವವರೂ ಉಂಟು] ಎಂಬ ವಿಚಾರ ನಮಗೆ ಸ್ಪಷ್ಟವಾಗಿದೆ ಎಂಬುದಾಗಿ ಹೆಮ್ಮೆಯಿಂದ ಹೇಳುತ್ತಾರೆ ಬೊಚಿಟೋ. ಯಂತ್ರೋಪಕರಣಗಳನ್ನು ಜೋಡಿಸಿ ಅಣಿಗೊಳಿಸಲು ಸೌದಿ ಅರೇಬಿಯ ದೇಶಕ್ಕೆ ಜರ್ಮನಿಯ ಎಂಜಿನಿಯರ್ ಹೋದರೆ, ಅಲ್ಲಿಯ ಅರಬ್ ವ್ಯಕ್ತಿಗೆ ಯಂತ್ರವನ್ನು ಚಾಲೂ ಮಾಡುವ ಬಗ್ಗೆ ತರಬೇತಿಯನ್ನು ನೀಡಬೇಕಾದಾಗ, ಅವರಿಬ್ಬರೂ ಇಂಗ್ಲಿಷ್ ಭಾಷೆಯನ್ನು ಬಳಸುವ ಸಾಧ್ಯತೆ ಹೆಚ್ಚು ಎಂಬುದಾಗಿ ತಿಳಿದುಬಂದಿದೆ. ಶಾಲೆಯ ಆಗ್ನೇಸ್ ಜೀನ್ ಎಂಬ ಅಧ್ಯಾಪಕಿ 'ಬರ್ಲಿಟ್ಜ್ ಒಂದು ಸಂಸ್ಥೆ (ಮಿಷನ್)' ಎಂಬುದಾಗಿ ಅಭಿಪ್ರಾಯಪಟ್ಟಿದ್ದಾಳೆ. ಒಂದೇ ವೇಳೆಯಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಯುತ್ತಿದ್ದ ಜಪಾನಿ ಯುವವಾಣಿಜ್ಯೋದ್ಯಮಿಯೊಬ್ಬ ಮತ್ತು ದಕ್ಷಿಣ ಅಮೆರಿಕದ ಯುವ ವಿದ್ಯಾರ್ಥಿಯೊಬ್ಬನನ್ನು ಜೀನ್ ನೆನಪಿಗೆ ತಂದುಕೊಳ್ಳುತ್ತಾಳೆ. "ಮೊದಲನೆಯ ಸಲ ಅವರಿಬ್ಬರೂ ಭಾಷೆಯನ್ನು ಅರಿಯದೆ ಪರಸ್ಪರ ತಲೆ ಅಲ್ಲಾಡಿಸುತ್ತಿದ್ದರು. ನಾಲ್ಕೈದು ದಿನಗಳಲ್ಲಿ ಅವರು ಹಲೋ ಹೇಳತೊಡಗಿದರು. ತರಗತಿಯ ಐದು ನಿಮಿಷದ ವಿರಾಮ ಕಾಲದಲ್ಲಿ ಕೆಲವು ಅಸ್ಪಷ್ಟ ವಾಕ್ಯಗಳನ್ನು ಮಾತನಾಡುತ್ತಿದ್ದರು. ಅನಂತರ ತಾವಿಬ್ಬರೂ ನ್ಯೂಯಾರ್ಕ್ ನಗರದಲ್ಲಿ ಒಂಟಿಯಾಗಿರುವ ವಿಚಾರ ತಿಳಿದುಕೊಂಡು ಒಟ್ಟಿಗೆ ಉಪಾಹಾರ ತೆಗೆದುಕೊಳ್ಳಲು ನಿರ್ಧರಿಸಿದರು. ಕಲಿಕೆಯ ಅವಧಿ ಮುಗಿಯುವ ಮುಂಚೆಯೇ ಆತ್ಮೀಯ ಸ್ನೇಹಿತರಾದರು. ದೂರ ದೇಶಗಳಲ್ಲಿ ವಾಸಿಸುತ್ತಿದ್ದರೂ ಇಂಗ್ಲಿಷ್ ಭಾಷೆಯಲ್ಲಿ ಪತ್ರ ವ್ಯವಹಾರ ನಡೆಸುವುದರ ಮೂಲಕ ಈಗಲೂ ಅವರಿಬ್ಬರೂ ಪರಸ್ಪರ ಸಂಪರ್ಕ ಪಡೆದಿದ್ದಾರೆ." ಈ ರೀತಿಯಲ್ಲಿ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಿಗೆ ಸೇರಿದ ಆ ವ್ಯಕ್ತಿಗಳಿಗೆ ಇಂಗ್ಲಿಷ್ ಭಾಷೆ ಸೇತುವೆಯಾಗಿ ಪರಿಣಮಿಸಿದೆ. ಅಂತೆಯೇ ಆ ಶಾಲೆಗಳಲ್ಲಿ ಬೇರೆ ಬೇರೆ ಭಾಷೆಗಳನ್ನು ಕಲಿತು ತಮ್ಮ ಉದ್ದೇಶ ಸಾರ್ಥಕಪಡಿಸಿಕೊಂಡ ಮಹನೀಯರು ಅನೇಕರಿದ್ದಾರೆ. ಮಾನವ ಕೋಟಿಗೆ ಬರ್ಲಿಟ್ಜ್ ಶಾಲೆಗಳ ಕೊಡುಗೆಯೆಂದರೆ ಅದೇ.

ಆರ್. ರಾಮಕೃಷ್ಣ

ಕೃತಕಚರ್ಮ: ಪರಿಕಲ್ಪನೆಯಿಂದ ಸೃಷ್ಟಿಗೆ

೧೯೮೨ರ ನವೆಂಬರ್ ತಿಂಗಳು. ಬಾಸ್ಟನ್ ನಗರದ ಒಂದು ಕಾರ್ಖಾನೆಯಲ್ಲಿ ಪ್ಯಾಟ್ರಿಕ್ ಓ ಬ್ರಿಯೆನ್ ಕಾರ್ಯಮಗ್ನನಾಗಿದ್ದ. ಮಧ್ಯಾಹ್ನಕ್ಕೆ ಸ್ವಲ್ಪ ಮುಂಚೆ ಅವನಿಗೆ ಒಂದು ಮೀಟರ್ ದೂರದಲ್ಲಿ ದಿಢೀರನೆ ಜ್ವಾಲೆಯೊಂದು ಕಾಣಿಸಿಕೊಂಡಿತು. ಜ್ವಾಲೆ ೨೫ ವರ್ಷದ ಕೆಂಪು ತಲೆಯ ಆ ದೃಢ ಮನುಷ್ಯನ ದೇಹದ ೪/೫ ಭಾಗ ಚರ್ಮವನ್ನು ಸುಟ್ಟು ಬಿಟ್ಟಿತು.

ನಾಲ್ಕು ವರ್ಷಗಳ ಹಿಂದೆಯಾದರೆ ವೈದ್ಯರಿಗೆ ಓಬ್ರಿಯೆನ್‌ನನ್ನು ಉಳಿಸುವ ಭರವಸೆ ಇರುತ್ತಿರಲಿಲ್ಲ. ಇಂದಿಗೂ ಹಠಾತ್ ಮರಣಕ್ಕೆ ಸುಟ್ಟಗಾಯಗಳೇ ಪ್ರಮುಖ ಕಾರಣವಾಗಿವೆ. ಸುಟ್ಟಮಾಂಸ ಮಾರಕ ಬ್ಯಾಕ್ಟೀರಿಯಾಗಳು ಒಳ ನುಗ್ಗಲು ಸಹಾಯವಾಗುತ್ತದೆ. ಆಗ ದೇಹದ ಉಪಾಪಚಯದರ (ಮೆಟಾಬಾಲಿಕ್‌ರೇಟ್) ಹೆಚ್ಚಾಗುತ್ತದೆ. ಅದರ ಜೀವರಾಸಾಯನಿಕ ರಕ್ಷಕಗಳು ಸೂಕ್ಷ್ಮಜೀವಿಗಳ ವಿರುದ್ಧ ಹೋರಾಡುತ್ತವೆ. ಜೀವರಸಗಳೆಲ್ಲ ಸುಟ್ಟ ಭಾಗಗಳ ಕಡೆಗೆ ಹರಿಯುತ್ತವೆ. ದೇಹ ನಿರ್ಜಲವಾಗುತ್ತದೆ.

ಅಗ್ನಿ ಪ್ರಮಾದಕ್ಕೆ ಒಳಗಾದವನ ದೇಹದಲ್ಲಿ ಸುಡದೆ ಇದ್ದ ಭಾಗದಿಂದ ಚರ್ಮತೆಗೆದು ಕಸಿ ಮಾಡುವುದರಿಂದ ಅಥವಾ ಮಾನವನ ಕಳೇಬರ ಇಲ್ಲವೆ ಹಂದಿಯ ಚರ್ಮದಿಂದ ಸುಟ್ಟಭಾಗವನ್ನು ಸಂಗೋಳಿಸಬಹುದು. ಆದಾನ ಚರ್ಮ ಎರಡುವಾರಗಳಿಗಿಂತ ಹೆಚ್ಚು ಕಾಲ ಹಾಗೆಯೇ ಇರಬೇಕಾದರೆ, ರೋಗಿಯ ದೇಹ ಆ ಚರ್ಮವನ್ನು ತಿರಸ್ಕರಿಸದಂತೆ ಔಷಧಿಗಳನ್ನು ಕೊಡಬೇಕಾಗುತ್ತದೆ. ಏಕೆಂದರೆ ಬೇರೆ ಚರ್ಮಗಳು ಮಾನವನ ಸಹಜರಕ್ಷಕ ಪದ್ಧತಿಯನ್ನು ನಿಗ್ರಹಿಸುತ್ತವೆ. ಔಷಧಿಗಳನ್ನು ತೆಗೆದುಕೊಂಡರೆ ಅವು ರೋಗದ ಸೋಂಕನ್ನು ಮತ್ತು ಸಾವನ್ನು ತಡೆಯುತ್ತವೆ.

ಓಬ್ರಿಯನ್ ಆಸ್ಪತ್ರೆ ಸೇರಿದಾಗ ವೈದ್ಯರು ಕೃತಕಚರ್ಮ ಎಂಬ ಉತ್ತೇಜಕರವಾದ ಹೊಸ ವಸ್ತುವಿನಿಂದ ತಯಾರಾಗಿದ್ದರು. ೧೯೭೯ ರಿಂದೀಚೆಗೆ ಇದನ್ನು ಅಮೇರಿಕದ ಸುಮಾರು ೫೦ ರೋಗಿಗಳ ಮೇಲೆ ಪ್ರಯೋಗಿಸಿದ್ದರಿಂದ, ಇದು ಅನೇಕ ಜೀವಗಳನ್ನು ಉಳಿಸಲು ಸಹಕಾರಿಯಾಗಿತ್ತು.

ಕೃತಕಚರ್ಮ ಅಮೆರಿಕದ ಇಬ್ಬರು ವಿಜ್ಞಾನಿಗಳ ಛಲ ಮತ್ತು ದೀಕ್ಷೆಯ ಫಲ. ಈ ಸಹಸೃಷ್ಟಿಕರ್ತರಲ್ಲಿ ಮೊದಲಿಗರು ಡಾ|| ಜಾನ್‌ಬರ್ಕ್. ಇವರು

ಮೂಲ: ಲಾರೆನ್ಸ್ ಚೆರ್ರಿ

ಅನುವಾದ: ಎ. ಎಂ. ದೇವಿ

ಬಾಸ್ಟನ್‌ನ ಮಸ್ಸಾಚುಸೆಟ್ಸ್ ಜನರಲ್ ಆಸ್ಪತ್ರೆಯಲ್ಲಿ ಗಾಯಗಳ ಸೇವೆಯ ಮುಖ್ಯಸ್ಥ ಮತ್ತು ಮಕ್ಕಳ ಚಿಕಿತ್ಸೆಗೆ ಹೆಸರುವಾಸಿಯಾದ ಶ್ರೈನರ್ಸ್‌ಬರ್ನ್ ಸಂಸ್ಥೆಯ ಸಲಹೆಗಾರ. ಈತ ಜಗತ್ತಿನ ಪ್ರಸಿದ್ಧ ದಗ್ಧಚರ್ಮತಜ್ಞ. ಈ ಶತಮಾನದ ಐದನೆಯ ದಶಕದ ಕೊನೆಯ ವರ್ಷಗಳಲ್ಲಿ ತನ್ನ ರೋಗಿಗಳಿಗೆ ಚರ್ಮಕಸಿ ಮಾಡುವಲ್ಲಿ ಸುಧಾರಣೆ ತರಲು ಇವರು ಸಂಶೋಧನೆ ನಡೆಸಿದರು.

ಸೀಮೋಲ್ಲಂಘನ: ಸುಟ್ಟಗಾಯಕ್ಕೆ ಮಾಡುವ ವೈದ್ಯದ ಮೂಲಭೂತ ತತ್ತ್ವವೆಂದರೆ ಶಾಖದಿಂದ ನಾಶವಾದ ಚರ್ಮವನ್ನು ದೇಹದಿಂದ ಬೇರ್ಪಡಿಸುವುದು. ಮೇಲ್ಭಾಗದ ಅಂಗಾಂಶ, ಮಾಂಸಖಂಡ ಮತ್ತು ಕೊಬ್ಬನ್ನು ಆ ಕೂಡಲೇ ಮುಚ್ಚುವುದು. "ಹಂದಿಚರ್ಮ ಅಥವಾ ಕಳೇಬರದ ಚರ್ಮದ ಕಸಿ ಎದುರೊಡ್ಡುವ ಸಮಸ್ಯೆಗಳಿಲ್ಲದೆ, ಚರ್ಮದಂತೆ ಕಾರ್ಯ ನಿರ್ವಹಿಸುವ ಕೃತಕ ವಸ್ತುವನ್ನು ಸೃಷ್ಟಿಸಲೇಬೇಕು ಎಂಬುದನ್ನು ಸಿದ್ಧಾಂತದ ಮಟ್ಟದಲ್ಲಾದರೂ ಅರಿತಿದ್ದೇವೆ" ಎನ್ನುತ್ತಾರೆ ಡಾ|| ಬರ್ಕ್.

ಬಾಳಿಕೆಬರುವ ನಕಲಿ ಚರ್ಮ ಸೃಷ್ಟಿಸಲು ಬರ್ಕ್ ಮತ್ತು ಆತನ ತಂಡದವರು ಮಾಂಸದ ರಾಸಾಯನಿಕ ರಚನೆಯನ್ನು ಎಷ್ಟೋ ವರ್ಷ ವಿಶ್ಲೇಷಿಸಿದರು. ಆದರೆ ಅವರು ಸೋಲಿನ ಮೇಲೆ ಸೋಲು ಎದುರಿಸಬೇಕಾಯಿತು.

ಬರ್ಕ್‌ನ ಕೆಲಸದ ಬಗೆಗೆ ಮಸ್ಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎಂ.ಐ.ಟಿ) ಮುಖ್ಯ ಭೌತ-ರಸಾಯನ ತಜ್ಞನಾದ ಐಯೊನ್ನಿಸ್ ಯನ್ನಾಸ್ ಎಂಬಾತನಿಗೆ ೧೯೬೯ ಡಿಸೆಂಬರಿನಲ್ಲಿ ಮಾಹಿತಿ ದೊರೆಯಿತು. ಯನ್ನಾಸ್ ಅನೇಕ ವರ್ಷಗಳಿಂದ ಚರ್ಮದಲ್ಲಿ ಮುಖ್ಯವಾಗಿರುವ ಕೊಲ್ಲಾಜೆನ್ ಎಂಬ ಪ್ರೋಟೀನಿನ ವಿಶೇಷ ಅಧ್ಯಯನ ನಡೆಸಿದ್ದ. (ಮೃದ್ವಸ್ಥಿ ಹಾಗೂ ಅಸ್ಥಿಗಳಲ್ಲಿ ಈ ಕೊಲ್ಲಾಜೆನ್ ಇರುತ್ತದೆ.) ಬರ್ಕ್‌ಗೆ ಆತ ಫೋನ್ ಮಾಡಿ ತಾವಿಬ್ಬರೂ ಭೇಟಿಯಾಗಬೇಕೆಂದು ಸೂಚಿಸಿದ.

ಇಬ್ಬರೂ ಆ ಕೂಡಲೇ ಸಹಕರಿಸಿ ಕೆಲಸ ಮಾಡಿದರು. ಆದರೆ ಅತಿಮುಖ್ಯ ಸೈದ್ಧಾಂತಿಕ ವಿಜಯಕ್ಕಾಗಿ ಆರು ವರ್ಷ ಕಾಯಬೇಕಾಯಿತು. ಕೊಲ್ಲಾಜೆನ್ ಎಳೆಗಳು ಚರ್ಮದಲ್ಲಿ ಜಿ.ಎ.ಜಿ (ಗ್ಲೈಕೋಸ ಅಮಿನೊ ಗ್ಲೈಕಾನ್) ಎಂಬ ಸಂಕೀರ್ಣ ರಚನೆಯ ಜೊತೆಯಲ್ಲಿ ಇರುವುದನ್ನು ಅವರು ಗಮನಿಸಿದರು. ಸುಲಭವಾಗಿ ಸಿಗುವ ದನದ ಚರ್ಮವನ್ನು ಜಿಎಜಿಯೊಡನೆ ಸೇರಿಸಿ, ಇದರಿಂದ ಸಿದ್ಧವಾಗುವ ಕೊಲ್ಲಾಜೆನ್-ಜಿಎಜಿ ಸಂಕೀರ್ಣವನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸಿದರು. ಆಗ ಆರೋಗ್ಯಕರ ಚರ್ಮಕಣಗಳ ಬೆಳವಣಿಗೆಗೆ ನೆರವಾಗುವ,

ಸುಲಭವಾಗಿ ಹೊಂದಿಕೊಳ್ಳುವ ಸೂಕ್ಷ್ಮರಂಧ್ರಗಳಿಂದ ಕೂಡಿದ ಪದಾರ್ಥ ತಯಾರಾಯಿತು.

ತರುವಾಯ ಅವರು ಸ್ಪರ್ಶಜ್ಞಾನವಿಲ್ಲದಂತೆ ಮಾಡಿದ ಗಿನಿಹಂದಿಗಳ ಚರ್ಮ ಭಾಗವನ್ನು ತೆಗೆದು ಆ ಗಾಯಗಳಿಗೆ ತಮ್ಮ ಹೊಸ ವಸ್ತುವನ್ನು ಸಂಯೋಜಿಸಿದರು. ಹೀಗೆ ಸಂಯೋಜನೆಯಾಗಿ, ಗಾಯವಾಸಿಯಾದಮೇಲೆ ಆ ಪ್ರಾಣಿ ಹೇಗೆ ಗುಣಮುಖವಾಗುತ್ತದೆಂಬುದನ್ನು ಅತ್ಯುತ್ಸಾಹದಿಂದ ವಾರಗಟ್ಟಲೆ ಕಾದು ನೋಡಿದರು. ಪ್ರತಿದಿನ ಅವರಿಬ್ಬರು ಅಥವಾ ಒಬ್ಬರು ಹಂದಿಗಳನ್ನು ಪರೀಕ್ಷಿಸಿ ಕೃತಕಚರ್ಮ ಸೊಗಸಾಗಿಯೇ ಇದ್ದುದನ್ನು ಕಂಡು ತೃಪ್ತಿಯಿಂದ ಉಸಿರು ಬಿಡುತ್ತಿದ್ದರು. ಆ ಪ್ರಾಣಿಯ ರಕ್ಷಕ ವ್ಯವಸ್ಥೆಗಾಗಿ ಇತರ ಔಷಧಿಗಳನ್ನು ಬಳಸುವ ಅಗತ್ಯವಿರಲಿಲ್ಲ. ಇವರಿಂದ ಸಂಯೋಜಿತವಾದ ಸುಟ್ಟಗಾಯಗಳು ತಾವಾಗಿಯೇ ಗುಣವಾದವು; ಕೃತಕಚರ್ಮ ಯಶಸ್ವಿಯಾಯಿತು.

"ಮುಂದೆ ನಡೆಸಿದ ಹಲವು ಪ್ರಯೋಗಗಳಿಂದ ಇದನ್ನು ಮಾನವನಿಗೂ ಸುರಕ್ಷಿತವಾಗಿ ಪ್ರಯೋಗಿಸಬಹುದೆಂದು ನನಗೆ ತಿಳಿಯಿತು" ಎನ್ನುತ್ತಾರೆ ಬರ್ಕ್.

ಷಾರ್ಕ್ ಮೀನಿನ ಮೃದ್ವಸ್ಥಿಯಿಂದ ತೆಗೆದ ಜೀವಜಯನ್ನು ಹಸುವಿನ ಚರ್ಮದಿಂದ ತೆಗೆದ ಕೊಲ್ಲಾಜೆನ್ ದ್ರವಕ್ಕೆ ಸೇರಿಸಿ, ಘನೀಕರಿಸಿ, ಒಣಗಿಸಿ, ಇನ್ನೂ ಕೆಲವು ವಿಧಾನಗಳಿಂದ ಹಗುರಗೊಳಿಸಿ, ಸೂಕ್ಷ್ಮರಂಧ್ರದ ಬಿಳಿ ವಸ್ತುವಾಗಿ ಮಾಡಿದರು. ಗಟ್ಟಿಗೊಳಿಸಿ, ಶುದ್ಧಗೊಳಿಸಿ ಸಿಲಿಕಾನ್ ಅಂಟು ಪದಾರ್ಥಗಳನ್ನು ಸೇರಿಸಿ ಮಾನವನ ಹೊರಚರ್ಮದಂತೆ ಬಾಗುವ ಪ್ಲಾಸ್ಟಿಕ್ ಪದಾರ್ಥವನ್ನು ತಯಾರಿಸಲಾಯಿತು.

೧೯೭೯ ಸೆಪ್ಟೆಂಬರಿನಲ್ಲಿ ಕಾರಿನ ಅಪಘಾತಕ್ಕೆ ಸಿಕ್ಕಿ ದೇಹದ ಶೇಕಡಾ ೬೦ ಭಾಗ ಸುಟ್ಟುಕೊಂಡ ಎಗ್ನೆಸ್ ಲಾಲರ್ ಎಂಬಾಕೆಯನ್ನು ಮಸಾಚುಸೆಟ್ಸ್ ಆಸ್ಪತ್ರೆಗೆ ಸೇರಿಸಿದಾಗ ನಿರ್ಣಾಯಕ ಪ್ರಯೋಗವನ್ನು ಮಾಡಬೇಕಾಯಿತು. ಆಕೆ ಜೀವಾಪಾಯ ಸ್ಥಿತಿಯಲ್ಲಿರುವುದನ್ನು ಕಂಡು, ಆಕೆಯ ಬಂಧುಗಳ ಒಪ್ಪಿಗೆಯಿಂದ ಡಾ॥ ಬರ್ಕ್ ಮತ್ತು ಆತನ ತಂಡದವರು ಕೃತಕಚರ್ಮವನ್ನು ಉಪಯೋಗಿಸಲು ನಿಶ್ಚಯಿಸಿದರು. ಮೊದಲು ಅವರು ಸುಟ್ಟಮಾಂಸವನ್ನು ಅಳವಡಿಸಲು ನಿಶ್ಚಯಿಸಿದರು. ಮೊದಲು ಅವರು ಸುಟ್ಟಮಾಂಸವನ್ನು ಕೊಯ್ದರು. ಬಳಿಕ ತೇವಭರಿತ ಪಟ್ಟಿಗಳೋಪಾದಿ ನುಣುಪಾಗಿಯೂ ಸ್ಥಿತಿಸ್ಥಾಪಕ ಕಾಗದದ ಹಾಳೆಯಂತೆ ಕಾಣುತ್ತಿದ್ದ ಕೃತಕಚರ್ಮವನ್ನು ಗಾಯಗಳ ಮೇಲೆ ಹೊದಿಸಿದರು. ಸ್ವಾಭಾವಿಕ ಚರ್ಮದಂತೆ ಕೃತಕಚರ್ಮದ ಪೊರೆ ದೇಹವನ್ನು ಬ್ಯಾಕ್ಟೀರಿಯಾಗಳಿಂದ ಪ್ರಶಸ್ತವಾಗಿ ದೂರವಿರಿಸಿತು. ಕೆಲವೇ ದಿನಗಳಲ್ಲಿ

ಹೊಸಜೀವಕೋಶಗಳು ಒಳಭಾಗದಲ್ಲಿ ಬೆಳೆಯಲಾರಂಭಿಸಿದುವು.

ಮೂರು ವಾರಗಳ ಬಳಿಕ ಆ ತಂಡ ಸಣ್ಣ ಚಿಮುಟದಿಂದ ಅನಗತ್ಯವಾದ ಮೇಲಿನ ಪದರಗಳನ್ನು ತೆಗೆಯಿತು. ಭಯಂಕರವಾದ ಸುಟ್ಟಗಾಯಗಳಿದ್ದ ಜಾಗದಲ್ಲಿ ಹೊಳೆಯುವ ಕೆಂಪು ಮತ್ತು ಹಳದಿ ಅಂಗಾಂಶಗಳು, ರಕ್ತನಾಳಗಳಿಂದ ಕೂಡಿದ ಚರ್ಮದ ಒಳಪದರವಿತ್ತು.

ಹೊರಚರ್ಮದ ಪದರವನ್ನು ಪುನಃ ಅಳವಡಿಸಲು ಈ ತಂಡದವರು ಆಕೆಯ ಸುಡದೆ ಇದ್ದ ಚರ್ಮದ ಚೂರನ್ನು ತೆಗೆದುಕೊಂಡು ಸುಟ್ಟ ಭಾಗದಲ್ಲಿ ಹರಡಿದರು. ಕೃತಕ ಚರ್ಮದ ಜೊತೆ ಆಕೆಯದೇ ಜೀವಕೋಶಗಳನ್ನು ಸೇರಿಸಿದಾಗ ಅವು ಆಕೆ ಬದುಕಿರುವ ತನಕವೂ ಇರುವುವೆಂದು ಭಾವಿಸಲಾಯಿತು. ಮೂರು ವಾರಗಳಲ್ಲೇ ಹೊಸಚರ್ಮದ ಬಣ್ಣ ಲಾಲರ್‌ಳ ಸುಡದೆ ಇದ್ದ ಚರ್ಮದಂತೆಯೇ ಕಾಣುತ್ತಿತ್ತು.

ಸುಟ್ಟ ಸ್ಥಳಗಳನ್ನು ಒಮ್ಮೆ ಮೃದುವಾದ ಕೈಯಿಂದ ಪರೀಕ್ಷಿಸಿದಾಗ ಕಳೆದು ಹೋದ ಚರ್ಮದ ಗುಣಗಳನ್ನೇ ಈ ಹೊಸ ಚರ್ಮವೂ ಪಡೆದಿತ್ತು ಎಂಬುದು ತಂಡದ ಸದಸ್ಯರಿಗೆ ತೃಪ್ತಿ ನೀಡಿತು. ನರದ ತುದಿಗಳು ಪುನಃ ಚಿಗುರುತ್ತಿದ್ದುವು. ಇನ್ನು ಲಾಲರ್ ಶಾಖ, ಚಳಿ ಮತ್ತು ಎಲ್ಲ ಸ್ಪರ್ಶಗಳನ್ನು ಅನುಭವಿಸುತ್ತಾಳೆ. ಕೃತಕಚರ್ಮ ಮಾನವನ ವಿಷಯದಲ್ಲೂ ಜಯಗಳಿಸಿತು.

೧೯೮೦ ನವೆಂಬರಿನಲ್ಲಿ ಪ್ಯಾಟ್ರಿಕ್ ಓಬ್ರಿಯೆನ್ನನನ್ನು ಶಸ್ತ್ರಚಿಕಿತ್ಸೆ ಕೋಣೆಗೆ ಒಯ್ಯುವ ವೇಳೆಗಾಗಲೇ ೩೦ಕ್ಕಿಂತ ಹೆಚ್ಚು ರೋಗಿಗಳಿಗೆ ಕೃತಕಚರ್ಮದ ಚಿಕಿತ್ಸೆ ಮಾಡಲಾಗಿತ್ತು. ಬರ್ಕ್‌ನ ತಂಡ ೨೪ ಗಂಟೆಗಳಲ್ಲಿ ೬ರು ಶಸ್ತ್ರಚಿಕಿತ್ಸೆ ಮಾಡಿ ಸುಮಾರು ಮುಕ್ಕಾಲು ಚದರ ಮೀಟರ್‌ನಷ್ಟು ಕೃತಕಚರ್ಮವನ್ನು ಓಬ್ರಿಯೆನ್ನನ ಕುತ್ತಿಗೆ, ಎದೆ, ಹೊಟ್ಟೆ ಮತ್ತು ತೋಳುಗಳಿಗೆ ಅಳವಡಿಸಿತು. ಆ ಯುವಕನ ಕಣ್ಣು ಮತ್ತು ಮೂಗು ಮಾತ್ರ ಕಾಣುತ್ತಿದ್ದು ಉಳಿದ ದೇಹದ ಭಾಗ ಪೂರ್ತಿ ಬ್ಯಾಂಡೇಜುಗಳಿಂದ ಮುಚ್ಚಲ್ಪಟ್ಟಿತ್ತು. ಅನೇಕ ವಾರಗಳ ಕಾಲ ಆತ ಸುಪ್ತ ಸ್ಥಿತಿಯಲ್ಲಿದ್ದ.

ಹೊಸ ವರ್ಷದ ಎರಡು ದಿನಗಳ ಅನಂತರ ರೋಗಿಗೆ ಆಹಾರ ನೀಡಲು ಅಳವಡಿಸಿದ್ದ ನಾಳವನ್ನು ನರ್ಸೊಬ್ಬಳು ಪರೀಕ್ಷಿಸಿದಾಗ ಅತಿ ಸುಪ್ತ ಸ್ಥಿತಿಯಲ್ಲಿ ಇದ್ದ ಆತ ಸ್ವಲ್ಪ ಅಲ್ಲಾಡಿದ. "ಏನಾಯಿತು?" "ನಾನು ಎಲ್ಲಿದ್ದೇನೆ?" ಎಂದು ಪಿಸುಗುಟ್ಟಿದ. ಬೆಂಕಿಯ ಅಪಘಾತವಾದ ಮೇಲೆ ಆತನಿಗೆ ಪ್ರಜ್ಞೆಯೇ ಇರಲಿಲ್ಲ. ಆತ ಎದುರಿಸಿದ ಅಗ್ನಿಪರೀಕ್ಷೆಯ ಬಗೆಗೆ ತಿಳಿಸಿ ಕೃತಕಚರ್ಮ ಅಳವಡಿಸಿದ್ದ

ಸ್ಥಳಗಳನ್ನು ತೋರಿಸಿದರು. ಅವು ಗುಣಮುಖವಾಗುತ್ತಾ ಗುಲಾಬಿ ಬಣ್ಣದಿಂದ, ಹೊಳಪಿನಿಂದ ಕೂಡಿದ್ದುವು.

ಓಬ್ರಿಯೆನ್ ಪಡೆದುಕೊಂಡಿರುವ ಕೀಲುಗಳ ಸಂಪೂರ್ಣ ಉಪಯೋಗ ಪಡೆಯಲು ಇನ್ನೂ ಕೆಲವು ತಿಂಗಳುಗಳ ಕಾಲ ಚಿಕಿತ್ಸೆ ಬೇಕಾಗಿತ್ತು. ಆದರೆ ೧೯೮೩ರ ಮಧ್ಯಕಾಲಕ್ಕಾಗಲೇ ಆತ ತನ್ನ ಸಂಪೂರ್ಣ ಚಟುವಟಿಕೆ ಆರಂಭಿಸಿದ. ಆತನ ಸುಂದರ ರೂಪವನ್ನು ಬಹುಮಟ್ಟಿಗೆ ಕಾಪಾಡಲಾಯಿತು.

ಕ್ರಮವಾದ ಪ್ರಗತಿ: ಕೃತಕಚರ್ಮದ ಸುದ್ದಿ ಹರಡಿದಂತೆ, ಎಲ್ಲಾ ಭೂಖಂಡಗಳಿಗೆ ಸೇರಿದ ಸುಟ್ಟರೋಗಿಗಳ ಕುಟುಂಬದವರಿಂದ ಈ ಇಬ್ಬರು ವಿಜ್ಞಾನಿಗಳಿಗೆ ಹೇರಳವಾಗಿ ಪತ್ರಗಳು ಬರಲಾರಂಭಿಸಿದುವು. ದುರದೃಷ್ಟವಶಾತ್ ಯನ್ನಾಸನ ಎಮ್.ಐ.ಟಿ. ಪ್ರಯೋಗಾಲಯದಲ್ಲಿ ಈ ವಸ್ತುವನ್ನು ತಯಾರಿಸಲು ಹತ್ತು ಜನ ಕೆಲಸಗಾರರು ಮಾತ್ರ ಇದ್ದಾರೆ. ಆದ್ದರಿಂದ ಈಗ ಕೆಲವೇ ಡಜನ್ ರೋಗಿಗಳಿಗೆ ಸಾಕಾಗುವಷ್ಟು ಮಾತ್ರ ಕೃತಕಚರ್ಮವಿದೆ.

ಈ ಕೆಲಸ ಪ್ರಗತಿಯ ಹಾದಿಯಲ್ಲಿದೆ. ಕನ್ಸಾಸ್ ಸಿಟಿಯಲ್ಲಿರುವ ಒಂದು ಔಷಧಿ ಕಂಪೆನಿ ಈ ವಸ್ತುವನ್ನು ತಯಾರಿಸಿ, ಮಾರಲು ಪರವಾನಗಿ ನೀಡಲಾಯಿತು. ಈಗ ಪ್ರಗತಿಯಲ್ಲಿರುವ ಔಷಧೀಯ ಅಧ್ಯಯನಗಳ ಫಲಿತಾಂಶವನ್ನು ಗಮನದಲ್ಲಿಟ್ಟುಕೊಂಡು (ಇದು ೧೯೮೫ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ), ಅಮೆರಿಕೆಯ ಆಹಾರ ಮತ್ತು ಔಷಧೀಯ ಆಡಳಿತ (ಎಫ್.ಡಿ.ಎ) ಬಲು ಬೇಗನೆ ಸಮ್ಮತಿ ನೀಡುತ್ತದೆಂದು ಭಾವಿಸಲಾಗಿದೆ.

ಈ ನಡುವೆ ಬರ್ಕ್ ಮತ್ತು ಯನ್ನಾಸ್ ಕೃತಕಚರ್ಮದಲ್ಲಿ ಇನ್ನೂ ಸುಧಾರಣೆ ತರುವ ಕೆಲಸದಲ್ಲಿ ತೊಡಗಿದ್ದಾರೆ. ಇನ್ನು ಒಂದು ವರ್ಷದೊಳಗೆ ಅದನ್ನು ಸುಟ್ಟಗಾಯಕ್ಕೆ ಬಲಿಯಾದವರಿಗೆ ಅಳವಡಿಸಬಹುದೆಂದು ಅವರ ಭಾವನೆ. ಯೋಜನೆಯಂತೆ ಎಲ್ಲ ನಡೆಯುವುದಾದರೆ, ರೋಗಿಯ ಚರ್ಮದಲ್ಲಿ ಮಾಮೂಲಿ ಕಣ್ಣಿಗೆ ಗಾಯದ ಗುರುತೇ ತಿಳಿಯದ ರೀತಿಯಲ್ಲಿ, ೩೦ ದಿನಗಳಲ್ಲಿ ಚರ್ಮವನ್ನು ಅಳವಡಿಸಲಾಗುವುದು.

"ಯಾವುದೋ ಒಂದು ರೀತಿಯಲ್ಲಿ ನಮ್ಮ ಸಂಶೋಧನೆಯ ಯೋಜನೆ ಎಲ್ಲ ಕಡೆ ಮತ್ತೆ ಪ್ರಾರಂಭವಾಗುತ್ತಿದೆ. ಹಿಂದೆ ನಾವು ಯಾವುದೋ ಕತ್ತಲೆ ಕೋಣೆಯಲ್ಲಿದ್ದಂತೆ ತಡವರಿಸುತ್ತಿದ್ದೆವು. ಈಗ ಇನ್ನೊಂದು ದೊಡ್ಡ ಕೋಣೆಗೆ ಹೆಜ್ಜೆ ಇಟ್ಟಿದ್ದೇವೆ. ಅಲ್ಲೂ ಕತ್ತಲೆ. ಇದರ ಅರ್ಥವೇನೆಂದರೆ ನಾವು ಇನ್ನೊಂದು ದೀಪ ಹಚ್ಚಬೇಕೆಂಬುದು" ಎನ್ನುತ್ತಾರೆ ಪ್ರೊ|| ಯನ್ನಾಸ್.

ಅಕ್ಕ ಮಹಾದೇವಿ

ಒಲಿಂಪಿಕ್ಸ್: ಸ್ತ್ರೀಯರಿಗೆ ಅನ್ಯಾಯ

ಓಬೀರಾಯನ ಕಾಲದ ಪೂರ್ವಾಗ್ರಹಗಳು ಸ್ತ್ರೀ ವ್ಯಾಯಾಮ ಪಟುಗಳನ್ನು ಅನೇಕ ಸ್ಪರ್ಧೆಗಳಿಂದ ಈಗಲೂ ದೂರವಿಟ್ಟಿವೆ.

ಒಲಿಂಪಿಕ್ಸ್ ಆಟಗಳ ೨೭ ವಿಭಾಗಗಳಲ್ಲಿ ಸ್ತ್ರೀಯರನ್ನು ೯ರಿಂದ ದೂರವಿಡಲಾಗಿದೆ—ಗುದ್ದಾಟ (ಬಾಕ್ಸಿಂಗ್), ಕಾಲ್ಚೆಂಡು (ಫುಟ್‌ಬಾಲ್), ಜೂಡೋ, ಕುಸ್ತಿ, ಮೋಡರ್ನ್ ಪೆಂಟಥ್ಲಾನ್, ಭಾರವನ್ನೆತ್ತುವುದು, ಬಯಾಥ್ಲಾನ್, ಬಾಬ್ ಸ್ಲೈ ಮತ್ತು ಐಸ್ ಹಾಕಿ. ೫,೦೦೦ ಮತ್ತು ೧೦,೦೦೦ ಮೀಟರ್ ಓಟದ ಸ್ಪರ್ಧೆಗೂ ಪೋಲ್ ವಾಲ್ಟ್, ಹ್ಯಾಮರ್ ಥ್ರೋಗೂ ಪ್ರವೇಶವಿಲ್ಲ.

೧೬೮ ವಿಷಯಗಳನ್ನು ಗಂಡಸರಿಗೂ ೭೩ನ್ನು ಹೆಂಗಸರಿಗೂ ಸೀಮಿತಗೊಳಿಸಲಾಗಿದೆ. ೧೫ರಲ್ಲಿ ಮಾತ್ರ ಹೆಂಗಸರೂ ಗಂಡಸರೂ ಪರಸ್ಪರ ಇದಿರಿಸಿ ಸ್ಪರ್ಧಿಸುವರು (ದೋಣಿ ನಡೆಸುವುದು, ಅಶ್ವಾರೋಹಣ, ರೈಫಲ್ ಮತ್ತು ಪಿಸ್ತೂಲ್ ಉಡಾಯಿಸುವುದು ಈ ವಿಷಯಗಳಲ್ಲಿ ಹೆಂಗಸರೇ ಪದಕಗಳನ್ನು ಗೆದ್ದಿದ್ದಾರೆ).

ಕೆಲವು ಬಗೆಯ ಸ್ಪರ್ಧೆಗಳಿಂದ ಸ್ತ್ರೀಯರನ್ನು ಹೊರತುಪಡಿಸಲು ಆಡಳಿತದ ಕೈ ಕಟ್ಟಿರುವುದು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿಬಂಧನೆ ೪೪:— 'ಒಂದು ಆಟ, ಓಟ ಅಥವಾ ಬೇರೆ ವಿಷಯವನ್ನು ಕಡೆಯ ಪಕ್ಷ ಮೂರು ಭೂಖಂಡಗಳ ೩೫ ರಾಷ್ಟ್ರಗಳಲ್ಲಿನ ಸ್ತ್ರೀಯರು ವ್ಯಾಪಕವಾಗಿ ಅಭ್ಯಸಿಸುತ್ತಿದ್ದರೆ ಮಾತ್ರ ಅದನ್ನು ಒಲಿಂಪಿಕ್ಸ್‌ಗೆ ಸೇರಿಸಲು ವಿವೇಚಿಸಲಾಗುವುದು.' ಇರಾನ್ ಮತ್ತು ಸೌದಿ ಅರೇಬಿಯಾದಂಥ ಕೆಲವು ಮುಸ್ಲಿಮ್ ರಾಷ್ಟ್ರಗಳಲ್ಲಿ ಸ್ತ್ರೀಯರು ಯಾವುದೇ ಆಟದಲ್ಲಿ ಸ್ಪರ್ಧಿಸುವುದು ನಿಷಿದ್ಧ. ದಕ್ಷಿಣ ಅಮೆರಿಕಾ ಖಂಡಗಳಲ್ಲಿ ಹೆಚ್ಚಿನ ಸ್ಪರ್ಧಾತ್ಮಕ ಓಟ ವಿಷಯಗಳಲ್ಲಿ ಪುರುಷರಿಗೆ ಇದಿರಾಗಿ ಸ್ತ್ರೀಯರು ಭಾಗವಹಿಸುವುದೇ ಇಲ್ಲ ಅಥವಾ ಇದ್ದರೂ ಅಪರೂಪವಾಗಿ 'ರೈಡಿಂಗ್' (ಕುದುರೆ ಸವಾರಿ)ನಲ್ಲಿ ಮಾತ್ರ. ಇಂತಹ ಪ್ರಾದೇಶಿಕ ಪೂರ್ವಾಗ್ರಹಗಳು ಮತ್ತು ನಿಷಿದ್ಧಗಳು, ಕೆಲವು ಕ್ರೀಡೆಗಳನ್ನು "ವ್ಯಾಪಕವಾಗಿ ಅಭ್ಯಸಿಸುವ" ಮೂರು ಖಂಡಗಳಲ್ಲಿನ ೩೫ ರಾಷ್ಟ್ರಗಳನ್ನು ಕಲೆಹಾಕುವುದಕ್ಕೆ, ಅತ್ಯಂತ ಕಷ್ಟಗೊಳಿಸುತ್ತವೆ.

ಒಂದು ಆಟವನ್ನೋ ವಿಷಯವನ್ನೋ ಒಲಿಂಪಿಕ್ಸ್‌ಗೆ ಸೇರಿಸಬೇಕೆಂದು

೧೯೮೪ರ ಜೂನ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಾಲ್ಟರ್‌ರಾಸ್‌ರವರ "ದಿ ಒಲಿಂಪಿಕ್ಸ್ : ಅನ್‌ಫೇರ್ ಟು ಉಮೆನ್" ಲೇಖನದ ಅನುವಾದ

ಯಾವುದಾದರೊಂದು ಅಂತಾರಾಷ್ಟ್ರೀಯ ಕ್ರೀಡಾ ಸಂಘವು ಬೇಡಬೇಕು. ಈ ಸಂಘಗಳಲ್ಲಿ ಬಹುತೇಕ ಪುರುಷರದೇ ಮೇಲ್ಗೈ—ಅದರಲ್ಲೂ ಸ್ತ್ರೀಯರ ಕ್ರೀಡೆಗಳ ಬಗ್ಗೆ ಪುರಾತನ ಅಭಿಪ್ರಾಯಗಳಿರುವಂತಹ ಪುರುಷರದೇ. ಇದರಂತೆಯೇ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳಲ್ಲಿಯೂ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯಲ್ಲಿಯೂ ಪುರುಷರ ಕೈವಾಡವೇ ಪ್ರಧಾನ. ೧೯೮೧ರವರೆಗೆ ಅಂ.ಒ.ಸ. ಯಲ್ಲಿ ಶೇಕಡಾ ೧೦೦ರಷ್ಟು ಪುರುಷರೇ; ಈಗ ಅದರಲ್ಲಿ ೮೭ ಪುರುಷರೂ ೩ ಸ್ತ್ರೀಯರೂ ಇರುವರು.

ಸ್ತ್ರೀ ಕ್ರೀಡಾಪಟುಗಳು ಕೆಲವು ಸ್ಪರ್ಧೆಗಳಲ್ಲಿ ಭಾಗವಹಿಸುವುದನ್ನು ಸೌಂದರ್ಯಾತ್ಮಕ, ಮನಶ್ಶಾಸ್ತ್ರಾತ್ಮಕ ಮತ್ತು ಶಾರೀರಕ ತತ್ವಾಧಾರಗಳು ಅಡ್ಡಿಪಡಿಸುತ್ತವೆಂದು ಹೇಳಲಾಗುತ್ತದೆ. ದೃಢವಾಗಿ ಬೇರೂರಿರುವ ಎರಡು ಅಭಿಪ್ರಾಯಗಳು ಇವು—ಒಂದು, ಆಟೋಟಗಳಲ್ಲಿ ಭಾಗವಹಿಸುವುದು ತರುಣಿಯರ ಸ್ತ್ರೀತ್ವಕ್ಕೂ ಅವರು ಗರ್ಭಧಾರಣೆ ಮಾಡಿ ಮಕ್ಕಳನ್ನು ಪ್ರಸವಿಸುವ ಶಕ್ತಿಗೂ ಕೆಡುಕನ್ನುಂಟುಮಾಡುತ್ತದೆ. ಎರಡು, ಸ್ತ್ರೀಯರು ಶಾರೀರಕವಾಗಿ ಪುರುಷರಿಗಿಂತ ಹೆಚ್ಚು ದುರ್ಬಲೆಯರು ಮತ್ತು ಕಡಿಮೆ ಗಟ್ಟಿಮನಸ್ಸುಳ್ಳವರು —ಆದರೂ ಕ್ರೀಡಾ ವೈದ್ಯ, ಶರೀರಶಾಸ್ತ್ರ ಮತ್ತು ಮನಶ್ಶಾಸ್ತ್ರಗಳಲ್ಲಿ ನಿಪುಣರು ಈ ಅಭಿಪ್ರಾಯಗಳನ್ನು ಬೆಂಬಲಿಸುವುದಿಲ್ಲ. ಬದಲು, ಅವನ್ನು ಬಹುಮಟ್ಟಿಗೆ ಅಲ್ಲಗಳೆಯುತ್ತಾರೆ. ಬಹುಜನರ ತಪ್ಪು ನಂಬಿಕೆಗಳನ್ನು ತಥ್ಯ ಸಂಗತಿಗಳಿಂದ ಬೇರ್ಪಡಿಸುವ ಕಾಲವಿದು.

ನಂಬಿಕೆ: ಕ್ರೀಡೆಗಳಲ್ಲಿ ನಿರತರಾಗಿರುವ ಸ್ತ್ರೀಯರು ತಮ್ಮ ಸಂತಾನ ಶಕ್ತಿಗೆ ಧಕ್ಕೆಯುಂಟುಮಾಡಿಕೊಳ್ಳುವರು.

ತಥ್ಯ: ಕ್ರೀಡಾಭ್ಯಾಸವು ಸ್ತ್ರೀಯರ ಗರ್ಭಧಾರಣ ಶಕ್ತಿಯನ್ನಾಗಲಿ ಪ್ರಸವ ಶಕ್ತಿಯನ್ನಾಗಲಿ ಮಿತಿಗೊಳಿಸುವುದಿಲ್ಲ. ನಿಜವಾಗಿ ವ್ಯಾಯಾಮಿ ಹೆಂಗಸರಿಗೆ ಬರುವ ಪ್ರಸವ ಸಮಯದ ಸಮಸ್ಯೆಗಳು ಚಟುವಟಿಕೆಯಿಲ್ಲದವರಿಗಿಂತ ಕಡಿಮೆ. ಹಂಗೇರಿಯನಾದ ೭೨೯ ಮಂದಿ ಸ್ತ್ರೀ ವ್ಯಾಯಾಮ ಪಟುಗಳ ಪರಿಶೀಲನೆಯಿಂದ ಅವರ ಪ್ರಸವವೇದನಾ ಕಾಲವು ವ್ಯಾಯಾಮ ಮಾಡದ ಸ್ತ್ರೀಯರದಕ್ಕಿಂತ ಕಡಿಮೆ ಮತ್ತು ಅವರಲ್ಲಿ ಸಿಸೇರಿಯನ್ ಸೆಕ್ಷನಿನ ಅಗತ್ಯವಿದ್ದವರು ಶೇಕಡ ೫೦ರಷ್ಟು ಮಾತ್ರವೇ ಎಂದು ಕಂಡುಬಂದಿತು.

ನಂಬಿಕೆ: ಗರ್ಭಿಣಿಯರು ವ್ಯಾಯಾಮದಲ್ಲಿ ಭಾಗವಹಿಸಕೂಡದು.

ತಥ್ಯ: ಎಳೆಗಬ್ಬವು ಅನೇಕ ಕ್ರೀಡೆಗಳಿಗೆ ಅಡ್ಡಿಮಾಡಲಾರದು. ಅದು

ಕ್ರೀಡಾ ಶಕ್ತಿಯನ್ನು ಕುಂದಿಸುವುದಿಲ್ಲ. ೧೯೬೦ರ ಬ್ರಿಟಿಷ್ ಒಲಿಂಪಿಕ್ಸ್‌ನ ಡೈವಿಂಗ್‌ನಲ್ಲಿ ಕಂಚಿನ ಪದಕ ಗೆದ್ದ ಡಾಕ್ಟರ್ ಎಲಿಜಿಬೆತ್ ಫೆರಿಸ್‌ರ ಪ್ರಕಾರ ೧೯೫೬ರ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಪದಕಗಳನ್ನು ಗೆದ್ದ ಹತ್ತು ಮಂದಿ ಸ್ತ್ರೀಯರು ಗರ್ಭವತಿಯರಾಗಿದ್ದರು.

ನಂಬಿಕೆ: ನೆಗೆಯುವುದು, ಆದುರುವುದು, ಹೊಟ್ಟೆಗೆ ಪೆಟ್ಟು ಬೀಳುವುದು ಇವುಗಳಿಂದ ಗರ್ಭಕೋಶಕ್ಕೆ ಹಾನಿಯಾಗುವುದು.

ತಥ್ಯ : ಗರ್ಭಕೋಶವು ಹೊಟ್ಟೆಯ ಕುಳಿಯಲ್ಲಿ ಸುರಕ್ಷಿತವಾಗಿ ಇಳಿಬಿದ್ದಿದೆ. ಫ್ರೆಂಚ್–ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ ಎಂಡ್ ಫಿಸಿಕಲ್ ಎಜ್ಯುಕೇಶನ್ ಸಂಸ್ಥೆಯ ವೈದ್ಯರು ಡಾ|| ಡೆನಿಸ್ ಬೆರಾಲ್ಟ್ ಹೇಳುತ್ತಾರೆ, “ಪ್ರಕೃತಿಯು ಗರ್ಭಕೋಶವನ್ನೂ ಅಂಡಾಶಯುಗಳನ್ನೂ ಗಂಡಸಿನ ಲಿಂಗಾಂಗ ಗಳಿಗಿಂತ ಹೆಚ್ಚಾಗಿ ರಕ್ಷಿಸಿದೆ.”

ನಂಬಿಕೆ : ಸ್ತ್ರೀಯ ಸ್ತನಕ್ಕೆ ಬಿದ್ದ ಪ್ರಹಾರ ಅರ್ಬುದ (ಕ್ಯಾನ್ಸರ್) ರೋಗಕ್ಕೆ ಕಾರಣವಾಗುತ್ತದೆ.

ತಥ್ಯ : ಸ್ವೀಡನ್ ದೇಶವಲ್ಲಿ ಸುಮಾರು ೩೪,೦೦೦ ತರುಣಿಯರು ಕಾಲ್ಚೆಂಡಾಡಲು ರಹದಾರಿ ಪಡೆದಿರುತ್ತಾರೆ. ಅದರೂ ಸ್ವೀಡನ್ನಿನ ರಾಷ್ಟ್ರೀಯ ಸ್ತ್ರೀ ಕಾಲ್ಚೆಂಡಾಟದ ತಂಡದ ವೈದ್ಯೆ ಡಾ|| ಇಂಜೆಲಾ ಪಾವನ್ ಕೊಪಿಸ್ಟ್ ಹೇಳುತ್ತಾರೆ, “ಕಾಲ್ಚೆಂಡು ಆಟಗಾರರಲ್ಲಿ ಗಂಭೀರ ಸ್ತನಾಘಾತ ಹೊಂದಿದವ ರನ್ನಾಗಲಿ ಸ್ತನಾರ್ಬುದದ ಹೆಚ್ಚಿನ ಸಂಭವವನ್ನಾಗಲಿ ನೋಡಿಲ್ಲ.”

ಅಮೆರಿಕದ ಕ್ಯಾನ್ಸರ್ ಸೊಸೈಟಿಯು, ಸಂಶೋಧನೆ, ಬೋಧನೆ, ಮತ್ತು ರೋಗಿಗಳನ್ನು ಪುನಃ ಉಜ್ಜುಗಿಸುವುದರ (ರಿಹೇಬಿಲಿಟೇಟ್) ಮೂಲಕ ಅರ್ಬುದ ರೋಗದೊಡನೆ ಸೆಣಸುವ ಒಂದು ರಾಷ್ಟ್ರೀಯ ಸ್ವಯಂಪ್ರೇರಿತ ಸಂಸ್ಥೆ. ಇದು ಹೇಳುವುದು, “ಆಘಾತವು ಸ್ತನಾರ್ಬುದಕ್ಕೆ ಕಾರಣವಾಗುವುದಿಲ್ಲ. ಅದರೆ ಮೊದಲೇ ಇದ್ದ ಬಾವು ಆಘಾತದಿಂದ ಪ್ರಕಾಶಕ್ಕೆ ಬರಬಹುದೇ ಹೊರತು ಅದರಿಂದಲೇ ಅರ್ಬುದವುಂಟಾಗುವುದಿಲ್ಲವೆಂಬುದು ಶಸ್ತ್ರ ವೈದ್ಯರ ಗಮನಕ್ಕೆ ಅನೇಕ ಸಾರಿ ಬಂದಿದೆ.”

ನಂಬಿಕೆ : ಮುಟ್ಟಾಗುವಿಕೆಯಿಂದ ಸ್ತ್ರೀಯರ ಶಕ್ತಿಯು ಕುಗ್ಗಿ ಭಾವಾತ್ಮಕ ವಾಗಿ ಅವರು ಕಠಿಣ ಸ್ಪರ್ಧೆಗೆ ಅನರ್ಹರಾಗುತ್ತಾರೆ.

ತಥ್ಯ : ತಮ್ಮ ಮುಟ್ಟು ಚಕ್ರದ ಎಲ್ಲಾ ಸ್ಥಿತಿಗಳಲ್ಲೂ ಸ್ತ್ರೀಯರು ಒಲಿಂಪಿಕ್ ಪದಕಗಳನ್ನು ಗೆದ್ದು ಆಟೋಟಗಳ ಹಿಂದಿನ ದಾಖಲೆಗಳನ್ನು ಮುಂ

ದಿರುವರು. ಆದರೆ ಕೆಲವರಿಗೆ ಮಾತ್ರ ಮುಟ್ಟಿಗೆ ತೀರಾ ಸಮೀಪದ ದಿನಗಳಲ್ಲಿ ಸ್ವಲ್ಪ ಅನನುಕೂಲವಾಗಬಹುದು. ಅವರಿಗೆ ಸೆಡೆತವಾಗಬಹುದು, ಶರೀರದಲ್ಲಿ ಹೆಚ್ಚು ದ್ರವ ಸೇರಿಹೋಗಿ ಅವರ ತೂಕ ಹೆಚ್ಚಾಗಬಹುದು. ತಂಡದ ವೈದ್ಯರು ಬಹುಶಃ ಅವರಿಗೆ ಹಾರ್ಮೋನ್ ಚಿಕಿತ್ಸೆ ಮಾಡಿ ಅವರ ಮುಟ್ಟುಚಕ್ರವನ್ನು ಆಟೋಟಗಳ ದಿನಗಳಿಗೆ ಹೊಂದಿಸುತ್ತಾರೆ. ಆಟೋಟಗಳ ತೀವ್ರ ಅಭ್ಯಾಸವು ಅನೇಕ ವೇಳೆ ತಡವಾಗಿ ಮುಟ್ಟಾಗುವಂತೆ ಮಾಡುವುದು. ಕೆಲವು ಸಲ ಕ್ರಮವಾಗಿ ಬಹಿಷ್ಠೆಯಾಗುವುದನ್ನು ತಪ್ಪಿಸುವುದು. ಒಟ್ಟಾರೆ, ಕ್ರಮ ಪ್ರಕಾರ ಆಟೋಟದ ಅಭ್ಯಾಸ ಮಾಡುವ ಸ್ತ್ರೀಯರು ತಮಗೆ ಮುಟ್ಟಿನ ತೊಂದರೆ ಏನೂ ಆಗುವುದಿಲ್ಲವೆಂದು ಹೇಳುತ್ತಾರೆ; ಮುಟ್ಟಿಗೆ ಮೊದಲಿನ ಉದ್ವೇಗವೂ ಮುಟ್ಟಿನ ಅವಧಿಯೂ ರಕ್ತಸ್ರಾವವೂ ಅವರಿಗೆ ಕಡಿಮೆಯಂತೆ.

ನಂಬಿಕೆ : ಪುರುಷರಿಗಿಂತ ಸ್ತ್ರೀಯರು ಸಹಜವಾಗಿಯೇ ಹೆಚ್ಚು ದುರ್ಬಲರು.

ತಥ್ಯ : ಸರಾಸರಿ ಸ್ತ್ರೀಯರ ತೋಳಿನ ಶಕ್ತಿ ಅದೇ ಗಾತ್ರದ ಗಂಡಸಿನ ತೋಳಿನ ಶಕ್ತಿಗಿಂತ ಕಡಿಮೆಯಾದರೆ, ಕಾಲಿನ ಶಕ್ತಿ ಮಾತ್ರ ಒಂದೇ ಸಮವೆಂದು ಪರಿಶೀಲನೆಯಿಂದ ಕಂಡುಬರುವುದು. ಅರಿಜೋನ ವಿಶ್ವವಿದ್ಯಾಲಯದ ವ್ಯಾಯಾಮ ಮತ್ತು ಆಟೋಟ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರು, ಜ್ಯಾಕ್ ವಿಲ್‌ಮೋರ್ ಹೇಳುವುದು — ಸ್ನಾಯುಗಳ ಗುಣ, ಎಂದರೆ ಅದು ಸಂಕುಚಿತಗೊಳ್ಳುವ ಗುಣ ಮತ್ತು ಬಲಪ್ರಯೋಗ ಸಾಮರ್ಥ್ಯ — ಸ್ತ್ರೀ ಪುರುಷರಲ್ಲಿ ಒಂದೇ. ಅಭ್ಯಾಸದಿಂದ ಸ್ತ್ರೀಯರು ತಮ್ಮ ಸ್ನಾಯು ಗಾತ್ರವನ್ನು ಹೆಚ್ಚಿಸಿಕೊಳ್ಳಬಹುದಾದರೂ ಅವರ ದೇಹಗಾತ್ರವು ಪುರುಷರಿಗಿಂತ ಕಡಿಮೆಯೆಂದು ಅವರು ನಂಬುತ್ತಾರೆ.

ಫಿಲಡೆಲ್ಫಿಯ ಟೆಂಪಲ್ ಯೂನಿವರ್ಸಿಟಿ ಮತ್ತು ಹೌಸ್ಟನ್‌ನ ರೈಸ್ ಯೂನಿವರ್ಸಿಟಿಗಳ ವ್ಯಾಯಾಮ ಶಿಕ್ಷಣದ ಇಬ್ಬರು ಪ್ರೊಫೆಸರರು, ಕೆರೋಲ್ ಓಗಲ್‌ಸ್ಬಿ ಮತ್ತು ಜಾಕಿ ಹರ್ಸ್ಟ್ ಎಂಬುವರು ಈ ಅಭಿಪ್ರಾಯವನ್ನು ಪರೀಕ್ಷಿಸಲು ಫಿಲಡೆಲ್ಫಿಯದ ಅಗ್ನಿಶಾಮಕದಳದ ವಿದ್ಯಾರ್ಥಿಗಳ ಭಾರವೆತ್ತುವ ಪರೀಕ್ಷೆಗೆ ತಾವೂ ಕುಳಿತರು. ಇಬ್ಬರು ಸ್ತ್ರೀಯರೂ ಸುಮಾರು ೧೬೩ ಸೆಂ.ಮೀ. ಎತ್ತರ ಮತ್ತು ೫೪ ಕಿಲೋ ತೂಕವಿದ್ದರು. ಇಬ್ಬರೂ ಯಾವಾಗಲೂ ಭಾರವೆತ್ತಿರಲಿಲ್ಲ. ವಾರಕ್ಕೆ ಮೂರು ಗಂಟೆಗಳಂತೆ ಎರಡು ತಿಂಗಳ ಅಭ್ಯಾಸದ ನಂತರ ಓಗಲ್‌ಸ್ಬಿ, ಪರೀಕ್ಷೆಗೆ ಕುಳಿತ ೫೫ ಮಂದಿ ಪುರುಷರಿಗಿಂತ ಹೆಚ್ಚಾಗಿಯೂ ಹರ್ಸ್‌ಸ್ ನೂರಕ್ಕೆ ೬೯ ಮಂದಿ ಎತ್ತಿದ್ದಕ್ಕಿಂತ ಹೆಚ್ಚಾಗಿಯೂ ಭಾರವೆತ್ತಿದರು.

ನಂಬಿಕೆ : ಐದು ಮಿನಿಟುಗಳಿಗಿಂತ ಹೆಚ್ಚು ಕಾಲ ತೆಗೆದುಕೊಳ್ಳುವ ಒಂದು ವ್ಯಾಯಾಮವನ್ನು ಮಾಡಲು ಅತ್ಯಗತ್ಯವಾದ ಉಸಿರು ಕಟ್ಟುವ ಶಕ್ತಿಯು ಪುರುಷರಿಗಿಂತ ಸ್ತ್ರೀಯರಲ್ಲಿ ಕಡಿಮೆ.

ತಥ್ಯ : ಹುಡುಗರಿಗೂ ಹುಡುಗಿಯರಿಗೂ ಹುಟ್ಟಿದೊಡನೆ ಆಮ್ಲಜನಕವನ್ನು ಎಳೆದುಕೊಳ್ಳುವ ಸಾಮರ್ಥ್ಯ ಒಂದೇ ಸಮನಾಗಿ ಇರುವುದಾದರೂ ಹುಡುಗಿಯರು 'ದೊಡ್ಡವ'ರಾಗುವ ಹೊತ್ತಿಗೆ ಅದು ಕಡಿಮೆಯಾಗುವುದು ಆದರೆ ಇದು ಹುಡುಗರಲ್ಲಿ ೨೦ ವಯಸ್ಸಿನವರೆಗೆ ಏರುತ್ತಿದ್ದು ಅನಂತರ ಇಳಿಯುತ್ತಾ ಬರುವುದು. ಗಾತ್ರಕ್ಕೂ ತೂಕಕ್ಕೂ ಸರಿಯಾಗಿ ಉಸಿರು ಕಟ್ಟುವ ಶಕ್ತಿಯನ್ನು ತಿದ್ದುಪಡಿ ಮಾಡಿದ ಮೇಲೆ ಸ್ತ್ರೀಯರಿಗೆ ಶೇಕಡಾ ೧೫ರಷ್ಟು ಆ ಶಕ್ತಿ ಕಡಿಮೆಯೇ ಆಗಿರುತ್ತದೆ. ಕಾರಣ—ಸ್ತ್ರೀಯರ ಹೃದಯದ ಗಾತ್ರ ಪುರುಷರದಕ್ಕಿಂತ ಚಿಕ್ಕದು ಮತ್ತು ಅವರಲ್ಲಿನ ರಕ್ತದಲ್ಲಿ ಶೇಕಡ ೧೦ರಷ್ಟು ಕಡಿಮೆ ಹಿಮೊಗ್ಲೊಬಿನ್ (ರಕ್ತಾಣುಗಳ ಮೂಲಕ ಆಮ್ಲಜನಕವನ್ನು ಅಂಗಾಂಗಗಳಿಗೆ ಸಾಗಿಸುವ ದ್ರವ್ಯ ವಿಶೇಷ) ಇದೆ.

ಉಸಿರುಕಟ್ಟುವ ಶಕ್ತಿಯು ದೇಹದ ಕೊಬ್ಬಿಲ್ಲದ ಭಾಗದ ಗಾತ್ರಕ್ಕೆ ಅನುಗುಣವಾಗಿದೆ. ಸ್ತ್ರೀಯರ ದೇಹದಲ್ಲಿ ಶೇಕಡ ೭೫ ಭಾಗ ಕೊಬ್ಬಿಲ್ಲದ ಭಾಗ, ೨೫ ಭಾಗ ಕೊಬ್ಬಿರುವ ಭಾಗ. ಇದಕ್ಕೆ ಹೋಲಿಸಿದರೆ ಪುರುಷರಲ್ಲಿ ಶೇಕಡ ೮೫ ಮತ್ತು ೧೫. ಆಧುನಿಕ ಅಭ್ಯಾಸ ವಿಧಾನಗಳಿಂದ ದೇಹದ ಕೊಬ್ಬನ್ನು ಕಡಿಮೆ ಮಾಡುವುದರ ಮೂಲಕ ಕೊಬ್ಬಿಲ್ಲದ ದೇಹಭಾಗದ ಗಾತ್ರವನ್ನು ಹೆಚ್ಚಿಸಬಹುದು. ಪ್ರಪಂಚದ ಮೇಲ್ಮಟ್ಟದ ದೂರ ಓಡುವವರ ಪೈಕಿ ಸ್ತ್ರೀ ಓಟಗಾರ್ತಿಯರ ದೇಹದಲ್ಲಿರುವ ಕೊಬ್ಬಿನ ಶೇಕಡಾ ಭಾಗವು ಪುರುಷ ಓಟಗಾರರದಷ್ಟಕ್ಕೆ ಸಮೀಪವಾಗಿದೆ. ಅಮೆರಿಕದ ವ್ಯಾಯಾಮ ವೈದ್ಯಕೀಯ ಕಾಲೇಜಿನವರು ಪರಿಶೀಲನೆ ಮಾಡಿಕೊಟ್ಟಿರುವ ಉದಾಹರಣೆಗಳಿಗೆ ಅನುಸಾರವಾಗಿ, ಕ್ರಮಪ್ರಕಾರ ಅಭ್ಯಾಸ ಮಾಡಿದ ವ್ಯಾಯಾಮ ಶಿಕ್ಷಣದ ನಂತರ ಸ್ತ್ರೀಯರ ಹೃದಯ ಶ್ವಾಸಕೋಶಗಳ ಸಾಮರ್ಥ್ಯವು ಪುರುಷರಷ್ಟೇ ಇರುತ್ತದೆ.

ತೀವ್ರ ವ್ಯಾಯಾಮ ಶಿಕ್ಷಣದ ನಂತರ ಸ್ತ್ರೀಯರ ಹೃದಯವು ಪ್ರತಿ ಮಿನಿಟಿಗೆ ಹೊರಕ್ಕೊತ್ತುವ ರಕ್ತದ ಮೊತ್ತವು ಹೆಚ್ಚಾಗುತ್ತದೆ. ಹೀಗಾಗಿ ಮೇಲ್ಮಟ್ಟದ ಸ್ತ್ರೀ ಪುರುಷ ಓಟಗಾರರ ಪರೀಕ್ಷಾ ನಂತರ ಸ್ತ್ರೀಯರ ಉಸಿರುಕಟ್ಟುವ ಶಕ್ತಿಯು ಪುರುಷರದಕ್ಕಿಂತ ಕೇವಲ ಶೇಕಡ ೪.೩ರಷ್ಟು ಕಡಿಮೆಯಾಗಿ ಕಂಡುಬಂದುದರಲ್ಲೇನೂ ಆಶ್ಚರ್ಯವಿಲ್ಲ.

೧೯೭೯ರಲ್ಲಿ ದೂರ ಓಟದಿಂದ ಸ್ತ್ರೀಯರ ಮೇಲಾಗುವ ಎಲ್ಲಾ ಗೊತ್ತಾದ ಪರಿಣಾಮಗಳನ್ನೂ ತೂಗಿನೋಡಿ, ಅಮೆರಿಕಾದ ವ್ಯಾಯಾಮ ವೈದ್ಯಕೀಯ ಕಾಲೇಜು, ಕ್ರಾಂತಿಕಾರಕವೆನ್ನಬಹುದಾದ ಈ ಶಿಫಾರಸ್ಸನ್ನು ಪ್ರಕಟಿಸಿತು: "ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದೂರ ಓಟದಲ್ಲಿ ಪುರುಷರು ಪಾಲ್ಗೊಳ್ಳಬಹುದಾದ ಎಲ್ಲಾ ಸ್ಪರ್ಧೆಗಳಲ್ಲೂ ಸ್ತ್ರೀಯರಿಗೂ ಅವಕಾಶ ಕೊಡಬಹುದು." ಅಲ್ಲಿವರೆಗೆ ಒಲಿಂಪಿಕ್ ಓಟದ ಸ್ಪರ್ಧೆಗಳಲ್ಲಿ ೧೫೦೦ ಮೀಟರ್‌ಗಿಂತ ಹೆಚ್ಚಿನ ದೂರದ ಓಟಗಳಲ್ಲಿ ಸ್ತ್ರೀಯರಿಗೆ ಅವಕಾಶವಿರಲಿಲ್ಲ. ಆದರೂ ಕ್ಯಾಥರೀನ್ ಸ್ವಿಟ್ಜರ್ ೧೯೬೭ರಲ್ಲಿ ಬಾಸ್ಟನ್ ಮಾರತಾನ್‌ಗೆ ನುಗ್ಗಿದನಂತರ ಸ್ತ್ರೀಯರು ಮಾರತಾನ್ ಓಟಗಳಲ್ಲಿ ಅಫೀಶಿಯಲ್ ಸ್ಪರ್ಧಿಗಳಾಗಿ ಭಾಗವಹಿಸುತ್ತಿದ್ದರು. ಕ್ಯಾಥರೀನಳ ಶಿಕ್ಷಕಿಯು ತನ್ನದೇ ಆದ್ಯಕ್ಷರಗಳ (ಇನಿಶಿಯಲ್ಸ್) ಆಧಾರದಲ್ಲಿ ಅವಳನ್ನು ಸ್ಪರ್ಧೆಗೆ ನೋಂದಾಯಿಸಿದಳು. ಅವಳಿಗೆ ಖಾಸಗಿಯಾಗಿ ವೈದ್ಯಕೀಯ ತಪಾಸಣೆಯಾಯಿತು. ಅವಳು ತನ್ನ ಸ್ವೆಟರನ್ನು ಕಳಚುವವರೆಗೆ ಯಾರಿಗೂ ಅವಳು ಸ್ತ್ರೀಯಂತೆ ತೋರುತ್ತಿರಲಿಲ್ಲ. ಅವಳು ಮೋಸದಿಂದ ನೋಂದಾಯಿಸಿದ್ದಕ್ಕಾಗಿ ಅಮೆಚ್ಯೂರ್ ಅಥ್ಲೆಟಿಕ್ ಯೂನಿಯನ್ ಅವಳನ್ನು ಸಸ್ಪೆಂಡ್ ಮಾಡಿತು. ೧೯೭೨ರಲ್ಲಿ ಅಮೆಚ್ಯೂರ್ ಅಥ್ಲೆಟಿಕ್ ಯೂನಿಯನ್ ತನ್ನ ಬಿಗಿ ನಿಲುವನ್ನು ಸಡಿಲಗೊಳಿಸಿ, ಸ್ತ್ರೀಯರಿಗೂ ಮಾರತಾನ್ ಓಟದಲ್ಲಿ ಸ್ಪರ್ಧಿಸಲು ಅವಕಾಶ ಕೊಟ್ಟಿತು. ಅಲ್ಲಿಂದೀಚಿನ ಫಲಿತಾಂಶಗಳು ಪುರುಷರನ್ನು ಬೆರಗಾಗಿ ಬಿಡುವಂತೆ ಮಾಡಿವೆ. ೧೯೭೨ರ ಬೋಸ್ಟನ್ ಮಾರತಾನ್‌ನಲ್ಲಿ ಅತ್ಯುತ್ತಮ ಸ್ತ್ರೀ ಸ್ಪರ್ಧಿಯು ತೆಗೆದುಕೊಂಡ ಕಾಲ ೩ ಗಂ : ೧೦ ನಿ : ೨೬ ಸೆ. ಈಗ ಮೇಲ್ಮಟ್ಟದ ಮಾರತಾನ್ ಓಟಗಾರ್ತಿಯರು ೨ ಗಂ : ೩೦ನ್ನು ಮೀರುವುದಿಲ್ಲ. ೧೯೮೨ರ ಏಪ್ರಿಲ್‌ನಲ್ಲಿ ಅಮೆರಿಕದ ಜೋನ್ ಬೆನಾಯಿಟ್ ಎಂಬ ಓಟಗಾರ್ತಿ ಬೋಸ್ಟನ್ ಮಾರತಾನ್ ಓಟವನ್ನು ೨ ಗಂ : ೨೨ ನಿ : ೪೨ ಸೆ.ನಲ್ಲಿ ಓಡಿ ಬೆರಗುಗೊಳಿಸಿದಳು. ಎಂದರೆ ಇದು ಹಿಂದಿನ ಓಟದ ಚರಿತ್ರೆಯಲ್ಲಿನ ಅತ್ಯಂತ ಕಡಿಮೆ ಸಮಯಕ್ಕಿಂತ ಇನ್ನೂ ೩ ನಿ. ಹೆಚ್ಚು ಕ್ಷಿಪ್ರ.


೧೯೮೧ರಲ್ಲಿ ಅಂತಾರಾಷ್ಟ್ರೀಯ ಒಲಿಂಪಿಕ್ ಕಮಿಟಿಯು ಸ್ತ್ರೀಯರ ಮೊದಲನೇ ಮಾರತಾನ್‌ಗೆ ಒಪ್ಪಿಗೆ ಕೊಟ್ಟಿತು. ಮುಂದಿನ ತಿಂಗಳು ಲಾಸ್ ಏಂಜಲೀಸ್‌ನಲ್ಲಿ ಈ ಓಟವು ನಡೆಯುವುದು.*

* ಲಾಸ್ ಏಂಜಲೀಸ್‌ನಲ್ಲಿ ಇದೇ ಆಗಸ್ಟ್ ೫ನೇ ತಾರೀಕು ಮೊತ್ತ ಮೊದಲ ಬಾರಿಗೆ ನಡೆದ ಸ್ತ್ರೀ ಮಾರತಾನ್ ಪಂದ್ಯದಲ್ಲಿ ಮೇಲೆ ಹೇಳಿದ ೨೭ ವರ್ಷ ವಯಸ್ಸಿನ ಜೋನ್

ಸ್ತ್ರೀ ಮಾರತಾನ್ ಓಟವನ್ನು ಒಲಿಂಪಿಕ್ ಸ್ಪರ್ಧೆಗೆ ಸೇರಿಸುವುದರಲ್ಲಿ ಗೆಲುವನ್ನು ಸಾಧಿಸಿದುದು ಕ್ರೀಡಾಪಟುಗಳ ಬಹು ದೊಡ್ಡ ದಿಗ್ವಿಜಯ. ಆದರೆ ಕ್ರೀಡಾಸಮಾನತೆಯನ್ನು ಸಾಧಿಸುವ ಓಟದಲ್ಲಿ ಅವರು ಇನ್ನೂ ಬಹಳ ಹಿಂದು. ಕ್ರೀಡಾವೃದ್ಧರ ತೀರ್ಪಿನಂತೆ ಸ್ತ್ರೀಯರು ಪುರುಷರೊಡನೆ ದೇಹ ಸ್ಪರ್ಶವಾಗ ಬಹುದಾದ ಕ್ರೀಡೆಗಳಲ್ಲಿ ಮಾತ್ರ ಸ್ಪರ್ಧಿಸಕೂಡದು. ಕಾರಣ, ಅವರ ಗಾತ್ರ, ಹೋಲಿಕೆಯಲ್ಲಿ ಸಣ್ಣದು, ತೂಕದಲ್ಲಿ ಕಡಿಮೆ ಮತ್ತು ಅವರ ಸ್ನಾಯು ಮೊತ್ತ ಕಡಿಮೆ. ಇದರಿಂದ ಅವರಿಗೆ ಘಾತವಾಗುವ ಸಂಭವ ಹೆಚ್ಚು. ಆದರೆ ಸ್ತ್ರೀಯರು ಇತರ ಸ್ತ್ರೀಯರೊಂದಿಗೆ ಇಷ್ಟಬಂದ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಲು ಪೂರ್ಣಾವಕಾಶವಿರಬೇಕೆಂದು ಅವರು ನಂಬುತ್ತಾರೆ. ಮಾರತಾನ್ ನಂತಹ ತೆರೆದ ಸ್ಪರ್ಧೆಗಳು ಇನ್ನೂ ಹೆಚ್ಚಾಗಿರಬೇಕೆಂದು ಎಲ್ಲರೂ ಒಪ್ಪುತ್ತಾರೆ. ಬಹುತೇಕ ಎಲ್ಲಾ ಒಲಿಂಪಿಕ್ ಸ್ಪರ್ಧೆಗಳಿಗೂ ಸ್ತ್ರೀಯರನ್ನು ಪ್ರತಿಬಂಧಿಸುವುದಕ್ಕೆ ಯಾವ ವೈಜ್ಞಾನಿಕ, ವೈದ್ಯಕೀಯ, ಶಾರೀರಕ, ಸಾಮಾಜಿಕ, ಮನಶ್ಶಾಸ್ತ್ರೀಯ ಅಥವಾ ಲೈಂಗಿಕ ಸಮರ್ಥನೆಯೂ ಇಲ್ಲ.

ಬೆನಾಯ್ ಎಂಬವಳೇ ೨ ಗಂ : ೨೪ ನಿ : ೫೨ ಸೆ.ನಲ್ಲಿ ೪೨.೧೯೫ ಕಿ.ಮೀ. ಅಥವಾ ೨೬ ಮೈ-೩೮೫ ಯಾರ್ಡ್ ದೂರವನ್ನು ಮೊದಲಿಗಳಾಗಿ ಓಡಿ ಸ್ವರ್ಣಪದಕವನ್ನು ಗೆದ್ದಳು.

ಜಿ. ಎಸ್. ಕೇಶವಾಚಾರ್ಯ



ಯೋಗ್ಯವಾದ ತತ್ವಗಳನ್ನು ಕೇವಲ ಬಲ್ಲವನು ಆ ತತ್ವಗಳನ್ನು ಆದರಿಸುವವನಿಗೆ ಎಂದಿಗೂ ಸಾಟಿಯಾಗಲಾರ.

—ಕನ್ಫ್ಯೂಶಿಯಸ್

ಮರ ನಮಗೆ ವರ

ನಿಸರ್ಗದಲ್ಲಿ ಮೊದಲು ಸಸ್ಯ ಹಾಗೂ ಜೀವರಾಶಿಯು ಹುಟ್ಟಿಕೊಂಡಿತು. ಇವೆರಡುಗಳ ಉತ್ಪತ್ತಿಗೆ ಭೂಮಿಯೇ ಮೂಲಾಧಾರ. ಹಾಗೆಯೇ ಬೆಳವಣಿಗೆಗೆ ಗಾಳಿ, ಬೆಳಕು, ನೀರು ಇವು ಕಾರಣ. ಈ ಮೂರು ವಸ್ತುಗಳು ಪ್ರಕೃತಿಯಲ್ಲಿ ಅತೀ ಸರಳವಾಗಿ, ಸುಲಭವಾಗಿ ದೊರೆಯುವಂತವು. ಇವುಗಳು ಇಲ್ಲದಿದ್ದರೆ ಭೂಮಿಯ ಮೇಲೆ ಯಾವುದೇ ಸಸ್ಯವೇ ಆಗಲಿ ಅಥವಾ ಜೀವಿಯೇ ಆಗಲಿ ಒಂದು ಕ್ಷಣವೂ ಬದುಕಿರಲು ಸಾಧ್ಯವಿಲ್ಲ.

ಭೂಮಿಯ ಮೇಲೆ ಬದುಕಿರುವ ಸಸ್ಯ ಹಾಗೂ ಜೀವರಾಶಿಗಳ ಬೆಳವಣಿಗೆಗೆ ಬೆಳಕು ಬೇಕೇ ಬೇಕು. ಹೀಗೆ ಬೆಳವಣಿಗೆಗೆ ಎಷ್ಟು ಅಗತ್ಯವೋ ಹಾಗೆ ಈ ಬೆಳಕು ಸಸ್ಯಗಳ ಆಹಾರ ತಯಾರಿಕೆಗೂ ಕೂಡ ಅಷ್ಟೇ ಅಗತ್ಯವಿದೆ. ಇದರಿಂದ ಈ ಸಸ್ಯಕುಲವೆಲ್ಲ ತಮಗೆ ಬೇಕಾದ ಆಹಾರವನ್ನು ತಾವೇ ತಯಾರಿಸಿಕೊಳ್ಳುವುದಲ್ಲದೆ, ಜಗತ್ತಿನ ಸಕಲ ಜೀವ-ಜಂತುಗಳಿಗೂ ಕೂಡ ಅಗಾಧ ಪ್ರಮಾಣದ ಆಹಾರವನ್ನು ತಯಾರಿಸಿಕೊಡುತ್ತವೆ.

ಸಸ್ಯಗಳ ಎಲೆಗಳಲ್ಲಿ ಹಸಿರು ಬಣ್ಣದ ಒಂದು ಪದಾರ್ಥ ಇದೆ. ಇದುವೇ 'ಹರಿತ್ತು'. ಈ ವಸ್ತುವು ಆಹಾರ ತಯಾರಿಸುವಾಗ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಸಸ್ಯಗಳ ಎಲೆಗಳು ಗಾಳಿಯಲ್ಲಿರುವ ಇಂಗಾಲದ ಡೈಆಕ್ಸೈಡನ್ನು ಸೇವಿಸುವಂತೆ ಭೂಮಿಯಿಂದ ನೀರನ್ನು ಹೀರಿಕೊಳ್ಳುತ್ತವೆ ಮತ್ತು ಭೂಮಿಗೆ ಬೀಳುವ ಬೆಳಕನ್ನೂ ಈ 'ಪತ್ರ-ಹರಿತ್ತು' ಹೀರಿಕೊಳ್ಳುತ್ತದೆ. ಹೀಗೆ ಬೆಳಕಿನಿಂದ ಆಹಾರ ತಯಾರಿಕೆ ಕ್ರಿಯೆಗೆ ಚಾಲನೆ ದೊರೆಯುತ್ತದೆ.

ನಮ್ಮ ಭೂಮಿಗೆ ಬೀಳುವ ಸೂರ್ಯನ ಕಿರಣಗಳು ಎಲ್ಲ ಕಡೆಗೂ ಒಂದೇ ತೆರನಾಗಿ ಬೀಳುವುದಿಲ್ಲ. ಇವು ಕೆಲವು ಕಡೆ ಸೌಮ್ಯವಾಗಿಯೂ, ಇನ್ನು ಕೆಲವು ಪ್ರದೇಶಗಳಲ್ಲಿ ಪ್ರಖರವಾಗಿಯೂ ಬೀಳುತ್ತವೆ. ಇದರಿಂದ ವಾತಾವರಣದಲ್ಲಿ ಏರು-ಪೇರಾಗುವುದು ಸಹಜ.

ಬೆಳಕಿನಷ್ಟೇ ಮಹತ್ವದ ಮತ್ತೊಂದು ವಸ್ತುವೆಂದರೆ 'ಗಾಳಿ'. ಗಾಳಿಯಿಲ್ಲದಿದ್ದರೆ ಯಾವುದೆ ಸಸ್ಯವಾಗಲಿ ಅಥವಾ ಜೀವಿಯಾಗಲಿ ಕ್ಷಣವೂ ಬದುಕಲು ಸಾಧ್ಯವಿಲ್ಲ. ಸಕಲ ಜೀವರಾಶಿಗಳ ಉಸಿರಾಟಕ್ಕೆ ವಾಯುವಿನ ಕೊರತೆಯಾದರೆ ಹೃದಯಕ್ರಿಯೆ ನಿಲ್ಲುವುದು. ಇದರಿಂದ ಇಡೀ ಜೀವಕುಲವೇ ನಿರ್ನಾಮವಾದಂತೆ. ಅಂತೆಯೇ ಸಸ್ಯಗಳೂ ಕೂಡ. ಪಶು-ಪಕ್ಷಿ ಹಾಗು ಮಾನವನಂತೆ ಮರಗಳೂ ಕೂಡ ಉಸಿರಾಡುತ್ತವೆ. ಈ ಉಸಿರಾಡುವಿಕೆಯಿಂದ ಅವು ಗಾಳಿ

ಯಲ್ಲಿನ ಇಂಗಾಲದ ಡೈಆಕ್ಸೈಡನ್ನು ಸೇವಿಸುತ್ತವೆ. ಹಾಗೂ ಹವೆಯಲ್ಲಿನ ಮನುಷ್ಯನಿರ್ಮಿತ ಕಲ್ಮಷವನ್ನು ತಿಂದು ನಮಗೆ ಶುದ್ಧಗಾಳಿಯನ್ನು ತಯಾರಿಸುತ್ತವೆ.

ನಮಗೆ ಗಾಳಿ, ಬೆಳಕಿನಂತೆ ಉಪಯುಕ್ತವಾದ ಇನ್ನೊಂದು ವಸ್ತುವೆಂದರೆ ನೀರು. ನೀರು ದೊರಕಲು ಮಳೆ ಬೇಕು. ಮಳೆ ಬೀಳಲು ಮರಗಳು ಬೇಕು. ಮರಗಳು ಬೆಳೆಯಲು ನೀರು ಬೇಕು.

ಸೂರ್ಯನ ಶಾಖದಿಂದ ನೀರು ಆವಿಯಾಗುವುದು. ಈ ಆವಿಯು ವಾಯುವಿನಲ್ಲಿ ಸೇರಿಕೊಳ್ಳುವುದು. ಹೀಗೆ ಸೇರಿಕೊಂಡ ಆವಿಯ ಸ್ವಲ್ಪ ಭಾಗ ಮಂಜಿನ ರೂಪದಲ್ಲಿ ಬೀಳುತ್ತದೆ. ಉಳಿದ ಮೋಡಗಳು ತಂಪಾದಂತೆ ಅವು ಭಾರವಾಗಿ ಮಳೆಯ ರೂಪವಾಗಿ ಭೂಮಿಗೆ ಬೀಳುತ್ತವೆ. ಇದುವೇ ನೀರು.

ಜೀವಿಗಳಾಗಲೀ, ಸಸ್ಯಗಳಾಗಲೀ ನೀರಿಲ್ಲದಿದ್ದರೆ ಬದುಕಿರಲಾರವು. ಎಲ್ಲಾ ಜೀವರಾಶಿಗಳ ದೈನಂದಿನ ಬದುಕು "ಜೀವಿಗಾಗಿ ಸಸ್ಯ, ಸಸ್ಯಕ್ಕಾಗಿ ಜೀವಿ" ಎನ್ನುವಷ್ಟರ ಮಟ್ಟಿಗೆ ನೀರನ್ನೆ ಹೆಚ್ಚು ಅವಲಂಬಿಸಿವೆ.

ಹೀಗೆ ಗಾಳಿ, ಬೆಳಕು, ನೀರು ಸಸ್ಯ ಹಾಗೂ ಜೀವರಾಶಿಗಳ ಜೀವಕ್ಕೆ ಎಷ್ಟು ಅಗತ್ಯವೋ, ಜೀವನಕ್ಕೂ ಅಷ್ಟೇ ಅಗತ್ಯ. ಸೂರ್ಯನ ಕಿರಣಗಳನ್ನು ಶೇಖರಿಸಿ, ವಿದ್ಯುತ್ ಅನ್ನು ಉತ್ಪಾದಿಸುತ್ತಿದ್ದೇವೆ. ಥರ್ಮಲ್ ಘಟಕಗಳನ್ನು ನಿರ್ಮಿಸಿದ್ದೇವೆ. ಸೂರ್ಯ ರಶ್ಮಿಯಿಂದ ಅಡಿಗೆ ತಯಾರಿಸುವುದು, ಹಣ್ಣು-ಹಂಪಲುಗಳನ್ನು ಒಣಗಿಸುವುದು. ಹೀಗೆ ಇನ್ನೂ ಹತ್ತಾರು ಸುಲಭ ವಿಧಾನಗಳನ್ನು ಅಳವಡಿಸಿಕೊಂಡಿದ್ದೇವೆ.

ಆದಿಯಿಂದಲೂ ಜೀವಜಂತುಗಳೆಲ್ಲ ಆಹಾರಕ್ಕಾಗಿ ಸಸ್ಯಗಳನ್ನೇ ಅವಲಂಬಿಸಿದ್ದವು. ಸಕಲ ಚರಾಚರ ಜೀವರಾಶಿಗಳೆಲ್ಲ ಮರಗಿಡಗಳ ಆಶ್ರಯ ಪಡೆದಿದ್ದವು. ಮಂಗನಂತಹ ಹಲವಾರು ಪ್ರಾಣಿಗಳು ಗಿಡಮರಗಳ ಮೇಲೆ ಜೀವಿಸುತ್ತಿದ್ದವು. ಹೀಗೆ 'ಮಂಗನಿಂದಲೇ ಮಾನವ' ಎಂಬುದಾಗಿ ಮಾನವ ವಿಜ್ಞಾನವು ಹೇಳಿದೆ.

'ಹೆತ್ತ ಕರುಳಿಗೆ ಗೊತ್ತು, ಹತ್ತು ಮರಗಳೇ ಸೊತ್ತು': ಇಂದು ನಾವು ನಾಗರಿಕತೆಯಲ್ಲಿ ಎಷ್ಟೇ ಮುಂದುವರಿದಿದ್ದರೂ ಸಹ ನಮಗೆ ಗಾಳಿ, ಬೆಳಕು, ನೀರು ಬೇಕೇಬೇಕು. ಮರಗಳೂ ಕೂಡ ಅಷ್ಟೇ ಅಗತ್ಯ. ನಮಗೆ ಆಹಾರ ಮಾತ್ರಕ್ಕಲ್ಲದೆ; ಹತ್ತಾರು ಅಗತ್ಯಗಳಿಗಾಗಿ ಮರಗಳನ್ನು ಅವಲಂಬಿಸಿದ್ದೇವೆ. ನಮ್ಮ ನೂರೊಂದು ಅವಶ್ಯಕತೆಗಳಿಗಾಗಿ ಅವುಗಳನ್ನು ಮೊರೆ ಹೊಕ್ಕಿದ್ದೇವೆ.

ಮರಗಳು ಮಾನವನಿಗೆ ನೀಡುವ ಪ್ರಮುಖ ವಸ್ತುಗಳು ಇಂತಿವೆ:—

೧) ಆಹಾರ
೨) ಆಮ್ಲಜನಕ
೩) ಆಶ್ರಯ
೪) ನೀರು
೫) ಮಣ್ಣು
೬) ನೆರಳು
೭) ಬಟ್ಟೆ
೮) ಔಷಧಿ
೯) ಮೇವು
೧೦) ಗೊಬ್ಬರ ಹಾಗೂ ಮರಮುಟ್ಟುಗಳು

ಇವುಗಳ ಬಗ್ಗೆ ಸ್ವಲ್ಪ ಮಾಹಿತಿ ಪಡೆಯೋಣ:—

ಮೊದಲನೆಯದಾಗಿ ಜೋಳ, ರಾಗಿ, ಭತ್ತ, ಗೋಧಿ ನವಣೆ ಇವು ಹುಲ್ಲಿನ ಜಾತಿಗೆ ಸೇರಿದ ಸಸ್ಯಗಳು. ಸಕಲ ಚರಾಚರ ಜೀವರಾಶಿಗಳೆಲ್ಲವೂ ಇವುಗಳಿಂದ ಆಹಾರವನ್ನು ಪಡೆಯುತ್ತಲಿವೆ. ಫಸಲು ಕೊಟ್ಟ ಬಳಿಕವೂ ಇವು ಒಣ ಅಥವಾ ಹಸಿ ಹುಲ್ಲಾಗಿ, ಮೇವಿನ ರೂಪದಲ್ಲಿ ದನಕರುಗಳಿಗೆ ಆಹಾರವಾಗಿವೆ ಹಾಗೂ ಗಿಡ-ಮರಗಳು ಹಣ್ಣು-ಹಂಪಲಗಳನ್ನೂ ತರಕಾರಿಗಳನ್ನೂ ಒದಗಿಸಿ ನಮ್ಮ ನಿತ್ಯದ ಬದುಕಿಗೆ ನೇರ ಆಹಾರವಾಗಿವೆ.

ಮರಗಳು ಉಸಿರಾಡುತ್ತವೆ. ಇದರಿಂದ ಗಾಳಿಯಲ್ಲಿರುವ ಕಲ್ಮಶವನ್ನು ತಿಂದು ಆಮ್ಲಜನಕವನ್ನು ತಯಾರಿಸುತ್ತವೆ. ಜೀವರಾಶಿಗಳೆಲ್ಲ ಬದುಕಿರಲು ಈ ಶುದ್ಧ ಹವೆಯು ಅತಿ ಮುಖ್ಯ.

ಮರಗಳು ಬದುಕಿರುವಾಗಲೂ ಮತ್ತು ಸತ್ತಮೇಲೂ ಕೂಡ ಆಶ್ರಯ ನೀಡುತ್ತವೆ. ಭೂಮಿಯ ಮೇಲಿನ ಕ್ರಿಮಿ-ಕೀಟ, ಹುಳ-ಹುಪ್ಪಟೆ, ಪಕ್ಷಿ-ಮೃಗ ಸಂತತಿಯೆಲ್ಲವೂ ಹಗಲೂ-ರಾತ್ರಿ ಆಶ್ರಯ ಪಡೆದಿವೆ. ನಮ್ಮ ಆಶ್ರಯಕ್ಕೂ ಸಹ ಮರಗಳು ಬೇಕೇಬೇಕು. ಪೀಠೋಪಕರಣಗಳಿಗಾಗಿಯೂ ಇತರ ಮರ ಮುಟ್ಟುಗಳಿಕಾಗಿಯೂ ನಾವು ಮರಗಳನ್ನು ಅವಲಂಬಿಸಿದ್ದೇವೆ.

ಚಲಿಸುವ ಮೋಡಗಳನ್ನು ಮರಗಳು ತಡೆಯುತ್ತವೆ. ಇವುಗಳಲ್ಲಿನ ನೀರಾವಿ ಇರುವ ಧೂಳಿನ ಕಣಗಳು ಒಂದಕ್ಕೊಂದು ಸಂಧಿಸಿ ದೊಡ್ಡ ಹನಿಗಳಾಗುತ್ತವೆ. ಈ ಘನೀಕರಣದಿಂದ ಅವು ಭಾರವಾಗಿ ಮಳೆ ರೂಪದಲ್ಲಿ ಬೀಳುವುದು.

ಸಾಕಷ್ಟು ಮರಗಳು ಬೆಳೆದಿರುವ ಪ್ರದೇಶಗಳಲ್ಲಿ ಉದುರಿದ ಎಲೆಗಳಿಂದ, ಗಿಡ-ಗಂಟೆ, ಪೊದೆಗಳಿಂದ ಒಂದು ಹೊದಿಕೆ ತಯಾರಾಗಿರುತ್ತದೆ. ಇದು ನೀರನ್ನು ಹಾಗೂ ಮಣ್ಣನ್ನು ಕೊಚ್ಚಿಹೋಗದಂತೆ ಮಾಡುತ್ತದೆ. ಮರಗಳ

ಉಸಿರಾಟದಿಂದ ಹಾಗೂ ಮಣ್ಣಿನಿಂದ ಮರಗಳ ಸುತ್ತಮುತ್ತ ಸದಾಕಾಲ ತಂಪು ಉಳಿಯುವುದು.

ನೀಲಗಿರಿ ಮರವು ಬಟ್ಟೆಯನ್ನು ಕೊಡುತ್ತದೆ. ಇನ್ನು ಕೆಲವು ಜಾತಿಯ ಸಸ್ಯಗಳು, ಗಿಡಗಳು ನಮ್ಮ ನಿತ್ಯದ ಬಳಕೆಗೆ ಔಷಧಿಗಳನ್ನು ಪೂರೈಸುತ್ತವೆ. ಶುಂಠಿ, ಮೆಣಸು, ಲವಂಗ, ಬಜೆ ಇವೆಲ್ಲ ನಮ್ಮ ದಿನಬಳಕೆಯ ಔಷಧಿಗಳು. ಮರಗಳ ಬೇರು, ಎಲೆ, ಕಾಯಿ ಮತ್ತು ತೊಗಟೆ ಮುಂತಾದವೆಲ್ಲ ಸರ್ವಶ್ರೇಷ್ಠ ಗಿಡಮೂಲಿಕೆ ಔಷಧಿಯಾಗಿ ಸಾಯುವವರನ್ನು ಬದುಕಿಸುತ್ತವೆ.

ಅಷ್ಟೇ ಅಲ್ಲ, ಧಾನ್ಯ ಕೊಡುವ ಜೋಳ, ರಾಗಿ, ಭತ್ತ, ಗೋಧಿ, ನವಣೆ ಮುಂತಾದ ಸಸ್ಯಗಳು ದನ-ಕರುಗಳಿಗೆ ಮೇವಿನ ರೂಪದಲ್ಲಿ ಆಹಾರವಾಗುತ್ತದೆ. ಕೆಲವು ಕಾಡಿನಲ್ಲಿರುವ ಸಸ್ಯಹಾರಿ ಪ್ರಾಣಿಗಳು ಜಿಂಕೆ, ಕಡವೆ, ಆನೆ ಮುಂತಾದವುಗಳು ಮರಗಳನ್ನೋ ಹಾಗೂ ಎಲೆಗಳನ್ನೋ ತಿಂದು ಬದುಕುತ್ತವೆ.

ಮರಗಳಿಂದ ಫಲವತ್ತಾದ ಗೊಬ್ಬರವನ್ನೂ ಪಡೆಯುತ್ತೇವೆ. ಕೊಳೆತ ಎಲೆಗಳಿಂದ ಬರುವ ಗೊಬ್ಬರವು ಅತೀ ಪೌಷ್ಠಿಕವಾದುದು. ಉತ್ತಮವಾದ ಗೊಬ್ಬರವನ್ನು ತಯಾರಿಸುವ ಕೆಲವು ಜಾತಿಯ ಗಿಡಗಳೂ ಉಂಟು.

ಹೀಗೆ ಮರಗಳು ನಮ್ಮ ಹತ್ತಾರು ಅಗತ್ಯಗಳನ್ನು ಈಡೇರಿಸಿವೆ. ನಮ್ಮ ಕೊನೆಯಿಲ್ಲದ ಆಸೆಗಳನ್ನು ಪೂರೈಸುತ್ತಿವೆ ಹಾಗೂ ಕಾಫಿ, ಟೀ, ರಬ್ಬರ್, ಸಾಬೂನು, ಎಣ್ಣೆ ಮತ್ತು ಕೊಬ್ಬರಿ ಮುಂತಾದ ಜೀವನಾವಶ್ಯಕ ವಸ್ತುಗಳೂ ಕೂಡ ಮರಗಳಿಂದಲೇ ದೊರೆಯುತ್ತವೆ. ಗಂಧದ ಎಣ್ಣೆ, ಅಂಟು, ಪೇಪರ್ ಮುಂತಾದ ಹಲವಾರು ವಸ್ತುಗಳು ಲಭಿಸುತ್ತವೆ.

ಆದುದರಿಂದ 'ಹೆತ್ತಕರುಳಿಗೆ ಮಾತ್ರ ಗೊತ್ತಾಗಬಹುದು. ಮುಂದಿನ ಪೀಳಿಗೆಗೆ ಹತ್ತು ಮರಗಳೇ ಸೊತ್ತು' ಎಂದು.

ನಮ್ಮ ಅನಂತ ವಿಶ್ವ ಅನೇಕ ರಹಸ್ಯಗಳ ನಿಕ್ಷೇಪ. ಈ ಪುಣ್ಯಭೂಮಿಯ ಒಡಲೊಳಗೆ ಅಗಾಧ ತೈಲವೂ ಹೇರಳ ಖನಿಜ ಸಂಪತ್ತೂ ತುಂಬಿಕೊಂಡಿದೆ. ಹಾಗೂ ಹೊರಭಾಗದಲ್ಲಿ ದಟ್ಟವಾದ ಅರಣ್ಯ ಸಂಪತ್ತೂ ಸಮೃದ್ಧ ಜಲ ಸಂಪತ್ತೂ ಆವರಿಸಿಕೊಂಡಿದೆ. ಇವೆಲ್ಲ ನಮಗೆ ಭೂದೇವಿ ಕರುಣಿಸಿದ ಕೊಡುಗೆಗಳು.

ಜನ್ಮಕೊಟ್ಟ ಈ ಭೂಮಿತಾಯಿಯ ಮಣ್ಣಿನ ಮಕ್ಕಳು ನಾವು. ನಮ್ಮ ಬದುಕಿನ ಹಸನುತನಕ್ಕೆ ಈ ಕೊಡುಗೆಗಳೇ ಅಗತ್ಯ. ಇವುಗಳಿಂದಲೇ ನಮಗೆ

ಜೀವ, ನಮ್ಮ ಜೀವನ. ನಮ್ಮ ಕ್ಷಣ-ಕ್ಷಣದ ಬದುಕೆಲ್ಲ ಇವುಗಳನ್ನೆ ಅವಲಂಬಿಸಿದೆ. ಒಬ್ಬಿಬ್ಬರಲ್ಲ, ಇಡೀ ಜೀವ ಜಾತಿಯೇ ಇವನ್ನು ಅವಲಂಬಿಸಿವೆ. ಇವು ಎಲ್ಲರ ಸೊತ್ತು. ಆದಕ್ಕೆ ಇವು ನಮ್ಮೆಲ್ಲರ ಜೀವನಾಡಿ. ಇವುಗಳನ್ನು ಹಿತ-ಮಿತವಾಗಿ ಉಪಯೋಗಿಸಬೇಕಾಗಿದೆ. ಕಾರಣ, ಇವು ದೇಶದ ಸಂಪತ್ತು. ಇವನ್ನು ರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ.

ಈ ಕೊಡುಗೆಗಳನ್ನು ಸುಖಿಸುವುದೊಂದೆ ನಮ್ಮ ಗುರಿಯಾಗಿರಬಾರದು. ಕಾಲಕ್ಕೆ ತಕ್ಕಂತೆ ಬೆಳೆಸುವ, ರಕ್ಷಿಸುವ ಹೊಣೆಯು ನಮ್ಮದಾಗಿರಬೇಕು. ಇದನ್ನು ಪ್ರೋಷಿಸುವ ಪ್ರಜ್ಞೆ ನಮ್ಮಲ್ಲಿ ಮೂಡಬೇಕು. ನಮಗೆ ತಿಳುವಳಿಕೆ ಹುಟ್ಟಬೇಕು. “ಇಂದಿನ ಸೊತ್ತು ಮುಂದಿನ ಸಂತಾನದ ಸಂಪತ್ತು” ಅನ್ನುವ ಭಾವನೆ ಹುಟ್ಟಬೇಕು. ಹಾಗೂ ಭಾವನೆಗಳನ್ನು ಕೆರಳಿಸುವ, ಸಮಯ ಪ್ರಜ್ಞೆ ಇರಬೇಕು. ಅಷ್ಟೇ ಅಲ್ಲ, ಪ್ರತಿಯೊಬ್ಬನು ಅಕ್ಷರ ಜ್ಞಾನವನ್ನು ಪಡೆಯಬೇಕು. ಈ ಅಕ್ಷರ ಜ್ಞಾನದಿಂದ ಸಸಿ ನೆಡುವ ಕ್ರಾಂತಿ ಆರಂಭಗೊಳ್ಳಬೇಕು. ಅಂದಾಗ ‘ಸಸಿ-ಸಸಿ ಸೇರಿ ಅರಣ್ಯ’ವಾದೀತು.

ನಿರ್ಜೀವ ಗ್ರಹ: ‘ಈ ಭೂಮಿಯ ಮೇಲೆ ಬದುಕಿರುವ ಪ್ರತಿಯೊಂದು ಜೀವಿಗೂ ಅಗತ್ಯವಾದುದನ್ನು ಪ್ರಕೃತಿಯು ಕೊಟ್ಟಿದೆ. ಆದರೆ ಅದು ನಮ್ಮ ದುರಾಸೆಗಳನ್ನು ಪೂರೈಸುವುದಕ್ಕಲ್ಲ.’ ಹೀಗೆಂದು ಹೇಳಿದವರು ಮಹಾತ್ಮಾ ಗಾಂಧೀಜಿಯವರು.

ಅಂದು ಎಂದೋ ಒಂದು ದಿನ ಅಂದ ಬಾಪೂಜಿಯವರ ಮಾತು ಇಂದು ಇಡೀ ಮನುಕುಲಕ್ಕೇ ಸವಾಲು. ಭೂಮಿಯ ಮೇಲಿನ ಬುದ್ಧಿಯುಳ್ಳ ಜನಾಂಗವು ಗಂಭೀರ, ಗಾಢವಾದ ಆಲೋಚನೆಯಲ್ಲಿ ಮುಳುಗಿದೆ. ಪ್ರಜ್ಞಾವಂತರ ತಲೆ ತಿನ್ನುತ್ತಿದೆ. ಈ ಮನುಕುಲವು ತುಳಿದ ದಾರಿ ಯಾವುದು? ಅನುಸರಿಸಿದ ಮಾರ್ಗ ಎಂಥಹದು? ಇದಕ್ಕೆ ಕಾರಣರಾರು? ಭವಿಷ್ಯತ್ತಿನಲ್ಲಿ ನಮ್ಮ ಪೀಳಿಗೆಯ ಗತಿ ಏನು?

ಆದರೆ ಈಗ ನಾವಿಂದು ನಮ್ಮ ಅಗತ್ಯವನ್ನು ಮೀರಿ ಬಳಸುತ್ತಿದ್ದೇವೆ. ಪ್ರಕೃತಿ ಮಾತೆಯು ದಯಪಾಲಿಸಿದ ಕೊಡುಗೆಗಳನ್ನು ಗೊತ್ತುಗುರಿಯಿಲ್ಲದೆ ಹುಚ್ಚಾಬಟ್ಟೆ ಉಪಯೋಗಿಸುತ್ತಿದ್ದೇವೆ. ಇದನ್ನು ಮಿತಿಗೊಳಿಸಬೇಕು.

ಇಂದು ಅಲ್ಪ ತೃಪ್ತಿಗೆ ಆತುರರಾಗಿ ಹಸಿರು ಅರಣ್ಯವನ್ನು ಕಡಿದು ಭೂದೇವಿಯನ್ನು ಬೆತ್ತಲೆಗೊಳಿಸಲಾಗುತ್ತಿದೆ. ಖನಿಜಗಳಿಗಾಗಿ ಗರ್ಭ ಹರಿದು ಅಂಗಹೀನ ಮಾಡಲಾಗುತ್ತಿದೆ. ತೈಲಕ್ಕಾಗಿ ದೇಹವನ್ನೇ ಕೊರೆಯಲಾಗುತ್ತಿದೆ. ಯುದ್ಧಾ-

ತದ್ವಾ ನೀರನ್ನು ಬಳಸಿ ಅವಳ ಚೈತನ್ಯವನ್ನು ಉಡುಗಿಸಲಾಗುತ್ತಿದೆ. ಕಾಡನ್ನು ನಾಶವಾಗಿಸಿ ಬರಡು ಗೊಳಿಸಲಾಗುತ್ತಿದೆ. ಬೆಟ್ಟಗಳನ್ನು ಬೋಳಿಸಿ ಬಂಜರು ಮಾಡಲಾಗುತ್ತಿದೆ. ಇವೆಲ್ಲ ನಿಂತಾಗ ಮಾತ್ರ ಸಮಾಜದ ಉದ್ಧಾರ ಆದೀತು.

'ಕಾಡುಗಳನ್ನು ಕಡಿಯುತ್ತಾ ಮುಂದುವರಿದದ್ದೇ ಆದರೆ, ಇನ್ನು ಕೆಲವೇ ವರುಷಗಳಲ್ಲಿ ಚಂದ್ರಗ್ರಹದಂತೆ, ನಮ್ಮ ಭೂಮಿಯೂ ಸಹ ನಿರ್ಜಲ, ನಿರ್ಜನ, ನಿರ್ವಾಯುವಾಗಿ ಕೊನೆಗೆ ನಿರ್ಜೀವ ಗ್ರಹವಾಗಿ ಪರಿಣಮಿಸೀತು' ಎಂದು ರಾಷ್ಟ್ರಕವಿ ಕುವೆಂಪು ಅವರು ನುಡಿದಿರುವ ಸೂಚನೆಯನ್ನು ಇಲ್ಲಿ ಸ್ಮರಿಸಿ ಕೊಳ್ಳಬಹುದು.

ಇಷ್ಟೇ ಅಲ್ಲ; 'ಮರಗಳ ಬುಡಕ್ಕೆ ಸತತ ಕೊಡಲಿಹಾಕುತ್ತಿರುವ ಮಾನವನು ತಾನಾಗಿಯೇ ತನ್ನ ಬುಡಕ್ಕೆ ಕೊಡಲಿ ಹಾಕಿಕೊಳ್ಳುತ್ತಿದ್ದಾನೆ.' ಹೀಗೆಂದೂ ಎಚ್ಚರಿಸಿದವರು ಅವರೇ.

ಹೀಗೆ ಮರಗಳ ಸತತ ನಾಶವು ಮುಂದುವರಿದರೆ ನಮಗೆ ತಿನ್ನಲು ತುತ್ತು ಕೂಳೂ ಕುಡಿಯಲು ಗುಟುಕು ನೀರೂ ದೊರಕದೆ 'ಬರ'ವನ್ನು ಬರಮಾಡಿ ಕೊಂಡಂತಾಗುತ್ತದೆ. ಅಲ್ಲದೆ ಮರಭೂಮಿಗಳೂ ಸಹ ರೂಪತಾಳುತ್ತವೆ. ವಿಶ್ವದ ಈಗಿನ ವಿಶಾಲ ಮರಭೂಮಿಗಳು ಹುಟ್ಟಿದ್ದು ಈ ಅರಣ್ಯನಾಶದ ಕಾರಣದಿಂದಲೇ ಎಂಬುದನ್ನು ಮರೆಯಬಾರದು.

ಮರಗಳ ನಾಶದಿಂದ ಮಳೆಯೇ ಇಲ್ಲದಂತಾಗಿ ಸಸ್ಯ ಹಾಗೂ ಜೀವರಾಶಿ ಉತ್ಪತ್ತಿಯು ಇಲ್ಲವಾಗುತ್ತದೆ. ಹವಾಮಾನದ ಏರು-ಪೇರಿನಿಂದ ಅನೇಕಾನೇಕ ಹೊಸ-ಹೊಸ ರೋಗ ಕಾಣಿಸಿಕೊಳ್ಳುತ್ತವೆ. ಸಂತತಿಯೂ ಕ್ರಮೇಣ ನಶಿಸುತ್ತಾ ಹೋಗಿ ಕೊನೆಗೆ ಏನೂ ಇಲ್ಲದಂತಾಗುತ್ತದೆ.

ಇಷ್ಟೆಲ್ಲ ಗಂಡಾಂತರಕ್ಕೆ ಪ್ರಮುಖ ಕಾರಣವೆಂದರೆ ನಮ್ಮಲ್ಲಿಯ ಅಂಧಕಾರ, ಅಜ್ಞಾನ, ಕೀಳುಮಟ್ಟದ ತಿಳುವಳಿಕೆ, ಅಕ್ಷರಜ್ಞಾನದ ಕೊರತೆ, ಇವೆಲ್ಲವು ಗಳನ್ನು ಮೊದಲು ನಿರ್ಮೂಲನ ಮಾಡಿದರೆ ಏನೆಲ್ಲವನ್ನು ಸಾಧಿಸಬಹುದು.

ಬಸವರಾಜು ಶ್ರೀರಂಗಪಟ್ಟಣ

ಆಡಿದ ಶಬ್ದಗಳ ಧ್ವನಿಯ ಬದಲು, ಮಾತುಗಾರರನ್ನೇ ನಿರೀಕ್ಷಿಸುವವ ವರಿಗೆ ನಿರಾಸೆಯಾಗುವುದು ಅತಿ ವಿರಳ.

—ಲಾವ್ಹೇಟರ್

ಪುಸ್ತಕ ವಿಮರ್ಶೆ

ಪೂಜಾ ವೃಕ್ಷಗಳು—ಲೇಖಕ: ಸತ್ಯಪತಿ ಆದ್ಯ; ಪ್ರಕಾಶಕರು: ಐ. ಬಿ. ಹೆಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು ೫೬೦ ೦೦೯. ೧೯೮೩, ಪುಟ ೫೨, ಬೆಲೆ: ೩ ರೂ,

ಪ್ರಕೃತ ಪುಸ್ತಕದಲ್ಲಿ ಶಮೀ, ಬಿಲ್ವ, ಅಡಿಕೆ, ತೆಂಗು, ಬೇವು, ಪಾರಿಜಾತ. ಬಾಳೆ ಮುಂತಾದ ಪೂಜಾವೃಕ್ಷಗಳನ್ನು ಕುರಿತ ಹದಿನಾರು ಪುಟ್ಟ ಲೇಖನಗಳಿವೆ. ಪ್ರತಿಯೊಂದು ಲೇಖನದಲ್ಲೂ ವೃಕ್ಷದ ಪುರಾಣಮೂಲ, ಇತಿಹಾಸ, ಪ್ರಯೋಜನವನ್ನು ಹೇಳಲಾಗಿದೆ. ಲೇಖನಗಳ ನಿರೂಪಣೆ ಸರಳವಾಗಿದ್ದು ಓದುಗರನ್ನು ರಂಜಿಸುವ ಆಕರ್ಷಕ ಶೈಲಿಯನ್ನು ಒಳಗೊಂಡಿದೆ.

ವೃಕ್ಷಗಳ ಸರಣಿಯನ್ನು ಕುರಿತ ಸಾಲುಗಳಿವು: ಸುತ್ತಲೂ ಹಚ್ಚಹಸುರಿನ ಗಿಡಗಳಿಗೆಲ್ಲ ನಾಗರಹಾವಿನಂತೆ ಸುತ್ತಿಕೊಂಡು ಸುಳಿಸುಳಿಯಾಗಿ ಮೇಲೆದ್ದ ಕುಡಿಯೆಲೆಯ ಒನಪುವೈಯ್ಯಾರಗಳ ಹಾವಭಾವಗಳ, ನಲಿವುನರ್ತನಗಳ ನೋಟವು ಎಂಥವನಿಗೂ ಚಿತ್ತಾಕರ್ಷಕವಾಗಿ ತೋರುತ್ತದೆ (ನಾಗವಲ್ಲಿ ಅಥವಾ ವೀಳ್ಯದೆಲೆ, ಪುಟ ೮). ಗಗನ ಚುಂಬಿಸುವಂತೆ ಈ ವೃಕ್ಷವು ಊರ್ಧ್ವಮುಖವಾಗಿ ಆಕಾಶಕ್ಕೆ ಚಾಮರ ಹಾಕುವಂತೆ ಬೆಳೆದು ನಿಂತಿರುತ್ತದೆ. ಹಸುರಿನ ಮಧ್ಯದಲ್ಲಿ ಬಂಗಾರದ ಸರಗಳಂತೆ ಹೊಳೆಯುವ ಅದರ ಹೂಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತವೆ. ಬಹು ಮುದ್ದಾದ ಅಡಿಕೆಯ ಗೊಂಚಲು ಗೊಂಚಲಿನಿಂದ ಕೂಡಿದ ಆ ವೃಕ್ಷದ ಸೌಂದರ್ಯವನ್ನು ವೀಕ್ಷಿಸುವುದು ಎಂದರೆ ರಸಿಕ ಜೀವನಕ್ಕೆ ಆಹ್ವಾನ ಕೊಟ್ಟಂತಾಗುತ್ತದೆ. (ಅಡಿಕೆ ಅಥವಾ ಪೂರ್ಣಫಲ, ಪು. ೧೨). ಮಳೆಗಾಲದಲ್ಲಿ ಈ ವೃಕ್ಷಕ್ಕೆ ಯೌವನವು ಬಂದಂತಾಗುತ್ತದೆ. ಹಚ್ಚ ಹಸುರಿನ ಈ ವೃಕ್ಷವು ಸಾಯಂಕಾಲವಾದೊಡನೆ, ನವಯೌವದ ಸುಂದರಿ ಧರಿಸಿದ ಮೂಗುತಿಯಂತೆ ಅರ್ಧ ಅರಳಿದ ಮೊಗ್ಗುಗಳು ಆ ವೃಕ್ಷದ ತುಂಬೆಲ್ಲ ಕಾಣಬರುತ್ತವೆ....ಸಮಗ್ರ ರಾತ್ರಿಯನ್ನೆಲ್ಲ ನಮ್ಮ ದಾಂಪತ್ಯ ಜೀವನದ ಸುಖವನ್ನೇ ವೀಕ್ಷಿಸುತ್ತಿರುವವರಿಂದ ಆ ಪುಷ್ಪಗಳ ಕೊನೆ ಕೆಂಪಾಗಿರಬಹುದೇ? ಎಂದು ಆವಳು ಯೋಚಿಸುತ್ತಾಳೆ (ಪಾರಿಜಾತ ವೃಕ್ಷ ಪು. ೩೮). ಭರದಿಂದ ಬೆಳೆದ ಬಾಳೆಗಿಡವನ್ನು ಕಂಡಾಗ ನವಯೌವನದಿಂದ ತುಂಬಿದ ನಾರಿಯನ್ನು ಕಂಡಂತಾಗುವುದು. ಅವಿವಾಹಿತ ತರುಣಿಯು ಪರಪುರುಷನನ್ನು

ಕಂಡಾಗ ದೇಹದ ಅಂಗಾಂಗಗಳನ್ನೆಲ್ಲ ಸೀರೆಯ ಸೆರಗಿನಿಂದ ಮುಚ್ಚಿಕೊಳ್ಳು ವಂತೆ ಈ ವೃಕ್ಷವು ಅನೇಕ ಪದರುಗಳಿಂದ ತನ್ನ ದೇಹವನ್ನು ಮುಚ್ಚಿಕೊಂಡಿದೆ (ಬಾಳೆಯ ಗಿಡ ಅಥವಾ ಕದಳೀ ವೃಕ್ಷ, ಪು. ೪೧). ಸಾಲುಸಾಲಾಗಿ ಬೆಳೆದು ನಿಂತ ಬಾಳೆಯ ಗಿಡಗಳ ಸೌಂದರ್ಯ ಅನುಪಮ ತುಂಬಿದ ವನವನ್ನು ಕಂಡಾಗ ಈ ವೃಕ್ಷವು ಪ್ರಕೃತಿ ಮಾತೆಗೆ ಚಾಮರ ಹಾಕುವಂತೆ ಭಾಸವಾಗು ತ್ತದೆ (ಅದೇ, ಪುಟ ೪೨).

ಓದುಗರ ಗಮನ ಸೆಳೆಯುವ ಸರಳ ವಾಕ್ಯಗಳಿವು: ಅದು (ವೀಳ್ಯದೆಲೆ) ಸೌಂದರ್ಯ ಹಾಗೂ ಪ್ರೇಮಭಾವವನ್ನು ದ್ವಿಗುಣಗೊಳಿಸುತ್ತದೆ. ಮುಖದ ಪರಿಮಳವನ್ನು ಹೆಚ್ಚಿಸುತ್ತದೆ, ಶರೀರದ ತೇಜಸ್ಸನ್ನು ವೃದ್ಧಿಪಡಿಸುತ್ತದೆ (ಪು. ೮). ಎಲೆ ಅಡಿಕೆಗಳ ಸೇವನೆಯಿಂದ ಕಫ ನಿವಾರಣೆಯಾಗುತ್ತದೆ. ರಕ್ತ ವೃದ್ಧಿಯಾಗುತ್ತದೆ, ಪಚನಶಕ್ತಿಯು ಬೆಳೆಯುತ್ತದೆ. ಮುಖದಲ್ಲಿ ಹೊಸ ಹೊಳಪು ಮೂಡುತ್ತದೆ (ಪು. ೧೬).

ನರಬಲಿಯಿಂದ ನಾರೀಕೇಲ ಸಮರ್ಪಣೆವರೆಗಿನ ಪುಟ್ಟ ಇತಿಹಾಸವಿದು: ಪ್ರಪಂಚದ ಬಹುಭಾಗದಲ್ಲಿ ತಮ್ಮ ಇಷ್ಟದೇವತೆಯ ಸಂತೋಷಾರ್ಥವಾಗಿ ನರಬಲಿ ಪಶುಬಲಿಯನ್ನು ಅರ್ಪಿಸುವ ಸಂಪ್ರದಾಯವಿದೆ. ಬುದ್ಧಾವಂತರದಲ್ಲಿ ಈ ಪಶುಬಲಿಯ ಪದ್ಧತಿಯೂ ಸಹ ಕಡಿಮೆಯಾಗತೊಡಗಿದೆ. ಇದಕ್ಕೆ ಮೂಲ ಕಾರಣ ಮಾನವನಂತೆ ಪಶುಪಕ್ಷಿಗಳಲ್ಲಿಯೂ ಸಹ ಜೀವವಿದೆ. ಹಿಂಸಾರೂಪ ವಾದ ಈ ಹತ್ಯದಿಂದ ಕ್ಷೇಮವಿಲ್ಲ ಎಂಬ ಅಹಿಂಸಾಭಾವದ ಭಾವನೆಯೇ ಮೂಲ ಕಾರಣ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಮಾನವನಿಗೆ ನಾರೀಕೇಲ ಫಲವು (ತೆಂಗು) ಕೈಗೆ ಸಿಕ್ಕಿತು. ಸಾಮಾನ್ಯವಾಗಿ ಇವರ ಮೈ ಮೇಲಿರುವ ನಾರಿನ ಹೊದಿಕೆಯನ್ನು ತೆಗೆದಾಗ ಮೇಲೆ ಅದು ಮುಂಡ ಅಥವಾ ರುಂಡ ದಂತೆ ಕಾಣುತ್ತದೆ. ಶಿರೋಭಾಗದಲ್ಲಿ ಕಣ್ಣುಗಳಂತಿರುವ ಮೂರು ಚುಕ್ಕೆಗಳು, ನಾಸಿಕದಂತಿರುವ ಗೆರೆ, ತಲೆಯ ಭಾಗದಲ್ಲಿರುವ ಜುಟ್ಟು, ಭರದಿಂದ ಅಪ್ಪಳಿಸಿ ದಾಗ ಅದು ಇಬ್ಭಾಗವಾಗಿ ರಕ್ತದಂತೆಯೇ ಅದರ ನೀರು ಹೊರ ಚೆಲ್ಲುವುದು. ಈ ಸಂಕೇತಗಳು ನರಬಲಿಯ ಸಂಕೇತ ಎಂಬ ಸಮಾಧಾನದಿಂದ ಮುಂದೆ ಈ ಫಲವು ಪ್ರತಿಯೊಂದು ದೇವಾಲಯಗಳಲ್ಲಿಯೂ ಸಮರ್ಪಿಸುವ ಪದ್ಧತಿಯು ಜಾರಿಯಲ್ಲಿದೆ (ಪು. ೩೦).

ಈ ಪುಸ್ತಕದಲ್ಲಿ ಸಾಂಸ್ಕೃತಿಕ ಮತ್ತು ಜಾನಪದ ವಿಚಾರಗಳನ್ನು ಬಿಂಬಿಸುವ ಸಾಲುಗಳಿವು. ಕಾರ್ತಿಕ ಮಾಸದಲ್ಲಿ ನವಮಿಯನ್ನು ಕೂಷ್ಮಾಂಡ ನವಮಿ

ಯೆಂದೇ ಕರೆಯುತ್ತಾರೆ....ಈ ಫಲವು ಯಜ್ಞಯಾಗಾದಿಗಳಲ್ಲಿಯೂ ನವಗ್ರಹ ಪೂಜೆಯಲ್ಲಿಯೂ ನೂತನ ಗೃಹ ನಿರ್ಮಾಣ ಕಾಲದಲ್ಲಿ ನಡೆಸುವ ಶಾಂತಿ ಯಜ್ಞ ಕಾಲದಲ್ಲಿಯೂ ದೃಷ್ಟಿದೋಷದಲ್ಲಿಯೂ ಬಳಸುವುದು ರೂಢಿಯಲ್ಲಿದೆ....ಸಕಲ ಪಾಪಗಳು ನಾಶವಾಗಿ ಒಳ್ಳೆಯ ಸಂತತಿಯು ಪ್ರಾಪ್ತವಾಗಬೇಕೆಂದು ಕಾರ್ತಿಕೆಯ ಪೌರ್ಣಿಮೆಯ ದಿನದಂದು ಕೂಷ್ಮಾಂಡ ವ್ರತವನ್ನು ಆಚರಿಸುತ್ತಾರೆ. ಈ ಬಳ್ಳಿಯನ್ನು ಲಕ್ಷ್ಮೀನಾರಾಯಣರ ಪ್ರವೇಶ ಎಂದು ಪೂಜೆ ಮಾಡುವವರು ಇದ್ದಾರೆ....ಅದನ್ನು (ಕೂಷ್ಮಾಂಡ) ಪೂಜಿಸಿ ಪೂಜ್ಯರಿಗೆ, ಹಿರಿಯರಿಗೆ ದಾನ ಕೊಡುವುದು ಸಂಪ್ರದಾಯದಲ್ಲಿದೆ. ಈ ಫಲದ ಬೀಜವನ್ನು ವೈಶಾಖ ಶುದ್ಧ ಚತುರ್ದಶಿಯ ದಿನ ಭೂಮಿಯಲ್ಲಿ ನೆಡುತ್ತಾರೆ. ಅದರ ಅಂಕುರಾರ್ಪಣೆಯಾದ ಆರು ತಿಂಗಳ ಅವಧಿಯಲ್ಲಿ ಸೌಭಾಗ್ಯದ, ಸರ್ವಕಾಮಪ್ರದ, ಪುತ್ರದಾ, ಧನದಾ, ಮೋಕ್ಷದಾ ಎಂದು ಕ್ರಮಪ್ರಕಾರವಾಗಿ ಈ ಹೆಸರುಗಳಿಂದ ಪೂಜೆ ಮಾಡುವ ಸಂಪ್ರದಾಯವಿದೆ. ವ್ರತ ಮುಗಿದೊಡನೆ ಸುವರ್ಣರೂಪದ ಬ್ರಹ್ಮನ ವಿಗ್ರಹ ಮಾಡಿ ಈ ಕೂಷ್ಮಾಂಡದೊಂದಿಗೆ ಇಟ್ಟು ದಾನ ಮಾಡುತ್ತಾರೆ. ಅನಂತರ ದುರ್ಗಾಂತರ್ಯಾಮಿಯಾದ ಶಿವನನ್ನು ಪ್ರಾರ್ಥಿಸಿ ಈ ವ್ರತವನ್ನು ಪರಿಸಮಾಪ್ತಿಗೊಳಿಸುತ್ತಾರೆ. ಪ್ರಾಚೀನ ಭಾರತದಲ್ಲಿ ಶಾಂತಿಗಾಗಿ, ಗ್ರಾಮರಕ್ಷಣೆಗಾಗಿ, ರೋಗರುಜಿನಗಳ ನಿವಾರಣೆಗಾಗಿ ದೃಷ್ಟಿ ಪರಿಹಾರಕ್ಕಾಗಿ ನರಬಲಿಯನ್ನು ಕೊಡುವ ಸಂಪ್ರದಾಯವಿತ್ತು. ಕಾಲಾಂತರದಲ್ಲಿ ಈ ಕೂಷ್ಮಾಂಡವು ಆ ಬಲಿಸ್ಥಾನವನ್ನು ತಾನು ಕಸಿದುಕೊಂಡು ಮಾನವ ಜೀವಿಯನ್ನು ಉಳಿಸಿಕೊಂಡು ಬಂದಿದೆ (ಕೂಷ್ಮಾಂಡ–ಬೂದುಕುಂಬಳಕಾಯಿ), ಪು. ೪೮).

ಪೂಜಾವೃಕ್ಷಗಳ ಮೂಲ, ಇತಿಹಾಸ, ಪ್ರಯೋಜನ, ಸಾಂಸ್ಕೃತಿಕ ಮತ್ತು ಜಾನಪದ ವಿಚಾರಗಳನ್ನೊಳಗೊಂಡ ಈ ಪುಟ್ಟಪುಸ್ತಕ ಓದುಗರಿಗೆ ಅನೇಕ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ.

ಆರ್. ರಾಮಕೃಷ್ಣ

* * *

ಮಂಗನ ಕಾಯಿಲೆ ಬಗೆಗಿನ ಮೂರು ಪುಸ್ತಕಗಳು

೧) ಮಂಗನ ಕಾಯಿಲೆ (ಕ್ಯಾಸನೂರ ಕಾಡಿನ ಕಾಯಿಲೆ) : ಡಾ|| ಹ. ರ. ಭಟ್ಟ, ಸದಾಶಯ ಪ್ರಕಾಶನ, ಮುಂಡಾಜೆ ದ. ಕ. ಮತ್ತು 'ಮಂಗನ ಕಾಯಿಲೆ' ಪರಿಹಾರ ಸಮಿತಿ, ಬೆಳ್ತಂಗಡಿ ದ.ಕ. ೧೯೮೪.

ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕ್ಯಾಸನೂರು

ಗ್ರಾಮ ಮತ್ತು ಸುತ್ತಮುತ್ತಲಿನ ಕಾಡುಗಳಲ್ಲಿ ಸಾಂಕ್ರಾಮಿಕವಾಗಿ ಮಂಗಗಳ ಸಾವಿನಿಂದ ಹಾಗೂ ಮನುಷ್ಯರಿಗೆ ಆದ ಕಾಯಿಲೆಯಿಂದ ಮಂಗನ ಕಾಯಿಲೆ ಬೆಳಕಿಗೆ ಬಂತು. ಈ ರೋಗದ ಬಗೆಗೆ ಜನರಲ್ಲಿರುವ ಅಜ್ಞಾನ, ಅಂಧಶ್ರದ್ಧೆಗಳನ್ನು ಹೋಗಲಾಡಿಸಲು ಸಾಹಿತ್ಯದಿಂದಲೂ ಸಾಧ್ಯ ಎಂಬುದನ್ನು ತೋರಿಸಲು ಈ ಪುಸ್ತಕವನ್ನು ಹೊರತರಲಾಗಿದೆ. ಕಾಡಿನಲ್ಲಿ ದುಡಿಯುವ ಓದುಬಾರದ, ಮುಗ್ಧ ಜನತೆಗೆ ಬೇರೆಯವರಿಂದ ತಿಳಿದಾದರೂ ಈ ಕಾಯಿಲೆಯ ಬಗ್ಗೆ ವಿವರಗಳು ಗೊತ್ತಾಗಲಿ ಎಂದು ಈ ಪುಸ್ತಕವನ್ನು ಉಚಿತ ವಿತರಣೆಗಾಗಿ ಅಚ್ಚು ಮಾಡಲಾಗಿದೆ. ಈ ಪುಸ್ತಕದಲ್ಲಿ ಕ್ಯಾಸನೂರು ಕಾಡಿನ ಕಾಯಿಲೆಯ ಹಿನ್ನೆಲೆ, ರೋಗ ಹರಡುವಿಕೆ, ರೋಗಲಕ್ಷಣ, ರೋಗ ಬಾರದಂತೆ ತಡೆಯಬಹುದಾದ ವಿಧಾನ ಮೊದಲಾದ ವಿವರಗಳನ್ನು ನೀಡಲಾಗಿದೆ. ಇಂತಹ ಉಪಯುಕ್ತ ಪುಸ್ತಕದಿಂದ ಜನಸಾಮಾನ್ಯರು ಇಂದಿನ ದಿನಗಳಲ್ಲಿ ಈ ಕಾಯಿಲೆ ಬಗೆಗೆ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದು ತುಂಬ ಅವಶ್ಯಕ. ಈ ನಿಟ್ಟಿನಲ್ಲಿ ಲೇಖಕರ ಮತ್ತು ಪ್ರಕಾಶಕರ ಕೊಡುಗೆ ಪ್ರಶಂಸಾರ್ಹ.

* * *

೨) ಮಂಗನ ಕಾಯಿಲೆ : ಡಾ॥ ಶಿವರಾಮ ಕಾರಂತ, ಸದಾಶಯ ಪ್ರಕಾಶನ ಮುಂಡಾಜೆ ದ.ಕ. ೧೯೭೪

ಡಾ॥ ಹ.ರ. ಭಟ್ಟರ ಮಂಗನ ಕಾಯಿಲೆ ಬಗೆಗಿನ ಪುಸ್ತಕದಲ್ಲಿರುವ ವೈಜ್ಞಾನಿಕ ವಿಷಯಗಳು ಎಲ್ಲರಿಗೂ ತಲಪುವುದಿಲ್ಲವೇನೋ ಎಂಬ ಸಂದೇಹದಿಂದ ಡಾ॥ ಕಾರಂತರು ತುಂಬ ಸರಳವಾದ ಭಾಷೆಯಲ್ಲಿ ಈ ಪುಸ್ತಕವನ್ನು ಬರೆದಿದ್ದಾರೆ. ರೋಗದ ಲಕ್ಷಣಗಳು, ರೋಗ ಪ್ರಸಾರ ಮುಂತಾದುವನ್ನು ಎಲ್ಲರಿಗೂ ಅರ್ಥವಾಗುವಂತೆ ವಿವರಿಸಿದ್ದಾರೆ. ಇಂತಹ ಜನೋಪಯೋಗಿ ಕೆಲಸದಲ್ಲಿ ಕಾರಂತರು ತೊಡಗಿ ತುಂಬ ಒಳ್ಳೆಯ ಕೆಲಸ ಮಾಡಿದ್ದಾರೆ.

* * *

ಮಂಗನ ಕಾಯಿಲೆ ಉಣ್ಣಿಗಳು ಮತ್ತು ಹತೋಟಿ : ಡಾ॥ ಹ. ರ. ಭಟ್ಟ, ಸದಾಶಯ ಪ್ರಕಾಶನ, ಮುಂಡಾಜೆ ದ. ಕ. ೧೯೮೪.

ಮಂಗನ ಕಾಯಿಲೆಗೆ ಕಾರಣವಾಗಿರುವ ಉಣ್ಣಿಗಳ ಜೀವನ ಚಿತ್ರ, ಉಣ್ಣಿಯ ಬಗೆಗಳು, ಉಣ್ಣಿಗಳು ಆಶ್ರಯಿಸುವ ಪ್ರಾಣಿಗಳು, ಉಣ್ಣಿಗಳಿಂದ ಹೇಗೆ ರೋಗ ಪ್ರಸಾರವಾಗುತ್ತದೆ? ರೋಗ ನಿಯಂತ್ರಣ, ಉಣ್ಣಿನಾಶಕಗಳ ಬಳಕೆ

ಯಿಂದ ಉಣ್ಣೆಗಳನ್ನು ನಾಶಪಡಿಸುವ ವಿವರಗಳನ್ನು ನೀಡಲಾಗಿದೆ. ಮೇಲಿನ ಎರಡು ಪುಸ್ತಕಗಳು ಕಾಯಿಲೆಯ ಬಗೆಗೆ ಹೆಚ್ಚಿನ ಮಾಹಿತಿಗಳನ್ನು ನೀಡಿದರೆ, ರೋಗ ಪರಿಹಾರದ ಕಡೆಗೆ ಗಮನ ಈ ಪುಸ್ತಕದಲ್ಲಿ ಹೆಚ್ಚು ಗಮನ ನೀಡಲಾಗಿದೆ. ರಾಷ್ಟ್ರೀಯ ವಿಷಾಣು ವಿಜ್ಞಾನ ಸಂಸ್ಥೆಯ ಉಪನಿರ್ದೇಶಕರಾಗಿ ಜನರಿಗೆ ಉಪಯೋಗವಾಗುವ ರೀತಿಯಲ್ಲಿ ಪುಸ್ತಕ ರಚಿಸಿರುವ ಡಾ|| ಭಟ್ಟರ ಕೃಷಿ ಅಭಿನಂದನಾರ್ಹವಾದುದು.

* * *

ಮರೀಚಿಕೆ—ತಾಳ್ತಜೆ ವಸಂತಕುಮಾರ, ಶೋಭಾ ಪ್ರಕಾಶನ, ಪುತ್ತೂರು, ಪುಟ iv + ೧೦೮, ೧೯೮೪.

ಸಮಾಜಶಾಸ್ತ್ರದ ವಿದ್ಯಾರ್ಥಿ ಶಂಕರ ತನ್ನ ಎಂ. ಫಿಲ್ ಡಿಗ್ರಿಯ ಅಧ್ಯಯನಕ್ಕಾಗಿ 'ಊರು' ಎಂಬ ಊರನ್ನು ಆರಿಸಿಕೊಂಡ. 'ಊರಿ'ನ ಸಾಹುಕಾರ ಪದಕಣ್ಣಾಯ. ಈತನಿಗೆ ಇಬ್ಬರು ಹೆಂಡತಿಯರು. ಕಿರಿಯ ಹೆಂಡತಿಯ ಮಗಳು ಗಂಡನನ್ನು ಬಿಟ್ಟು ಗಂಡನ ಗೆಳೆಯನೊಡನೆ ಓಡಿಹೋಗಿದ್ದಳು. ಬಟ್ಯ ಪದಕಣ್ಣಾಯನ ಮನೆಯಲ್ಲಿ ಕೆಲಸಕ್ಕಿದ್ದ. ಇವನ ಹೆಂಡತಿ ಅಂಗಾರೆ· ಅಂಗಾರೆ ವ್ಯಾಪಾರಿ ಪಕ್ರಬ್ಬನೊಡನೆ ಓಡಿಹೋಗಿ ಎರಡು ದಿನ ಪೇಟೆಯಲ್ಲಿದ್ದು ಮತ್ತೆ ಹಿಂದಿರುಗಿದ್ದಳು. ಆದರೂ ಏನೂ ನಡೆದೇ ಇಲ್ಲವೇನೋ ಎಂಬಂತೆ ಬಟ್ಯ ತನ್ನ ಹೆಂಡತಿಯೊಡನೆ ಜೀವನ ನಡೆಸುತ್ತಿದ್ದ. ಇನ್ನು ಪಕ್ರಬ್ಬ 'ಊರಿ'ಗೆ ಬಂದು ಸೇರಿ ತನ್ನ ವ್ಯಾಪಾರದಿಂದ ಮುಂದುವರಿದಿದ್ದ. ಮದುವೆಯನ್ನು ಮುಂದೂಡುತ್ತ ಪೇಟೆ ಹೆಣ್ಣುಗಳ ಮೂಲಕ ತನ್ನ ಲೈಂಗಿಕಾಪೇಕ್ಷೆಯನ್ನು ಪೂರೈಸಿಕೊಳ್ಳುತ್ತಿದ್ದ.


ಪದಕಣ್ಣಾಯ ತನ್ನ ಕೆಲಸದವನಾದ ಬಟ್ಯನಿಗೆ ಸರ್ಕಾರ ನೀಡಿದ್ದ ದರಖಾಸ್ತು ಜಮೀನನ್ನು ಲಪಟಾಯಿಸಿದ್ದ. ಒಮ್ಮೆ ತನ್ನ ಪಟ್ಟೆಚೀಟಿ ಕೇಳಿದಾಗ ಬಟ್ಯನಿಗೆ ಸಿಕ್ಕಿದ್ದು ಬರೀ ಏಟು ಅಷ್ಟೆ. ಶೋಷಿತವರ್ಗಕ್ಕೆ ಸರಕಾರ ನೀಡುವ ಸವಲತ್ತನ್ನು ದಕ್ಕಗೊಡದೆ ಅದರ ಉತ್ಪತ್ತಿಯನ್ನೆಲ್ಲ ತಾವೇ ಅನುಭವಿಸುವ ಶೋಷಕವರ್ಗ ಹಳ್ಳಿಗಳಲ್ಲಿ ಇರುವುದು ಸತ್ಯಸಂಗತಿ.

ಇಂತಹ ಹಳ್ಳಿಗೆ ಶಂಕರ ಬಂದ ಉದ್ದೇಶ ಸಾಂಸ್ಕೃತಿಕ ಅಧ್ಯಯನ. ಹಳ್ಳಿಯ ಜನ ಸರಳ, ಅವರ ಯೋಚನೆ ನೇರ ಎಂದು ತಿಳಿದಿದ್ದ ಈತನಿಗೆ ಆ ಹಳ್ಳಿಯ ಮುಗ್ಧೆ ಅಂಗಾರೆಯಂಥವರೂ ಅರ್ಥವಾಗುವುದಿಲ್ಲ. ಈ ಹಳ್ಳಿಯ ಜನರ

ಜೀವನ ಗೋಜಲುಗೋಜಲಾಗಿ, ಕೆದಕಿದಷ್ಟೂ ಅದು ನಿಗೂಢವಾಗಿಯೇ ಉಳಿಯುತ್ತದೆ ಶಂಕರನ ಪಾಲಿಗೆ. ಇನ್ನು ಸಾಂಸ್ಕೃತಿಕ ಅಧ್ಯಯನವಂತೂ ಈ ಸಂಶೋಧಕನ ಪಾಲಿಗೆ 'ಮರೀಚಿಕೆ'ಯಾಗಿಯೇ ಉಳಿಯುತ್ತದೆ.

ಚೊಚ್ಚಲಕೃತಿಯಲ್ಲೇ ವಸಂತಕುಮಾರರು ತಮ್ಮ ಪ್ರತಿಭೆಯನ್ನು ಚೆನ್ನಾಗಿ ತೋರ್ಪಡಿಸಿದ್ದಾರೆ.

ಎ. ಎಂ. ದೇವಿ



ಸಾರ್ವಜನಿಕ ಚರಿತ್ರೆ ಎಂದರೇನು? ಅಧಿಕಾರಕ್ಕಾಗಿ ಕಚ್ಚಾಡುವವರ ಸೋಲು-ಗೆಲುವು. ಆಸೆ-ನಿರಾಸೆ, ಗುಣಾವಗುಣ, ತಪ್ಪು-ಒಪ್ಪು ಹಾಗೂ ಕದನ ಕೋಲಾಹಲಗಳ ಚಿತ್ರಣವಷ್ಟೇ.

—ಪಾಲೇ

ತನಗೆ ಒಂದು. ಜನರಿಗೆ ಬೇರೊಂದು, ಮುಖ ಇಟ್ಟುಕೊಂಡು ಯಾವನೂ ಬಾಳಲಾರ; ಕೊನೆಗೆ ತನ್ನ ನಿಜವಾದ ಮುಖ ಯಾವುವೆಂದು ಅವನಿಗೇ ದಿಗಿಲಾಗುವುದು.

—ಹಾರ್ಥೀನ್

ಬಾಯಿ ಬಡಾಯಿ ಬಡಿಯುವವರೆಲ್ಲ ಇದಕ್ಕಾಗಿ ಹೆದರಲಿ; ಪ್ರತಿಯೊಬ್ಬ ಬೂಟಾಟಿಕೆಯವನೂ ಕತ್ತೆ ಎಂಬುದು ಪ್ರಕಟವಾಗಲೇಬೇಕು.

—ಷೇಕ್ಸ್‌ಪಿಯರ್

Reg. No. KRNN. 29 / WPP 6 | LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ನಳಚರಿತ್ರೆಯ ಸಂಗ್ರಹ

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಕನ್ನಡ ಪರಂಪರೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited & Printed by H. G. Ramaswamy Iyengar, Karnataka St
Adult Education Council Press and Published by Karnataka St
Adult Education Council, Mysore city (India)